ಸಂಪುಟ: 13 Volume | ಸಂಚಿಕೆ: 337 Issue | ಪುಟಗಳು 08 Pages | ಶನಿವಾರ 28 ಫೆಬ್ರವರಿ 2026 | ₹6 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

**ಬೆಳಗು**

ಕ್ರೀಡೆಯಲ್ಲಿ ಕೆಲವೊಮ್ಮೆ ನೀವು ಅಪಾಯಗಳನ್ನು ಆಹ್ವಾನಿಸಲೇಬೇಕು. ಆದರೆ ವಾಸ್ತವದ ಅಪಾಯಗಳನ್ನು ಎದುರಿಸಿ, ಹುಚ್ಚು ಅಪಾಯಗಳನ್ನಲ್ಲ.

–ಸರ್ಗಿ ಬುಬ್ಕಾ

ಸಂಪಾದಕರು: ರಮೇಶ ರೆಡ್ಡಿ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ವಿಶೇಷ ಚೇತನರಿಗೆ ತ್ರಿಚಕ್ರದ ಮೋಟಾರ್ ಸೈಕಲ್ 6

ರಸ್ತೆ ಅಭಿವೃದ್ಧಿ ನೆಪದಲ್ಲಿ ಶಾಲೆ ತೆರವು 7

ನಗರಿಯಲ್ಲಿ ಜೆಡಿಎಸ್ ಶಕ್ತಿ ಪ್ರದರ್ಶನ 8

**ಮಲ್ಲಮ್ಮ ನುಡಿ**

**ಯುಗಾದಿ ವಿಶೇಷಾಂಕ- 2026**

ಸದಾ ಹೊಸತನಕ್ಕೆ ಹೆಸರಾದ ಪ್ರತಿಷ್ಠಿತ ಪ್ರಾದೇಶಿಕ ಮಲ್ಲಮ್ಮನುಡಿ ದಿನಪತ್ರಿಕೆಯು ಈ ಬಾರಿ ಯುಗಾದಿ ವಿನೂತನ ವಿಶೇಷಾಂಕ–2026 ಹೊರತರಲಿದೆ. ಇದರ ಸಿದ್ಧತೆಯು ಈಗಾಗಲೇ ಆರಂಭವಾಗಿದೆ. ಇದರ ಪ್ರಯುಕ್ತ ವಿಶೇಷ ಸಂಚಿಕೆಗಾಗಿ ಲೇಖಕರಿಂದ ಬರಹಗಳನ್ನು ಆಹ್ವಾನಿಸುತ್ತಿದೆ.

**ಲೇಖಕರು ಪಾಲಿಸಬೇಕಾದ ಸೂಚನೆಗಳು**

- ನನ್ನೂರು ಹಲವು ವೈಶಿಷ್ಟ್ಯಗಳ ತವರು: 200 ಪದ ಮಿತಿ
- ನನ್ನ ಜೀವನದ ಟರ್ನಿಂಗ್ ಪಾಯಿಂಟ್: 200 ಪದಮಿತಿ
- ನಾನು ಪ್ರೀತಿಸಿದೆ. ಆದರೆ ಆಕೆಗೆ ಹೇಳಲೇ ಇಲ್ಲ, ಸ್ವ ಅನುಭವ: 200 ಪದ ಮಿತಿ
- ಕಥೆಗಳು: 600 ಪದಮಿತಿ
- ಯಾವುದೇ ವಿಷಯ ಕುರಿತ ಲಲಿತ ಪ್ರಬಂಧ: 300 ಪದ
- ಕವನ 24 ಸಾಲು ಮೀರದಿರಲಿ.

► ಲೇಖನಗಳನ್ನು ಕಳುಹಿಸಲು ಅಂತಿಮ ದಿನಾಂಕ: 5–03–2026

► ಬರಹಗಳ ಆಯ್ಕೆಯಲ್ಲಿ ಸಂಚಿಕೆ ಸಂಪಾದಕರ ತೀರ್ಮಾನವೇ ಅಂತಿಮ.

ಈ ಮೇಲ್: mallammanudi@gmail.com

## ಕೇಜ್ರಿವಾಲ್ ಸೇರಿ 23 ಜನ ಖುಲಾಸೆ

- ಮಲ್ಲಮ್ಮ ನುಡಿ ವಾರ್ತೆ ದೆಹಲಿ

ಅರವಿಂದ್ ಕೇಜ್ರಿವಾಲ್ ಮತ್ತು ಮಾಜಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಸೇರಿದಂತೆ 23 ಮಂದಿಗೆ ಕೇಸ್ನಿಂದ ವಿನಾಯಿತಿ ನೀಡಿದ ಕೋರ್ಟ್ ಆದೇಶ ಹೊರಡಿಸಿದೆ.

ಈ ಆದೇಶವನ್ನು ವಿಶೇಷ ನ್ಯಾಯಾಧೀಶ ಜಿತೇಂದ್ರ ಸಿಂಗ್ ಅವರು ಹೊರಡಿಸಿದ್ದು, ಆರೋಪಿಗಳ ವಿರುದ್ಧ ಅಭಿಯೋಜನಾ ಸಂಸ್ಥೆಯ ಸಾಕ್ಷ್ಯಗಳಿಗೆ ಬೆಂಬಲವಾಗುವ ಯಾವುದೇ ವಸ್ತುನಿಷ್ಠ ಸಾಕ್ಷ್ಯ ದೊರಕಿಲ್ಲವೆಂದು ತಿಳಿಸಿದ್ದಾರೆ. ದೆಹಲಿಯ ಅಬಕಾರಿ ನೀತಿ ಸಂಬಂಧಿತ ಭ್ರಷ್ಟಾಚಾರ ಪ್ರಕರಣದಲ್ಲಿ ಸಿಬಿಐ ಸಲ್ಲಿಸಿದ್ದ ಆರೋಪಪಟ್ಟಿಯನ್ನು ಪರಿಗಣಿಸಲು ನ್ಯಾಯಾಲಯ ನಿರಾಕರಿಸಿತು. ದೆಹಲಿಯ ಹಿಂದಿನ ಆಪ್ ಸರ್ಕಾರದ



ಈಗಿನ ಬಿಜೆಪಿ ಸರ್ಕಾರ ರದ್ದುಪಡಿಸಿರುವ ಅಬಕಾರಿ ನೀತಿಯ ಜಾರಿಗೆ ಸಂಬಂಧಿಸಿದ ಭ್ರಷ್ಟಾಚಾರದ ಆರೋಪಗಳ ಕುರಿತು ಸಿಬಿಐ ತನಿಖೆ ನಡೆಸಿ ಕೇಜ್ರಿವಾಲ್ ಮತ್ತು ಸಿಸೋಡಿಯಾ ಬಂಧಿತರಾಗಿದ್ದರು. ಈ ಪ್ರಕರಣಗಳಲ್ಲಿ, ಜಾರಿ ನಿರ್ದೇಶನಾಲಯದ ಅರ್ಜಿಗಳನ್ನು ದೆಹಲಿ ನ್ಯಾಯಾಲಯವು ಜನವರಿಯಲ್ಲಿ ಅರವಿಂದ್ ಕೇಜ್ರಿವಾಲ್ ವಿರುದ್ಧ ಕೇಸನ್ನು ವಜಾಗೊಳಿಸಿತ್ತು.

## ಹೈಕೋರ್ಟ್ ತೀರ್ಪಿಗೆ ಸುಪ್ರೀಂ ಮಧ್ಯಂತರ ತಡೆ

- ಮಲ್ಲಮ್ಮ ನುಡಿ ವಾರ್ತೆ ದೆಹಲಿ

ಬಾಗೇಪಲ್ಲಿಯ ಎನ್.ಎಸ್ ಸುಬ್ಬಾರೆಡ್ಡಿ ಶಾಸಕ ಸ್ಥಾನ ಅಸಿಂಧುಗೊಳಿಸಿ ಹೈಕೋರ್ಟ್ ನೀಡಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ ಮಧ್ಯಂತರ ತಡೆ ನೀಡಿದೆ.

ಎದುರಾಳಿ, ಚುನಾವಣಾ ಆಯೋಗ ಮತ್ತು ಸಂಬಂಧಪಟ್ಟ ವ್ಯಕ್ತಿಗಳಿಗೆ ಅಫಿಡವಿಟ್, ಕೌಂಟರ್ ಅಫಿಡವಿಟ್ ಸಲ್ಲಿಸಲು ಸುಪ್ರೀಂ ಕೋರ್ಟ್ 6 ವಾರಗಳ ಕಾಲಾವಕಾಶ ನೀಡಿದೆ. ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ (ಭಾಗ್ಯನಗರ) ವಿಧಾನಸಭಾ ಕ್ಷೇತ್ರದ ಶಾಸಕ ಸ್ಥಾನದಿಂದ ಅನರ್ಹಗೊಳಿಸಿದ ಹೈಕೋರ್ಟ್ ಆದೇಶ ಪ್ರಶ್ನಿಸಿ ಕಾಂಗ್ರೆಸ್ನ ಎಸ್.ಎನ್. ಸುಬ್ಬಾರೆಡ್ಡಿ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.



ಸುಬ್ಬಾ ರೆಡ್ಡಿ ಮೇಲ್ಮನವಿಯ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ನ್ಯಾಯಮೂರ್ತಿ ಜಾಯ್ಮಲ್ಯ ಬಾಗ್ಚಿ ಪೀಠವು ವಿಚಾರಣೆ ನಡೆಸಿ ಈ ತೀರ್ಪು ಕೊಟ್ಟಿದೆ.

# ಪಟ್ಟಕ್ಕೆ ಪಾರ್ಟಿ ಪಾಲಿಟಿಕ್ಸ್

### ಶಾಸಕ ಬಾಲಕೃಷ್ಣ ಅವರ ಔತಣ ಕೂಟದಲ್ಲಿ ರಾಜಕೀಯ ಚರ್ಚೆ | ಡಿಸಿಎಂಗೆ ಸಿಎಂ ಪಟ್ಟಕ್ಕೆ ಪಟ್ಟು

- ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆಯ ಬಿರುಗಾಳಿ ಜೋರಾಗಿದೆ. ಕುರ್ಚಿಯ ಕದನ ದಿನಕ್ಕೊಂದು ಟ್ವಿಸ್ಟ್ ಪಡೆಯುತ್ತಿದೆ. ಈ ಬಗ್ಗೆ ಚರ್ಚೆ ಬಜೆಟ್ ಮಂಡನೆ ಸಂದರ್ಭದಲ್ಲಿ ಮತ್ತೆ ಮುನ್ನಲೆಗೆ ಬಂದಿದೆ. ಹಲವು ನಾಯಕರು ಬಹಿರಂಗ ಹೇಳಿಕೆಗಳ ನಡುವೆ ಕಳೆದ ರಾತ್ರಿ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಬೆಂಬಲಿಗ ಶಾಸಕರು ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಉನ್ನತ ಮಟ್ಟದ ಔತಣಕೂಟ ಸಭೆ ನಡೆಸಿರುವುದು ಮತ್ತೊಂದು ಟ್ವಿಸ್ಟ್‌ಗೆ ಕಾರಣವಾಗಿದೆ.

**40 ಶಾಸಕರಿಂದ ಸಭೆ:** ಮಾಗಡಿ ಕ್ಷೇತ್ರದ ಶಾಸಕ ಎಚ್‌ಸಿ ಬಾಲಕೃಷ್ಣ ಹುಟ್ಟುಹಬ್ಬದ ನೆಪದಲ್ಲಿ ಡಿಕೆ ಶಿವಕುಮಾರ್ ಬೆಂಬಲಿಗ ಶಾಸಕರೆಲ್ಲರೂ ಸೇರಿ ಸಭೆ ನಡೆಸಿದ್ದು, ಅದರಲ್ಲಿ ನಾಯಕತ್ವದ ಬದಲಾವಣೆ ಕುರಿತ ಗಂಭೀರ ಚರ್ಚೆ ನಡೆದಿದೆ. ಡಿಕೆ ಶಿವಕುಮಾರ್ ಬೆಂಬಲಿಗರು 60ಕ್ಕೂ ಹೆಚ್ಚು ಶಾಸಕರನ್ನು ಸಂಪರ್ಕಿಸಿದ್ದರು. ಅವರಲ್ಲಿ ಬರೋಬ್ಬರಿ 40 ಮಂದಿ ಶಾಸಕರು ಔತಣಕೂಟದಲ್ಲಿ ಭಾಗವಹಿಸಿದ್ದಾರೆ ಎಂದು ಮೂಲಗಳು ಖಚಿತ ಪಡಿಸಿವೆ

**ಉಳಿದವರು ಎಲ್ಲಿಗೆ..?:** 20 ಮಂದಿ ಶಾಸಕರು ಮದುವೆ, ವಿದೇಶ ಪ್ರವಾಸ ಸೇರಿದಂತೆ ವಿವಿಧ ಕಾರಣಗಳಿಂದ ಗೈರಾಗಿದ್ದಾರೆ ಎನ್ನಲಾಗಿದೆ. ಗೈರಾದ ಶಾಸಕರನ್ನು ಮುಂದಿನ ಸಭೆಗೆ ಸೇರಿಸಲು ಬೆಂಬಲಿಗರು ಯೋಜನೆ ರೂಪಿಸಲಾಗುತ್ತಿದ್ದಾರೆ ಎಂದು ತಿಳಿದುಬಂದಿದೆ.



### ಡಿಕೆಶಿಗೆ ಬೇಕು ಮುಖ್ಯಮಂತ್ರಿ ಪಟ್ಟ..!

ಡಿನ್ನರ್‌ಪಾರ್ಟಿ ನೆಪದಲ್ಲಿ ಸಿಎಂ ಸ್ಥಾನ ಕುರಿತಂತೆ ಗಂಭೀರ ಚರ್ಚೆ ನಡೆದಿದೆ. ಹೈಕಮಾಂಡ್ ನಿರ್ಧಾರ ಕೈಗೊಳ್ಳದಿದ್ದರೆ ಭವಿಷ್ಯದಲ್ಲಿ ಗಟ್ಟಿಹೆಜ್ಜೆ ಇಡಬೇಕೆಂದು ನಾಯಕರು ನಿರ್ಧರಿಸಿದ್ದಾರೆ. 2028ರ ವಿಧಾನಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ನಾಯಕತ್ವ ಗೊಂದಲಕ್ಕೆ ಅಂತಿಮ ತೆರೆ ಎಳೆಯಬೇಕು ಎಂದು ನಾಯಕರು ಹೇಳಿದ್ದಾರೆ ಎಂದು ತಿಳಿದು ಬಂದಿದೆ.

### ಯಾರೂ ಏನೂ ಮಾಡಬೇಡಿ..!

ರಾಜ್ಯ ಕಾಂಗ್ರೆಸ್ ಕುರ್ಚಿ ಕದನ ಕುರಿತಂತೆ ಪ್ರತಿಕ್ರಿಯಿಸಿರುವ ಡಿಸಿಎಂ ಶಿವಕುಮಾರ್ ಅವರು ತಮ್ಮ ಬೆಂಬಲಿಗರಿಗೆ ಗುರಿ ಮಾಡಿ, ಯಾರೂ ದಿಲ್ಲಿಗೆ ಹೋಗಬೇಡಿ. ಯಾವುದೇ ಕಾರಣಕ್ಕೂ ನನ್ನಪರವಾಗಿ ಪ್ರತಿಕ್ರಿಯೆ ಕೊಡಬೇಡಿ. ನನ್ನ ಬಗ್ಗೆ ಗೌರವ ಇದ್ದರೆ ಬಾಯ್ಮುಚ್ಚಿಕೊಂಡು ಸುಮ್ಮನಿರಿ ಅಷ್ಟೇ ಸಾಕು ಎಂದು ಎಚ್ಚರಿಸಿದ್ದಾರೆ. ಆದರೂ ಅವರೆಲ್ಲಾ ಶಾಸಕರು ದಿನಕ್ಕೊಂದು ಹೇಳಿಕೆ ಕೊಡುತ್ತಲೇ ಇದ್ದಾರೆ..

### ಹೈ ಮೇಲೆಯೇ ಒತ್ತಡದ ತಂತ್ರ

ಪಾರ್ಟಿ ವೇಳೆ ಭವಿಷ್ಯದ ರಾಜಕೀಯ ಕುರಿತು ವಿವರವಾದ ಚರ್ಚೆ ನಡೆದಿದ್ದು, ಹೈಕಮಾಂಡ್ ಮೇಲೆ ಒತ್ತಡವ ತಂತ್ರ ರೂಪಿಸಲಾಗಿದೆ. ವರಿಷ್ಠರು ಸ್ಪಷ್ಟ ನಿರ್ಧಾರ ಕೈಗೊಳ್ಳಲೇಬೇಕೆಂದು ಶಾಸಕರು ಪಟ್ಟು ಹಿಡಿದಿದ್ದು, ಡಿಕೆಶಿ ಬೆಂಬಲಿಗರು ಶೀಘ್ರ ದೆಹಲಿ ಭೇಟಿ ಮಾಡುವ ಸಾಧ್ಯತೆ ಇದೆ. 70ಕ್ಕೂ ಹೆಚ್ಚು ಶಾಸಕರು ದೆಹಲಿಗೆ ತೆರಳಿ ಹೈಕಮಾಂಡ್ ಬಳಿ ಚರ್ಚಿವ ಕುರಿತು ಚಿಂತಿನ ಮಂಥನ ನಡೆಸಿದ್ದಾರೆ ಎನ್ನಲಾಗಿದೆ.

### ಪಾರ್ಟಿಯಲ್ಲಿ ನಡೆದದ್ದು ಏನು?

ನಾವೆಲ್ಲಾ ಸೇರಿ ಕಾಂಗ್ರೆಸ್ ಪಕ್ಷದ ಭವಿಷ್ಯ, 2028ರ ಚುನಾವಣೆ ಬಗ್ಗೆ ಚರ್ಚೆ ಮಾಡಿದ್ದೇವೆ. ಸಿಎಂ ಬದಲಾವಣೆ ಪದೇ ಪದೆ ಚರ್ಚೆಗೆ ಬರುತ್ತಿದೆ. ಜನರಲ್ಲಿ ಗೊಂದಲ ಮೂಡುತ್ತದೆ, ಇದೇ ಪರಿಸ್ಥಿತಿ ಮುಂದುವರಿದರೆ ಪಕ್ಷ ಅಧಿಕಾರಕ್ಕೆ ಬರೋದ ಕಷ್ಟ. ಹೈಕಮಾಂಡ್ ಇದಕ್ಕೆ ಅಂತಿಮವಾದ ರೂಪವನ್ನು ಎಳೆಯಬೇಕೆಂದು ಶಾಸಕರೆಲ್ಲಾ ಸೇರಿ ಒತ್ತಾಯ ಮಾಡಲು ತೀರ್ಮಾನ ಕೈಗೊಂಡಿದ್ದಾರೆ ಎಂದು ಮೂಲಗಳು ಖಚಿತಪಡಿಸಿವೆ.

## ಪ್ರಗತಿ ಪರಿಶೀಲನಾ ಸಭೆ

**ಬೆಂಗಳೂರು:** ನಗರ ಪಾಲಿಕೆ ಆಯುಕ್ತ ಡಾ. ರಾಜೇಂದ್ರ ಅವರು ಶಾಸಕ ಎಸ್.ಸುರೇಶ್ ಕುಮಾರ್ ಅವರ ಸಮ್ಮುಖದಲ್ಲಿ ವಿಧಾನಸಭಾ ವ್ಯಾಪ್ತಿಯ ವಾರ್ಡ್‌ಗಳಿಗೆ ಸಂಬಂಧಿಸಿದ ಸಮಸ್ಯೆ ಹಾಗೂ ಅಭಿವೃದ್ಧಿ ಕಾರ್ಯಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿದ್ದಾರೆ. ಸಾರ್ವಜನಿಕರಿಗೆ ಪಾಲಿಕೆ ವತಿಯಿಂದ ಅಗತ್ಯ ಸೌಲಭ್ಯಗಳು ವಿಳಂಬವಿಲ್ಲದೆ ದೊರಕುವಂತಾಗಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶಿಸಿದ್ದಾರೆ. ಅಧಿಕಾರಿಗಳು ಕ್ರಮಬದ್ಧವಾಗಿ ಕಂದಾಯ ಸಂಗ್ರಹ ಕಾರ್ಯವನ್ನು ನಿರ್ವಹಿಸಿ, ವಸೂಲಿ ಮಾಡುವಂತೆ ಸೂಚಿಸಿದ್ದಾರೆ.

## ಇನ್ನೊವೇಶನ್ ಲ್ಯಾಬ್ ಸ್ಥಾಪನೆಗೆ ಕ್ರಮ

**ಬೆಂಗಳೂರು:** ವಿದ್ಯಾರ್ಥಿಗಳಲ್ಲಿ ವಿಜ್ಞಾನ ಅಭ್ಯಾಸವನ್ನು ಉತ್ತೇಜಿಸಿ ವಿಜ್ಞಾನ ಕ್ಷೇತ್ರದಲ್ಲಿ ಆಸಕ್ತಿ ಮೂಡಿಸಲು ರಾಜ್ಯ ಸರ್ಕಾರವು 60 ಕ್ಕೂ ಹೆಚ್ಚು ವಸತಿ ಶಾಲೆಗಳಲ್ಲಿ 6 ಕೋಟಿ ರೂಪಾಯಿ ವೆಚ್ಚದಲ್ಲಿ ಇನ್ನೊವೇಶನ್ ಲ್ಯಾಬ್‌ಗಳನ್ನು ಸ್ಥಾಪಿಸಲು ಕ್ರಮ ಕೈಗೊಂಡಿದೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್ ಎಸ್ ಬೋಸರಾಜು ತಿಳಿಸಿದ್ದಾರೆ. ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಆಯೋಜಿಸಿದ್ದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮವನ್ನು ಜವಹರಲಾಲ ನೆಹರೂ ತಾರಾಲಯದಲ್ಲಿ ಉದ್ಘಾಟಿಸಿದ ಬಳಿಕ ಅವರು ಮಾತನಾಡಿದ್ದಾರೆ.



## ಮೇ ತಿಂಗಳಲ್ಲಿ ಯಡಿಯೂರಪ್ಪಗೆ ಅಭಿನಂದನೆ

- ಮಲ್ಲಮ್ಮ ನುಡಿ ವಾರ್ತೆ ಶಿಕಾರಿಪುರ

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ನಾಡಿನ ಗಣ್ಯರೆಲ್ಲಾ ಸೇರಿ ಮೇ ತಿಂಗಳಲ್ಲಿ ಅಭಿನಂದನಾ ಕಾರ್ಯಕ್ರಮ ಮಾಡಲು ನಿರ್ಧರಿಸಲಾಗಿದೆ ಎಂದು ಮಾಜಿ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ತಿಳಿಸಿದ್ದಾರೆ.



ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಯಡಿಯೂರಪ್ಪ ಅವರು ಡಿಸಿಎಂ ಆಗಿ, ಮುಖ್ಯಮಂತ್ರಿ ಆಗಿ 50 ವರ್ಷ ರಾಜಕೀಯದಲ್ಲಿ ತೊಡಗಿಸಿಕೊಂಡು ನಾಡನ್ನು ಕಟ್ಟಿ ಬೆಳೆಸಿದವರು. ಇಂಥವರು 100 ವರ್ಷಗಳ ಕಾಲ ಬಾಳಲಿ ಎಂದು ನಾನು ಆ ಭಗವಂತನ ಹತ್ತಿರ ಪ್ರಾರ್ಥನೆ ಮಾಡುತ್ತೇನೆ ಎಂದು ಹೇಳಿದ್ದಾರೆ. ಮೇ ತಿಂಗಳಲ್ಲಿ ಚಿತ್ರದುರ್ಗದಲ್ಲಿ ಕಾರ್ಯಕ್ರಮ ಮಾಡಲು ನಿರ್ಧರಿಸಲಾಗಿದೆ. ನಾಡಿನ 30 ಜಿಲ್ಲೆಗಳಿಂದ ಬರುವ ಜನರಿಗೆ ಅನುಕೂಲ ಆಗಲಿದೆ ಎಂದಿದ್ದಾರೆ.

## ಕರುನಾಡಿಗೆ ಸೇನಾಧಿಪತಿಯೇ ಧೈರ್ಯ

- ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ಯುದ್ಧ ಗೆಲ್ಲೋಕೆ ಸೈನ್ಯದ ಗಾತ್ರ ಮುಖ್ಯವಲ್ಲ, ಸೇನಾಧಿಪತಿಯ ಧೈರ್ಯ ಮುಖ್ಯ ಕರ್ನಾಟಕದ ಪಾಲಿಗೆ ಆ ಧೈರ್ಯ ಮತ್ತು ದಾರಿ ಎರಡೂ ಕುಮಾರಣ್ಣನೇ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅಭಿಪ್ರಾಯಪಟ್ಟಿದ್ದಾರೆ.

ಕಿತ್ತೂರು ಕರ್ನಾಟಕದ ವಿಜಯಪುರದಲ್ಲಿ ಆಯೋಜಿಸಿದ್ದ ಜನತಾ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿ, 2013ರಲ್ಲಿ ವಿಧಾನಸಭಾ ಚುನಾವಣೆ ಬರುತ್ತೆ, ಕಾಂಗ್ರೆಸ್ ನಡೆ ಕೃಷ್ಣ ಕಡೆ ಅಂತ ಮಾಡಿದ್ರು. ನೀರು ತರುತ್ತೇವೆ ಅಂತ ಆಣೆ ಪ್ರಮಾಣ ಮಾಡಿ, ವರ್ಷಕ್ಕೆ 10 ಸಾವಿರ ಕೋಟಿ, ಐದು ವರ್ಷಕ್ಕೆ 50 ಸಾವಿರ ಕೋಟಿ ಇಡುತ್ತೇವೆ ಎಂದು ಸುಳ್ಳು ಭರವಸೆ ನೀಡಿ ಮಾತು ತಪ್ಪಿದ್ದಾರೆ. ಅವರು ಮಾಡಿದ ಪಾಪದ ಫಲವೇ 15 ಸಾವಿರ ಕೋಟಿಗಿದ್ದ ಪ್ರಾಜೆಕ್ಟ್ 87 ಸಾವಿರ ಕೋಟಿಗೆ ತಲುಪಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.



## ಅಕ್ರಮ ಪಡಿತರ ಅಕ್ಕಿ ಜಪ್ತಿ

- ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ

ಸರ್ಕಾರದ ವಿವಿಧ ಯೋಜನೆಗಳ ಅಡ್ಡಿಯಲ್ಲಿ ಬಡವರಿಗೆ ನೀಡುವ ಪಡಿತರ ಅಕ್ಕಿಯನ್ನು ಕಡಿಮೆ ಬೆಲೆಗೆ ಖರೀದಿಸಿ ಹೆಚ್ಚಿನ ಬೆಲೆಗೆ ಕಾಳಸಂತೆಯಲ್ಲಿ ಮಾರಾಟ ಮಾಡಲು ನೆಹೆರು ವೃತ್ತದ ಬಳಿಯ ಜಮಾದರ್ ಟ್ರೇಡರ್ಸ್ ಅಂಗಡಿಯಲ್ಲಿ ಸಂಗ್ರಹಿಸಿಟ್ಟ 25ಕ್ವಿಂಟಾಲ್ ಅಕ್ಕಿಯನ್ನು ಆಹಾರ ನಿರೀಕ್ಷಕಿ ನಮ್ರತಾ ಬಲಾದೆ ಮತ್ತು ಪಿಎಸ್‌ಐ ಬಸಲಿಂಗಪ್ಪ ಗೋಧಿಹಾಳ ಸಿಬ್ಬಂದಿಗಳೊಂದಿಗೆ ದಾಳಿ ಮಾಡಿದ್ದಾರೆ. ಒಬ್ಬ ವ್ಯಕ್ತಿಯನ್ನು ಬಂಧಿಸಲಾಗಿದೆ. ಇರ್ಫಾನ್ ಜಮಾದರ್ ಅಂಗಡಿಯಲ್ಲಿ ಅಕ್ರಮವಾಗಿ ಸಂಗ್ರಹಿಸಿಟ್ಟ 25 ಕ್ವಿಂಟಾಲ್ ಅಂದಾಜು 85 ಸಾವಿರ ರೂ. ಮೌಲ್ಯದ ಪಡಿತರ ಅಕ್ಕಿಯನ್ನು ಜಪ್ತಿ ಮಾಡಲಾಗಿದೆ. ಚಿಟಗುಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



## ವಚನ ವಿವಿ ಸ್ಥಾಪನೆಗೆ ಮನವಿ



- ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಬೀದರ್ ಜಿಲ್ಲೆಯಲ್ಲಿ ವಚನ ಗ್ಲೋಬಲ್ ವಿಶ್ವವಿದ್ಯಾಲಯ ಸ್ಥಾಪಿಸುವ ನಿಟ್ಟಿನಲ್ಲಿ ಭಾಲ್ಕಿ ಮಠದ ನಾಡೋಜ ಡಾಕ್ಟರ್ ಬಸವಲಿಂಗ ಪಟ್ಟದೇವರು ಅವರ ನೇತೃತ್ವದ ಮಠಾಧೀಶರ ತಂಡ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಗೃಹ ಕಚೇರಿ ಕಾವೇರಿಯಲ್ಲಿ ಭೇಟಿಯಾಗಿ ಚರ್ಚಿಸಿ ಮನವಿ ಸಲ್ಲಿದ್ದಾರೆ. ಈ ಸಂದರ್ಭದಲ್ಲಿ ಗದಗಿನ ಪೂಜ್ಯ ಶ್ರೀ ಜಗದ್ಗುರು ಡಾ. ತೋಟದ ಸಿದ್ದರಾಮಯ್ಯಗಳು, ಪೂಜಶ್ರೀ ಶಿವಾನಂದ ಮಹಾಸ್ವಾಮಿಗಳು ವಿರಕ್ತಮಠ ಹಂದಿಗುಂದ, ಭಾಲ್ಕಿಯ ಕಿರಿಯ ಶ್ರೀಗಳು, ಕುಂಬಳಗೋಡು ಬಸವ ಮಂಟಪದ ಶ್ರೀಗಳು ಹಾಗೂ ಸಚಿವರಾದ ಎಂ. ಬಿ. ಪಾಟೀಲ್ , ಈಶ್ವರ ಖಂಡ್ರೆ, ಶಾಸಕ ಬಿ.ಆರ್.ಪಾಟೀಲ್ ಉಪಸ್ಥಿತರಿದ್ದರು.

## ರೆಸಾರ್ಟ್‌ಗಳ ಲೈಸನ್ಸ್ ರದ್ದು

- ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ತಾಲೂಕಿನ ಬಂಡಿಹರ್ಲಾಪುರ ಗ್ರಾ.ಪಂ.ವ್ಯಾಪ್ತಿಯ ಬಸಾಪುರ, ನಾರಾಯಣಪೇಟೆ ಮತ್ತು ರಾಜಾರಾಮಪೇಟೆ ಗ್ರಾಮಗಳಲ್ಲಿ, ಶಿವಪುರ ಗ್ರಾ. ಪಂ. ವ್ಯಾಪ್ತಿಯ ಶಿವಪುರ ಮತ್ತು ಅಯೋಧ್ಯ ಗ್ರಾಮಗಳಲ್ಲಿ ಅನಧಿಕೃತವಾಗಿ ನಡೆಯುತ್ತಿರುವ ರೆಸಾರ್ಟ್‌ಗಳಿಗೆ ಗ್ರಾ.ಪಂ. ನೀಡಿರುವ ಪರವಾನಗೆಯನ್ನು ಮತ್ತು ವಿದ್ಯುತ್ ಸಂಪರ್ಕಕ್ಕಾಗಿ ಜೆಸ್ಕಾಂ ಇಲಾಖೆಯವರಿಗೆ ನೀಡಿರುವ ನಿರಾಕ್ಷೇಪಣಾ ಪತ್ರವನ್ನು ಹಿಂಪಡೆಯಲಾಗಿದೆ. ಕಂದಾಯ, ಗ್ರಾಮೀಣಾಭಿವೃದ್ಧಿ, ಅರಣ್ಯ, ಜೆಸ್ಕಾಂ, ಪೊಲೀಸ್, ಅಬಕಾರಿ ಇಲಾಖೆ ಮತ್ತು ಪ್ರವಾಸೋದ್ಯಮ ಇಲಾಖೆಯ ಅಧಿಕಾರಿಗಳು ಜಂಟಿಯಾಗಿ ಕಾರ್ಯಾಚರಣೆ ಕೈಗೊಂಡು ರೆಸಾರ್ಟ್ ಗಳ ವಿದ್ಯುತ್ ಸಂಪರ್ಕವನ್ನು ಕಡಿತ ಮಾಡಿ, ರೆಸಾರ್ಟ್ ಗಳನ್ನು ಮುಚ್ಚಿಸಲಾಗಿದೆ.



**ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರು ಸಿಎಂ ಆಗಿ ಮಾಡಿರುವ ಕಾರ್ಯಗಳು ಎಲ್ಲರಿಗೂ ಸ್ಫೂರ್ತಿ: ಸಂಸದ ಬಸವರಾಜ ಬೊಮ್ಮಾಯಿ**

# ಹುಟ್ಟು ಹಬ್ಬದ ಪ್ರಯುಕ್ತ ಹಣ್ಣು ವಿತರಣೆ



• ಮಲ್ಲಮ್ಮ ನುಡಿ ಹಗರಿಬೊಮ್ಮನಹಳ್ಳಿ

ಹಗರಿಬೊಮ್ಮನಹಳ್ಳಿಕ್ಷೇತ್ರದ ಭಾರತೀಯ ಜನತಾ ಪಾರ್ಟಿ ಮಂಡಲದ ನಗರ ಘಟಕದ ವತಿಯಿಂದ,

ಹಿರಿಯ ಮುತ್ಸದ್ದಿ ರೈತಪರ ನಾಯಕರು ಮಹಿಳೆಯರ ಸಬಲೀಕರಣಕ್ಕೆ ಭಾಗಲಕ್ಷ್ಮಿ ಮತ್ತು ಬೈಸಿಕಲ್ ಸೈಕಲ್ ರೂವಾರಿಗಳು, ಸೈಕಲ್ ಮುಖಾಂತರ ರಾಜ್ಯವನ್ನು ಸುತ್ತಾಡಿ ಪಕ್ಷ ಸಂಘಟನೆ ಮಾಡಿ ಕರ್ನಾಟಕದಲ್ಲಿ ಭಾರತೀಯ ಜನತಾ ಪಾರ್ಟಿಯನ್ನು ಅಧಿಕಾರಿಕ್ಕೆ, ತರಲು ಹಗಲು ರಾತ್ರಿ ಶ್ರಮಿಸಿದ ಮಾಜಿ ಮುಖ್ಯಮಂತ್ರಿಗಳಾದ ಬಿ ಎಸ್ ಯಡಿಯೂರಪ್ಪರವರು 84 ವರ್ಷಗಳ ಪೂರೈಸಿ 85ನೇ ವರ್ಷಕ್ಕೆ ಕಾಲಿಡುತ್ತಿರುವ ಸಂದರ್ಭದಲ್ಲಿ ದೇವರು ಆರೋಗ್ಯ ಐಶ್ವರ್ಯ ಕೊಟ್ಟು ಕಾಪಾಡಲಿ ಎಂದು ಹಾರೈಸುತ್ತಾ. ಹುಟ್ಟು ಹಬ್ಬದ ಶುಭಾಶಯಗಳು ಕೋರುತ್ತಾ.

ಈ ಸಂದರ್ಭದಲ್ಲಿ ಹಗರಿಬೊಮ್ಮನಹಳ್ಳಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಮಂಡಲ ಅಧ್ಯಕ್ಷರಾದ ಕೆ ಎಸ್ ಪ್ರಕಾಶ್ ಅಣ್ಣನವರ ನೇತೃತ್ವದಲ್ಲಿ ರೋಗಿಗಳಿಗೆ ಹಣ್ಣು ಬ್ರೆಡ್ ಹಾಲು ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿಯಾದ ವಿ. ಕನಕಪ್ಪ, ಮಂಡಲದ ಉಪಾಧ್ಯಕ್ಷರು ಪುರಸಭೆ ಸದಸ್ಯರಾದ ಜೋಗಿ ಹನುಮಂತಪ್ಪ, ಮಂಡಲದ ಪ್ರಧಾನ ಕಾರ್ಯದರ್ಶಿಯಾದ ಕೋಗಳಿ ಹನುಮಂತಪ್ಪ, ನಗರ ಘಟಕದ ಅಧ್ಯಕ್ಷರಾದ ಮಂಜುನಾಥ್, ಎಸ್ ಸಿ ಮೋರ್ಚಾದ ಅಧ್ಯಕ್ಷರಾದ ದಶಮಾಪುರ ಮರಿಯಪ್ಪ ಹೆಚ್, ಯುವ ಮೋರ್ಚಾದ ಅಧ್ಯಕ್ಷರಾದ ಮಂಜುನಾಥ್ ಗಜಪುರ, ರೈತ ಮೋರ್ಚಾದ ಅಧ್ಯಕ್ಷರಾದ ಅಶೋಕ, ಬುಳ್ಳಪ್ಪ ಉಪ್ಪರಗಟ್ಟಿ, ಭೀಮಪ್ಪ ಮಾಲ್ವಿ, ರಮೇಶ್ ಶಿವಾನಂದನಗರ, ರಾಚಪ್ಪ, ಗೋಣೆಪ್ಪ ಕೆ, ಸಂದೀಪ್, ಮದ್ದನಿ ಸ್ವಾಮಿ, ದೊಡ್ಡಬಸಪ್ಪ ಬಾಚಿಕೊಂಡನಹಳ್ಳಿ, ಮಂಜುನಾಥ ಸ್ವಾಮಿ, ಅನೇಕ ಹಿರಿಯ ಮುಖಂಡರುಗಳು, ಮಂಡಲದ ಮತ್ತು ಎಲ್ಲಾ ಮೋರ್ಚಾದ ವಿವಿಧ ಪದಾಧಿಕಾರಿಗಳು ಅನೇಕ ಕಾರ್ಯಕರ್ತರು ಭಾಗವಹಿಸಿ ಯಶಸ್ವಿಗೊಳಿಸಿದರು.

# ಸಂಸ್ಥೆಯಿಂದ ಕುಡಿವ ನೀರಿನ ವ್ಯವಸ್ಥೆ



• ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ಪಟ್ಟಣದ ಶ್ರೀಸಾಯಿ ವಟವೃಕ್ಷ ಸಂಸ್ಥೆ ವತಿಯಿಂದ ಬೇಸಿಗೆ ಕಾಲ ಪ್ರಾರಂಭದ ನಿಮಿತ್ತ ಶುಕ್ರವಾರ ಸಾರ್ವಜನಿಕರಿಗೆ ಉಚಿತ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಿಲಾಯಿತು.

ಈ ಸಂದರ್ಭದಲ್ಲಿ ನಿವೃತ್ತ ಪ್ರಾಚಾರ್ಯರಾದ ಎಸ್.ಎನ್. ಶಿವಣಕರ ಮಾತನಾಡಿ,

ಸಮಾಜ ಸೇವಾ ಕ್ಷೇತ್ರದಲ್ಲಿ ಆಡಳಿತದ ಮೇಲ್ವಿಚಾರಣೆಯೊಂದಿಗೆ ಹಾಗೂ ವಿವಿಧ ಸೇವೆ ಮಾಡುವುದರೊಂದಿಗೆ, ಕಾರ್ಯನಿರ್ಮಾಣ ಮಾಡುತ್ತಿರುವ ಶ್ರೀಸಾಯಿ ವಟ ವೃಕ್ಷ ಸೇವಾ ಸಂಸ್ಥೆ ಅವರು ಇಂದು ಕಮಲನಗರ್ ಗ್ರಾಮದಲ್ಲಿ ಅಗತ್ಯವಿರುವ ರೈತರು, ವಿದ್ಯಾರ್ಥಿಗಳು ಮತ್ತು ಊರಿನ ನಿವಾಸಿಗಳು ಮತ್ತು ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಉಚಿತವಾಗಿ ಕೊಡುವುದರ ಮೂಲಕ ಸಾಮಾಜಿಕ ಕಾರ್ಯಕ್ಕೆ ನಾಂದಿ ಹಾಡಿದ್ದಾರೆ ಎಂದು ಹೇಳಿದರು. ಪ್ರತಿ ಕುಟುಂಬಕ್ಕೂ ಸುಲಭವಾಗಿ ಶುದ್ಧ ನೀರಿನ ಪ್ರವೇಶವು ಸುದೀರ್ಘ ಆರೋಗ್ಯ, ಶಿಕ್ಷಣ ಮತ್ತು ಜೀವನ ಮಟ್ಟದ ಸುಧಾರಣೆಗೆ ಅವಶ್ಯಕವಾಗಿದೆ ಎಂದು ಬಣ್ಣಿಸಿದರು.

ಈ ಕಾರ್ಯಕ್ರಮವನ್ನು ಸಂಸ್ಥೆಯ ಅಧ್ಯಕ್ಷರಾದ ವಿನೋದ ಬಿರಾದಾರ ಚಾಲನೆ ನೀಡಿ ಮಾತನಾಡಿದರು, ಬೇಸಿಗೆ ಕಾರಣ ದೇಹಕ್ಕೆ ಪದೆ ಪದೆ ನೀರಿನ ಅವಶ್ಯಕತೆ ಇರುತ್ತದೆ. ಮಾನವೀಯ ನೆಲೆಯಲ್ಲಿ ಜನರ ಬಾಯಾರಿಕೆ ನೀಗಿಸಲು ವ್ಯವಸ್ಥೆ ಮಾಡಲಾಗಿದೆ ಹಾಗೂ ಬೆಸಿಗೆ ಮುಗಿಯುವವರೆಗೂ ಉಚಿತ ಕುಡಿಯುವ ನೀರಿನ ಸೇವೆ ಮುಂದುವರೆಯಲಿದೆ ಎಂದು ತಿಳಿಸಿದರು.

ನಂತರ ಕಾರ್ಯದರ್ಶಿಗಳಾದ ನಿತೀನ ಶಿವಣಕರ ಮಾತನಾಡಿ, ಈ ಶ್ರೀಸಾಯಿ ವಟ ವೃಕ್ಷ ಸೇವಾ ಸಂಸ್ಥೆ ಮುಂಬರುವ ಹಂತದಲ್ಲಿ ಪರಿಸರ ಅರಿವು ಕಾರ್ಯಕ್ರಮಗಳು, ಶಾಲಾ ಮಕ್ಕಳಿಗೆ ಶುದ್ಧ ಜಲ ಕುರಿತು ತರಬೇತಿ ಸಹ ಜಾರಿಗೆ ಬರುತ್ತವೆ ಹಾಗೂ ಇದೀಗ ಬೇರೆ ಹಳ್ಳಿಗಳಲ್ಲಿ ಸಹ ಹೀಗೆ ನೀರು, ಶಿಕ್ಷಣ ಮತ್ತು ಪರಿಸರ ಸೇವೆಗಳ ಕಾರ್ಯಕ್ರಮಗಳನ್ನು ಮುಂದುವರಿಸುವುದು ನಿರೀಕ್ಷಿಸಲಾಗಿದೆ.

ಈ ಸಂದರ್ಭದಲ್ಲಿ ಶರಣ ಸುಲಾಕೆ, ಆನಂದ ಸುಲಾಕೆ,, ಗ್ರಾಮ ಪಂಚಾಯತ ಸದಸ್ಯರಾದ ಬಾಲಾಜಿ ತೇಲಂಗ್, ಗುಂಡಪ್ಪಾ ದಾನಾ, ಮಡಿವಾಳಪ್ಪಾ ಮಹಾಜನ, ಮಹಾದೇವ ಮಡಿವಾಳ, ಪ್ರವೀಣ ಪಾಟಿಲ, ವೀರಶೆಟ್ಟಿ ಮಹಾಜನ , ಪ್ರತೀಕ ಜಲಸಿಂಗೆ, ಪ್ರಮೋದ ಮಹಾಜನ ಹಾಗೂ ಅನೇಕರು ಹಾಜರಿದ್ದರು.

# ಧನರಾಜ ರಾಂಪುರೆಗೆ ಬೀಳ್ಕೊಡುಗೆ ಸಮಾರಂಭ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ



ಶಾಂತಿ ವರ್ಧಕ ಶಿಕ್ಷಣ ಸಂಸ್ಥೆಯ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ (ಐ.ಟಿ.ಐ) ಸುಮಾರು 40 ವರ್ಷ ಸುದೀರ್ಘ ಕಾಲ ಸೇವೆ ಸಲ್ಲಿಸಿದ ಕಿರಿಯ ತರಬೇತಿ ಅಧಿಕಾರಿಗಳಾದ ಶ್ರೀ ಧನರಾಜ್ ವಿ. ರಾಂಪುರೆ ಅವರು ವಯೋನಿವೃತ್ತಿ ಹೊಂದುತ್ತಿದ್ದು, ಅವರ ಗೌರವಾರ್ಥವಾಗಿ ಫೆಬ್ರವರಿ 28, 2026ರಂದು ಬೆಳಿಗ್ಗೆ 11:00 ಗಂಟೆಗೆ ಸಂಸ್ಥೆಯ ಕೈಗಾರಿಕಾ ತರಬೇತಿ ಸಂಸ್ಥೆ ಕಾಲೇಜಿನ ಆವರಣದಲ್ಲಿ ಬೀಳ್ಕೊಡುಗೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ.

ಕಮಲನಗರ ತಾಲೂಕಿನ ಡಿಗ್ಗಿ ಗ್ರಾಮದವರಾದ ಇವರು 20ನೇ ವಯಸ್ಸಿನಲ್ಲಿ 1986ರಲ್ಲಿ ಸೇವೆ ಪ್ರಾರಂಭ ಮಾಡಿರುತ್ತಾರೆ. ಇವರಿಂದ ಮಾರ್ಗದರ್ಶನ ಪಡೆದ ಸಾವಿರಾರು ವಿದ್ಯಾರ್ಥಿಗಳು ಇಂದು ವಿವಿಧ ನಗರಗಳಲ್ಲಿ ಉನ್ನತ ಹುದ್ದೆಯಲ್ಲಿ ಕೆಲಸ ಮಾಡಿ ತಮ್ಮ ಬದುಕು ಕಟ್ಟಿಕೊಂಡಿದ್ದಾರೆ.

ಇವರ ಸಾರ್ಥಕ 40 ವರ್ಷದ ಶೈಕ್ಷಣಿಕ ಕ್ಷೇತ್ರದ ಸಾಧನೆಗೆ ಎಸ್.ವಿ.ಇ ಸಂಸ್ಥೆಯವರು ಹಾಗೂ ಡಿಗ್ಗಿ ಗ್ರಾಮಸ್ಥರು ಮತ್ತು ಕುಟುಂಬ ವರ್ಗದವರಿಗೂ ಅವರಿಗೆ ಅಭಿನಂದನೆಗಳು ಸಲ್ಲಿಸಿ ಸಾಮಾಜಿಕ ಜೀವನಕ್ಕೆ ಶುಭ ಹಾರೈಸಿದರೆ.


ಕರ್ನಾಟಕ ಸರ್ಕಾರ
**ನಗರಸಭೆ ಕಾರ್ಯಾಲಯ, ಶಹಾಪುರ**
ಜಿ: ಯಾದಗಿರಿ. ಕರ್ನಾಟಕ ರಾಜ್ಯ.
Website:www.shahapurcity.gov.in e-mail: itstaff_ulb_shahapur@yahoo.com,

ಕ್ರ.ಸಂ/ನಸಶ/ಟೆಂಡರ್/ಜಾ.ಪ್ರ./2025-26 ದಿನಾಂಕ: 27.02.2026

**ಇ-ಪೆಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ :**

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999-2000ರ ಪ್ರಕಾರ ಪಾರದರ್ಶಕತೆ ಕಾಯ್ದೆ-2000 ನಿಯಮದಂತೆ 2025-26ನೇ ಸಾಲಿನ ನಗರಸಭೆ ನಿಧಿ ಅನುದಾನದಲ್ಲಿ ತೆಗೆದುಕೊಂಡ ಕಾಮಗಾರಿಯ ಅರ್ಹಗುತ್ತಿಗೆದಾರರಿಗೆ/ಏಜೇನ್ಸಿರವರು ಸ್ಟಾಂಡರ್ಡ ಟೆಂಡರ್ ಡಾಕ್ಯೂಮೆಂಟ್ ನಿಬಂಧನೆಗೊಳಪಟ್ಟಂತೆ ಇ-ಪೆಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ www.kppp.karnatak.gov.in ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ.

Name of works: Construction of Compound Wall to Dr. BR Ambedkar Statue in front of Old Bus Stand of Shahapur City. Indent Number:DMA/2025-26/BD/WORK IN DENT 55785. ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): 11.50. ಇ. ಎಂ. ಡಿ (ರೂ.ಗಳಲ್ಲಿ): As per E-Portal. ಕಾಮಗಾರಿ ಅವದಿ: 03 ತಿಂಗಳು. ಗುತ್ತಿಗೆ ದಾರರ ದರ್ಜೆ: 3ನೇ ದರ್ಜೆ ಮೇಲ್ಪಟ್ಟು.

1) ಟೆಂಡರ್ ಪ್ರಾರಂಭ ದಿನಾಂಕ:27.02.2026 2) ಭರ್ತಿ ಮಾಡಿದ ಟೆಂಡರಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 7.03.2026 ಸಾಯಂಕಾಲ 5:30 ಘಂಟೆಗೆ 3) ಟೆಂಡರ್ ತೆರೆಯುವ ದಿನಾಂಕ:9.03.2026 ಸಾಯಂಕಾಲ 5.15. ಘಂಟೆಗೆ 4) ವಿಳಾಸ: www.kppp.karnatak.gov.in

ಸಹಿ/- ಪೌರಾಯುಕ್ತರು
ನಗರಸಭೆ ಶಹಾಪುರ

ವಾ.ಸಾ.ಸಂ.ಇ/ಯಾದಗಿರಿ/560/ಕೆ.ಎಸ್.ಎಂ.ಸಿ.ಎ/2025-26


# ಧೈರ್ಯ, ಶೌರ್ಯ, ಸ್ವಾಭಿಮಾನಕ್ಕೆ ಮತ್ತೊಂದು ಹೆಸರೇ ಶಿವಾಜಿ



• ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ಧೈರ್ಯ, ಶೌರ್ಯ ಮತ್ತು ಸ್ವಾಭಿಮಾನಕ್ಕೆ ಪ್ರತೀಕರಾದವರು ಛತ್ರಪತಿ ಶಿವಾಜಿ ಮಹಾರಾಜರು ಎಂದು ಶ್ರೀರಂಗ ಪಾಟೀಲ ಶೆಂಡಗೆ ಹೇಳಿದರು. ತಾಲೂಕಿನ ತೋರಣಾ ಗ್ರಾಮದ ಬಸ್ಸು ನಿಲ್ದಾಣ ಹತ್ತಿರ ಬುಧವಾರ ಸಾಯಂಕಾಲ ಹಮ್ಮಿಕೊಂಡ ಛತ್ರಪತಿ ಶಿವಾಜಿ ಮಹಾರಾಜರ 396ನೇ ಸಾರ್ವಜನಿಕ ಜಯಂತಿ ಉತ್ಸವ ಕಾರ್ಯಕ್ರಮವನ್ನು ಉದ್ಘಾಟಿಸುವ ಮೂಲಕ ಅವರ ಭಾವಚಿತ್ರಕ್ಕೆ ಪುಷ್ಪ ಅರ್ಪಿಸಿ, ಮಾತನಾಡಿದ ಅವರು ಶಿವಾಜಿ ಮಹಾರಾಜ ಸಾಮಾನ್ಯ ವ್ಯಕ್ತಿಯಾಗಿದ್ದುಕೊಂಡು ಅಸಾಮಾನ್ಯ ಸಾಧನೆ ಮಾಡಿದ್ದಾರೆ. ತಾಯಿ ಜೀಜಾಬಾಯಿ ನೀಡಿದ ಶಿಕ್ಷಣ, ಬೆಳದ ವಾತಾವರಣ, ಜೀವನಾನುಭವ ಶಿವಾಜಿಗೆ ಪ್ರೇರಣೆ ನೀಡಿತ್ತು ಎಂದರು.

ಶಿವಾಜಿ ಭಾರತ ದೇಶಕ್ಕೆ ನೀಡಿದ ಕೊಡುಗೆ ಅಪಾರವಾಗಿದ್ದು, ಸ್ವರಾಜ್ಯದ ಪರಿಕಲ್ಪಣೆ ಯನ್ನು ಭಾರತದಲ್ಲಿ ಹುಟ್ಟುಹಾಕಿದ ಮೊದಲ ವ್ಯಕ್ತಿಯಾಗಿದ್ದಾರೆ. ಅವರ ನಾಯಕತ್ವ, ಗುಣ, ಸಾಹಸ, ಜೀವನ, ಆಡಳಿತ ಕಾರ್ಯವೈಖರಿ ನಮಗೆಲ್ಲರಿಗೂ ಅನುಕರಣೀಯವಾದುದು.

ಅಜೀಂಕ್ಯ ಫಿರಂಗೆ ಮಾತನಾಡಿ ಶಿವಾಜಿ ಮಹಾರಾಜ ಕೇವಲ ಒಬ್ಬ ರಾಜನಲ್ಲ, ಅವರು ಸ್ವರಾಜ್ಯದ ಕನಸನ್ನು ಸಾಕಾರಗೊಳಿಸಿದ ಮಹಾನ್ ನಾಯಕ, ಅನೇಕ ಕೋಟೆಗಳನ್ನು ವಶಪಡಿಸಿಕೊಳ್ಳುವ ಮೂಲಕ ಶಕ್ತಿಶಾಲಿ ಆಡಳಿತ ವ್ಯವಸ್ಥೆಯನ್ನು ರೂಪಿಸಿದವರು. ಅವರು ಯುದ್ಧ ತಂತ್ರದಲ್ಲಿ ಪರಿಣಿತರಾಗಿದ್ದು, ಗೆರಿಲ್ಲಾ ಯುದ್ಧ ವಿಧಾನವನ್ನು ಅನುಸರಿಸಿ ಶತ್ರುಗಳ ಮೇಲೆ ಜಯ ಸಾಧಿಸಿದವರು. ಜೊತೆಗೆ ನೌಕಾಪಡೆಯ ಆಧಾರವನ್ನು ಹಾಕಿ ಸಮುದ್ರ ಭದ್ರತೆಗೆ ಮಹತ್ವ ನೀಡಿದ್ದರು ಎಂದು ತಿಳಿಸಿದರು.

ಸ್ವಾಮಿ ವಿವೇಕಾನಂದ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು ಛತ್ರಪತಿ ಶಿವಾಜಿ ಮಹಾರಾಜರ ಹಾಗೂ ಜೀಜಾ ಮಾತೆಯ ವೇಷ ಧರಿಸಿ ನೋಡುಗರ ಗಮನಸೆಳೆದರು. ಶಾಲೆ ವಿದ್ಯಾರ್ಥಿಗಳು ಶಿವಾಜಿ ಮಹಾರಾಜರ ಹಾಡಿನ ಮೇಲೆ ನೃತ್ಯ ಮಾಡಿದರು.

ಛತ್ರಪತಿ ಶಿವಾಜಿ ಮಹಾರಾಜ ಜಯಂತ್ಯುತ್ಸವ ಸಮಿತಿಯ ಅಧ್ಯಕ್ಷ ಅಜೀಂಕ್ಯ ದಯಾಸಾಗರ ಪಾಟೀಲ, ಮುಖಂಡರುಗಳಾದ ಪ್ರಕಾಶ ಪಾಟೀಲ, ಸುರೇಶ ಭೋಸ್ಲೆ, ಅಮೂಲ ಪಾಟೀಲ, ಮಾಜಿ ಗ್ರಾಪಂ ಅಧ್ಯಕ್ಷ ಸುನೀಲ ಶಿಗರೆ, ಅರಹಂತ ಸಾವಳೆ, ಹಾವಗಿರಾವ ಕೋರೆ, ಭೀಮರಾವ ಶಿಂಧೆ, ಸುಧೀರ್ ಶಿಗರೆ, ಬಾಲಾಜಿ ಡೊಂಗ-ರೆ, ತಾನಾಜಿ ತೋರಣೆಕರ, ಸತ್ಯನಾರಾಯಣ ಲಖೋಟಿಯಾ, ತಾನಾಜಿ ಭೋಸಲೆ, ಕಿಶನರಾವ ವನಮಾರೆ, ತುಳಸಿರಾಮ ಜಕಾತೆ, ಸಾಯಿನಾಥ ಗವಳಿ, ಜ್ಞಾನೇಶ್ವರ ಚಿಕಲೆ, ಸಚೀನ ಶಿಂಧೆ, ನಾಮದೇವ ಪಾಂಚಾವರೆ, ನಾಗುರಾವ ಚಿಕಲೆ, ಕಾಲಿದಾಸ ಪಾಂಚಾವರೆ, ಪುಂಡಲಿಕ ಬಾಕಲೆ, ಕಾರ್ತಿಕ ಪಾಂಚಾವರೆ, ಶ್ರೇಯಶ ಭೋಸಲೆ, ಪ್ರಜ್ವಲ್ ಭೋಸಲೆ ಗ್ರಾಮದ ಹಿರಿಯರು ಮುಖಂಡರು ಮಹಿಳೆಯರು ಮಕ್ಕಳು ಇದ್ದರು.

# ಡಿಗ್ರಿ ಕಾಲೇಜು ಮಂಜೂರಾತಿಗೆ ವಿದ್ಯಾರ್ಥಿಗಳಿಂದ 5 ನೇ ಬಾರಿ ಪತ್ರ ಚಳವಳಿ



• ಮಲ್ಲಮ್ಮ ನುಡಿ ಹಗರಿಬೊಮ್ಮನಹಳ್ಳಿ

ತಾಲ್ಲೂಕಿನ ಕಂದಾಯ ಹೋಬಳಿ ಕೇಂದ್ರವಾದ ತಂಬ್ರಹಳ್ಳಿ ಗ್ರಾಮಕ್ಕೆ ಸರ್ಕಾರಿ ಪ್ರಥಮ ದರ್ಜೆ ಡಿಗ್ರಿ ಕಾಲೇಜು ಮಂಜೂರಾತಿಗಾಗಿ ವಿದ್ಯಾರ್ಥಿಗಳು 5 ನೇ ಬಾರಿ ಪತ್ರ ಚಳುವಳಿ ಮಾಡುವ ಮೂಲಕ ಸರಕಾರದ ಗಮನ ಸೆಳೆಯಲು ಮುಖ್ಯಮಂತ್ರಿಗಳಿಗೆ ಬುಧವಾರ 1 ಸಾವಿರ ಪತ್ರ ಬರೆದು ತಂಬ್ರಹಳ್ಳಿ ಅಂಚೆ ಕಚೇರಿಯ ಬಾಕ್ಸ್ ಗಳಿಗೆ ಹಾಕಿದರು.

ಈ ಕುರಿತು ಜಿಪಂ ಮಾಜಿ ಸದಸ್ಯ ಅಕ್ಕಿತೋಟೇಶ್ ಮಾತನಾಡಿ, ತಂಬ್ರಹಳ್ಳಿ ಕಳೆದ 20 ವರ್ಷಗಳಿಂದ ಪದವಿ ಪೂರ್ವ ಕಾಲೇಜು ಹೊಂದಿರುವ ಶಿಕ್ಷಣ ಕೇಂದ್ರವಾಗಿದೆ ಗ್ರಾಮದಲ್ಲಿ ನಾಡ ಕಚೇರಿ, ರಾಷ್ಟ್ರೀಕೃತ ಮೂರು ಬ್ಯಾಂಕುಗಳು, ಎಪಿಎಂಸಿ ಮಾರುಕಟ್ಟೆ, ಪೊಲೀಸ್ ಠಾಣೆ ಹಾಗೂ ರೈತ ಸಂಪರ್ಕ ಕೇಂದ್ರಗಳಿದ್ದು, ಸುಮಾರು 30 ಹಳ್ಳಿಗಳಿಗೆ ಕೇಂದ್ರಬಿಂದುವಾಗಿದೆ.

ತಂಬ್ರಹಳ್ಳಿ ಸುತ್ತಮುತ್ತ 10 ಕಿ.ಮೀ ವ್ಯಾಪ್ತಿಯ ಬಾಚಿಗೊಂಡನಹಳ್ಳಿ, ಹಂಪಸಾಗರ ಮತ್ತು ಮೋರಿಗೇರಿ ಗ್ರಾಮಗಳಲ್ಲಿ ಪದವಿ ಪೂರ್ವ ಕಾಲೇಜುಗಳು ಹಾಗೂ ಮೂರು ಐಟಿಐ ತರಬೇತಿ ಕಾಲೇಜುಗಳಿದ್ದು, ಒಟ್ಟಾರೆ 400-500 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಜೊತೆಗೆ 150 ವಿದ್ಯಾರ್ಥಿನಿಯರ ಮೆಟ್ರಿಕ್ ನಂತರದ ಬಿಸಿಎಂ ವಸತಿ ನಿಲಯವೂ ಇದೆ.

ಆದರೆ ಪದವಿ ಕಾಲೇಜು ಇಲ್ಲದ ಕಾರಣ ಅನೇಕ ಬಡ ವಿದ್ಯಾರ್ಥಿಗಳು, ವಿಶೇಷವಾಗಿ ಬಾಲಕಿಯರು, ಪದವಿ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ ಎಂದು ಅವರು ವಿಷಾದಿಸಿದರು.

2017ರಿಂದ ನಿರಂತರ ಹೋರಾಟ ನಡೆಸುತ್ತಾ, ಮೂರು ಬಾರಿ 17 ಕಿ.ಮೀ ದೂರದ ತಾಲೂಕು ಕೇಂದ್ರಕ್ಕೆ ಹಾಗೂ 17-08-2022ರಂದು 50 ಕಿ.ಮೀ ದೂರದ ಜಿಲ್ಲಾ ಕೇಂದ್ರಕ್ಕೆ ಪಾದಯಾತ್ರೆ ನಡೆಸಿ ಮನವಿ ಸಲ್ಲಿಸಿರುತ್ತೇವೆ, ಡಿಗ್ರಿ ಕಾಲೇಜು ಆರಂಭಿಸಲು ಗ್ರಾಮ ಠಾಣಾ ವ್ಯಾಪ್ತಿಯಲ್ಲಿ 3 ಎಕರೆ ಸರ್ಕಾರಿ ಜಾಗ ಕಾಯ್ದಿರಿಸಲಾಗಿದೆ. ವಿದ್ಯಾರ್ಥಿಗಳು ಮುಖ್ಯಮಂತ್ರಿ, ಉನ್ನತ ಶಿಕ್ಷಣ ಸಚಿವರು ಹಾಗೂ ಸಂಬಂಧಿತ ಅಧಿಕಾರಿಗಳಿಗೆ ಈಗಾಗಲೇ ಸುಮಾರು 3000 ಪತ್ರಗಳನ್ನು ಬರೆದು ಮನವಿ ಸಲ್ಲಿಸಿರುವುದು ಗಮನಾರ್ಹವಾಗಿದೆ. ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಲೋಕಸಭೆ ಸದಸ್ಯರು ಸಹ ಕಾಲೇಜು ಆರಂಭಕ್ಕೆ ಶಿಫಾರಸು ಮಾಡಿದ್ದರೂ ಸರ್ಕಾರ ಕಾಲೇಜು ಆರಂಭಕ್ಕೆ ಮೀನ ಮೇಶ ಎಣಿಸುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

# ಕಲ್ಯಾಣ ನಡಿಗೆ ಸಮಾರೋಪ ಸಮಾರಂಭ

• ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ



ಶರಣರ ವಿಚಾರಧಾರೆ, ವಚನ ಸಾಹಿತ್ಯ ಮತ್ತು ಸಮಾನತೆಯ ಸಂದೇಶವನ್ನು ಜನರಿಗೆ ತಲುಪಿಸುವ ಸಂಕಲ್ಪದೊಂದಿಗೆ ಬಸವಕುಮಾರ ಪಾಟೀಲರವರ ನೇತೃತ್ವದಲ್ಲಿ ಕಲ್ಯಾಣ ಕರ್ನಾಟಕ ಪ್ರತಿಷ್ಠಾನದಿಂದ

ಆರಂಭವಾದ'ಕಲ್ಯಾಣ ನಡಿಗೆ ಮತ್ತು ಹರಳಯ್ಯ ಜ್ಯೋತಿಯಾತ್ರೆ ಸಮಾರೋಪ ಸಮಾರಂಭ ಮಾ. 1 ರಂದು ನಗರದ ಬಸವ ಧರ್ಮ ಪೀಠದ ಮಾಹಾಮನೆಯ ಭವ್ಯ ಸಭಾಂಗಣದಲ್ಲಿ

ನಡೆಯಲಿದೆ ಎಂದು ಕಲ್ಯಾಣ ಕರ್ನಾಟಕ ಪ್ರತಿಷ್ಠಾನದ ಪ್ರಮುಖರು ಹಾಗೂ ಸಾಹಿತಿಗಳಾದ ಸಂಗಮೇಶ ಎನ್ ಜವಾದಿ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಂಗಮೇಶ ಎನ್ ಜವಾದಿ ರವರು ಕಲ್ಯಾಣ ನಡಿಗೆ ಪಾದಯಾತ್ರೆಯು ಈಗಾಗಲೇ ಸುಮಾರು ಹದಿನೈದು ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಯಶಸ್ವಿಯಾಗಿ

ಸಂಚರಿಸಿ, ಬಸವಾದಿ ಶರಣ-ರ ಸಂದೇಶ ತತ್ವಗಳು ಬಿತ್ತುವ ಕೆಲಸ ಮಾಡಲಾಗಿದೆ. ಅದರಲ್ಲೂ ವಿಶೇಷವಾಗಿ ಶರಣರ ತತ್ವಗಳನ್ನು ಯುವ ಪೀಳಿಗೆಗೆ ಪರಿಚಯಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ.

ಎಲ್ಲರನ್ನೂ ಪ್ರೀತಿಸುವ ಮತ್ತು ಗೌರವಿಸುವ ವಿಶ್ವ ಕುಟುಂಬತ್ವದ ಭಾವ ಬೆಳೆಸುವುದು, 'ದುರ್ಗುಣ ದುಶ್ಚಟಗಳ ಭಿಕ್ಷೆ, ಸದ್ಗುಣ ಸನ್ನಡತೆಯ ದೀಕ್ಷೆ'ಯ ಸಂಕಲ್ಪ ಹೊತ್ತು ಸಾಗಿದ ಈ ಪಾದಯಾತ್ರೆಯು ದುರ್ಗುಣ ದುಶ್ಚಟಗಳ ಭಿಕ್ಷೆ ಕೇಳುವ ಮುಖಾಂತರ ಅನೇಕರಿಗೆ ಮಾನವೀಯತೆಯ ಸಂದೇಶ ಬೋಧಿಸಿದೆ ಎಂದರು.

ಮಾ.1 ರಂದು ಬೆಳಗ್ಗೆ 8 ಗಂಟೆಗೆ ಬಂದವರ ಓಣಿಗೆ ಆಗಮಿಸುವ ಹರಳಯ್ಯ ಜ್ಯೋತಿ ಯಾತ್ರೆಯನ್ನು ವಿವಿಧ ಬಸವಪರ ಸಂಘಟನೆಗಳ ಬಸವ ಭಕ್ತರು ಅರ್ಥಪೂರ್ಣವಾಗಿ ಸ್ವಾಗತಿ, ಬಸವ ಧರ್ಮ

ಪೀಠದವರೆಗೆ ಕಲ್ಯಾಣ ನಡಿಗೆಗೆಯಲ್ಲಿ ಹೆಜ್ಜೆ ಹಾಕಲಿದ್ದಾರೆ. ಅಂದು ಬೆಳಗ್ಗೆ 10 ಗಂಟೆಗೆ ಬಸವ ಧರ್ಮ ಪೀಠದ ಮಾಹಾಮನೆಯ ಭವ್ಯ ಸಭಾಂಗಣದಲ್ಲಿ ಕಲ್ಯಾಣ ನಡಿಗೆ ಮತ್ತು ಹರಳಯ್ಯಾ ಜ್ಯೋತಿಯಾತ್ರೆ ಸಮಾರೋಪ ಸಮಾರಂಭ 770 ಶರಣರ ಸಂಸತ್ತಿನ ಸಮಾವೇಶ ಹಾಗೂ 770 ಶರಣರಿಗೆ ಶರಣ ವಂದನೆ ಸಮಾರಂಭ

ಅರ್ಥಪೂರ್ಣವಾಗಿ, ವೈಚಾರಿಕ ನೆಲೆಯಲ್ಲಿ

ಐತಿಹಾಸಿಕವಾಗಿ ಸಾಗಲಿದೆ ಎಂದರು. ಸಾಯಂಕಾಲ 5 : 30 ಕ್ಕೆ ತ್ರಿಪುರಾಂತದ ಮಕ್ಕಳ ಸಂಗೀತ ಉದ್ಯಾನದವರೆಗೆ ಪಾದಯಾತ್ರೆಯ ಮುಖಾಂತರ ಸಾಗಿ, 770 ಅಮರಗಣಂಗಳಿಗೆ ಕೃತಜ್ಞತೆ ಸಲ್ಲಿಸುವುದು ಸೇರಿದಂತೆ 770 ಶರಣ ಶರಣೆಯರಿಂದ ಶರಣಾರ್ಥಿ ಮಂಗಳ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಅಚ್ಚುಕಟ್ಟಾಗಿ ಉಪಾಹಾರ ಮತ್ತು ಪ್ರಸಾದ ವ್ಯವಸ್ಥೆ ಮಾಡಲಾಗಿದೆ. ಇದರಲ್ಲಿ ನಾಡಿನ ಮಠಾಧೀಶರು, ಗಣ್ಯರು, ಚಿಂತಕರು, ಸಾಹಿತಿಗಳು, ಅನುಭಾವಿಗಳು, ಕಲಾವಿದರು, ಬಸವ ಭಕ್ತರು ಆಗಮಿಸಲಿದ್ದಾರೆ. ಹೆಚ್ಚಿನ ಹೆಚ್ಚಿನ ಸಂಖ್ಯೆಯಲ್ಲಿ ಬಸವಾಭಿಮಾನಿಗಳು ಆಗಮಿಸಬೇಕೆಂದು ಸರ್ವರಲ್ಲಿಯೂ ಸಂಗಮೇಶ್ ಎನ್ ಜವಾದಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

> "ಸಮಾಜದಲ್ಲಿ ಶಾಂತಿ, ಸಹಬಾಳ್ವೆ ಮತ್ತು ಸದ್ಭಾವನೆಯನ್ನು ಮೂಡಿಸುವುದು ಈ ಕಲ್ಯಾಣ ನಡಿಗೆಯ ಮುಖ್ಯ ಉದ್ದೇಶವಾಗಿತ್ತು. ಅಂತೆಯೇ ಕಲ್ಯಾಣ ನಡಿಗೆ ಪಾದಯಾತ್ರೆಯು ಬಸವಣ್ಣನವರ ಹಾಗೂ ಇತರ ಶರಣರ ವಚನ ಸಾಹಿತ್ಯದ ಸಂದೇಶಗಳ, ಸದ್ಭಾವನೆಯನ್ನು ಮನೆಮನೆಗೆ ತಲುಪಿಸುವ ಕಾರ್ಯ ಯಶಸ್ವಿಯಾಗಿ ಮಾಡಿದೆ. ಜೊತೆಗೆ
>
> ಮಾನವೀಯ ಮೌಲ್ಯಗಳನ್ನು ಸಾರಿದ ಐತಿಹಾಸಿಕ ಈ ನಡಿಗೆಯೂ ಸರ್ವರಿಗೂ ಸದಾ ಕಾಲ ಪ್ರೇರಣದಾಯಕವಾಗಿರಲಿದೆ.
>
> ಈ ಕಲ್ಯಾಣ ನಡಿಗೆ ಪಾದಯಾತ್ರೆಯು ಮಾ 1 ರಂದು ಯಶಸ್ವಿಯಾಗಿ ಸಂಪನ್ನಗೊಳ್ಳುತ್ತಿರುವುದು ಅತ್ಯಂತ ಖುಷಿತಂದಿದೆ ಎಂದು ಬರಹಗಾರರು. ಚಿಂತಕರಾದ ಸಂಗಮೇಶ ಎನ್ ಜವಾದಿ ತಿಳಿಸಿದರು.

# ಸಂಪಾದಕೀಯ

**ಮಾಣಿಕರೆಡ್ಡಿ ಕೌಡಾಳೆ**
ಪ್ರಧಾನ ಸಂಪಾದಕರು
ಮೋ: 9845028349



## ಚುನಾಯಿತ ಪ್ರತಿನಿಧಿಗಳು ಜನರ ನೆರವಿಗೆ ಬರುವುದು ಅತಿ ಅವಶ್ಯಕ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರ ಆಶಯ-ಆಕಾಂಕ್ಷೆಗಳನ್ನು ಪ್ರತಿಬಿಂಬಿಸುವವರು ಚುನಾಯಿತ ಪ್ರತಿನಿಧಿಗಳು. ಗ್ರಾಮ ಪಂಚಾಯಿತಿ ಸದಸ್ಯರಿಂದ ಹಿಡಿದು ಶಾಸಕ, ಸಂಸದರವರೆಗೆ ಜನರ ಮತದಾನದಿಂದ ಅಧಿಕಾರಕ್ಕೆ ಬಂದವರಾದರೆ, ಜನರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸುವುದು ಅವರ ಮೂಲ ಕರ್ತವ್ಯವಾಗಬೇಕು. ಆದರೆ ಹಲವೊಮ್ಮೆ ಚುನಾವಣೆಗಳ ಬಳಿಕ ಜನರೊಂದಿಗೆ ಇರುವ ಸಂಪರ್ಕ ಕಡಿಮೆಯಾಗುತ್ತಿರುವುದು ಆತಂಕಕಾರಿ ಸಂಗತಿ.

ಚುನಾವಣೆ ಸಮಯದಲ್ಲಿ ಮನೆ ಮನೆಗೆ ಭೇಟಿ ನೀಡುವ ನಾಯಕರು, ಅಧಿಕಾರಕ್ಕೆ ಬಂದ ಬಳಿಕ ಕಚೇರಿ ಗಡಿಯನ್ನು ದಾಟದಿರುವುದು ಸಾಮಾನ್ಯ ದೂರು. ಜನರಿಗೆ ಕುಡಿಯುವ ನೀರು, ರಸ್ತೆ, ವಿದ್ಯುತ್, ಆರೋಗ್ಯ, ಶಿಕ್ಷಣ ಮೊದಲಾದ ಮೂಲಭೂತ ಸೌಕರ್ಯಗಳ ಕೊರತೆ ಎದುರಾಗುವಾಗ ಪ್ರತಿನಿಧಿಗಳು ತಕ್ಷಣ ಸ್ಥಳಕ್ಕೆ ಭೇಟಿ ನೀಡಿ ಪರಿಹಾರ ಕ್ರಮ ಕೈಗೊಳ್ಳಬೇಕು. ಕೇವಲ ಹೇಳಿಕೆ ನೀಡುವುದರಿಂದ ಸಮಸ್ಯೆಗಳು ಪರಿಹಾರವಾಗುವುದಿಲ್ಲ.

ಗ್ರಾಮ ಸಭೆಗಳು, ಸಾರ್ವಜನಿಕ ದೂರು ನಿವಾರಣಾ ಸಭೆಗಳು ನಿಯಮಿತವಾಗಿ ನಡೆಯಬೇಕು. ಜನರ ಮಾತು ಕೇಳಿ, ಸಂಬಂಧಿತ ಅಧಿಕಾರಿಗಳಿಗೆ ಸ್ಪಷ್ಟ ನಿರ್ದೇಶನ ನೀಡಿ, ಕಾರ್ಯಗತಗೊಳಿಸುವಿಕೆ ಮೇಲ್ವಿಚಾರಣೆ ಮಾಡುವುದು ಅಗತ್ಯ. ಜನರ ವಿಶ್ವಾಸ ಕಾಪಾಡಿಕೊಳ್ಳಲು ಪಾರದರ್ಶಕತೆ ಮತ್ತು ಜವಾಬ್ದಾರಿತ್ವ ಅತ್ಯಂತ ಮುಖ್ಯ.

ವಿಪತ್ತುಗಳ ಸಮಯದಲ್ಲಿ – ಪ್ರವಾಹ, ಬರ, ರೋಗ ವ್ಯಾಪಕತೆ – ಪ್ರತಿನಿಧಿಗಳು ಜನರ ಜೊತೆ ನಿಂತರೆ ಮಾತ್ರ ಜನಪ್ರತಿನಿಧಿ ಎಂಬ ಪದಕ್ಕೆ ಅರ್ಥ ಬರುತ್ತದೆ. ಸಾಮಾಜಿಕ ಜಾಲತಾಣಗಳಲ್ಲಿ ಕೇವಲ ಸಂದೇಶ ಹಾಕುವುದಕ್ಕಿಂತ, ನೆಲಮಟ್ಟದಲ್ಲಿ ಕಾರ್ಯನಿರ್ವಹಿಸುವುದು ಮುಖ್ಯ.

ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಜನರ ನಂಬಿಕೆ ಉಳಿಸಿಕೊಳ್ಳಬೇಕಾದರೆ, ಚುನಾವಣೆಯ ನಂತರವೂ ಜನರ ಜೊತೆ ನಿರಂತರ ಸಂಪರ್ಕ ಕಾಯ್ದುಕೊಳ್ಳಬೇಕು. ಜನರ ನೆರವಿಗೆ ಬರುವ ನಾಯಕತ್ವವೇ ನಿಜವಾದ ನಾಯಕತ್ವ. ಜನರ ಸೇವೆಯೇ ರಾಜ-ಕಾರಣದ ಉದ್ದೇಶವಾಗಲಿ; ಅಧಿಕಾರವಲ್ಲ.

ಜನತೆ ಮತ ನೀಡಿ ಅಧಿಕಾರ ನೀಡುವುದು ಸೇವೆಗಾಗಿ, ಸೌಕರ್ಯಕ್ಕಾಗಿ, ಅಭಿವೃದ್ಧಿಗಾಗಿ. ಆ ವಿಶ್ವಾಸಕ್ಕೆ ಧಕ್ಕೆ ಬಾರದಂತೆ ಚುನಾಯಿತ ಪ್ರತಿನಿಧಿಗಳು ಸದಾ ಜನರೊಂದಿಗೇ ಇರಬೇಕು. ಆಗ ಮಾತ್ರ ಪ್ರಜಾಪ್ರಭುತ್ವ ಬಲವಾಗುತ್ತದೆ.

# ಪ್ರಗತಿ ಪರಿಶೀಲನಾ ಸಭೆ




ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ

ರಾಜ್ಯದಲ್ಲಿ ಗೃಹಲಕ್ಷ್ಮೀ ಯೋಜನೆಯಡಿ 300 ಕೋಟಿ ರೂ. ಮೃತಪಟ್ಟ ಫಲಾನುಭವಿಗಳ ಖಾತೆಗೆ ಹಣ ಜಮಾ ಆಗುತ್ತಿವೆ ಎಂಬ ಮಾಹಿತಿ ಇದೆ. ಹೀಗಾಗಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಅಂಥಹ ಖಾತೆಗಳನ್ನು ಗುರುತಿಸಿ ರದ್ಧು ಪಡಿಸಬೇಕು ಎಂದು ಗ್ಯಾರಂಟಿ ಯೋಜನೆಗಳ ತಾಲ್ಲೂಕು ಅಧ್ಯಕ್ಷರಾದ ನೀಲಕಂಠ ರಾಠೋಡ ಹೇಳಿದರು. ನಗರದ ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ಶುಕ್ರವಾರ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ನೀಲಕಂಠ ರಾಠೋಡ ಅವರ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿ, ಅಧಿಕಾರಿಗಳು ಹೇಳುವ ಪ್ರಕಾರ ನಮ್ಮ ತಾಲ್ಲೂಕಿನಲ್ಲಿ 1600 ಮೃತಪಟ್ಟ ಫಲಾನುಭವಿಗಳ ಹಣ ಜಮಾ ಆಗುತ್ತಿವೆ ಎಂಬ ಮಾಹಿತಿ ಇದೆ. ಹೀಗಾಗಿ ಅಂಥಹ ಫಲಾನುಭವಿಗಳ ಪಟ್ಟಿಯನ್ನು ಸಿದ್ಧಪಡಿಸಿ ರದ್ಧು ಪಡಿಸಬೇಕು ಮತ್ತು ನಿಜವಾದ ಫಲಾನುಭವಿಗಳಿಗೆ ಹಣ ಜಮಾ ಆಗುವಂತೆ ಸಂಬಂಧ ಪಟ್ಟ ಅಧಿಕಾರಿಗಳ ಕ್ರಮ ವಹಿಸಬೇಕು ಎಂದು ಸಲಹೆ ನೀಡಿದರು.

ಅನ್ನಭಾಗ್ಯ ಯೋಜನೆಯಡಿ ಸುಮಾರು 1 ಸಾವಿರ ಜನರ ರೇಷನ್ ಕಾ9ಗಳನ್ನು ರದ್ದು ಪಡಿಸಲಾಗಿದೆ. ಅವುಗಳ ಯಾವ ಮಾನದಂಡದ ಮೇಲೆ ರದ್ದು ಮಾಡಿದ್ದಿರಿ ಹಾಗೂ ಯಾವುದೇ ಕಾರಣಕ್ಕೂ ಬಡ ಫಲಾನುಭವಿಗಳಿಗೆ ಅನ್ಯಾಯ ವಾಗದಂತೆ ನೋಡಿಕೊಳ್ಳಬೇಕು ಮತ್ತು ಮೂರು ದಿವಸದ ಒಳಗೆ ಹೊಸದಾಗಿ ರೇಷನ ಕಾ9 ನೀಡಿರುವ ಫಲಾನುಭವಿಗಳ ಸಂಪೂರ್ಣ ಮಾಹಿತಿ ನೀಡಬೇಕು ಎಂದರು.

ಇಲಾಖೆ ಅಧಿಕಾರಿ ನಮಗೆ ಅವಶ್ಯಕತೆ ಇರುವಷ್ಟು ಬಸ್ಸಿನ ಸೌಲಭ್ಯ ಇಲ್ಲ ತೊಂದರೆ ಆಗುತ್ತದೆ ಅಂದಾಗ ನೀವು ನಿಮ್ಮ ಇಲಾಖೆಯಲ್ಲಿ ಯಾವ ಯಾವ ಸಮಸ್ಯೆಗಳಿವೆ ಅವುಗಳ ಪಟ್ಟಿಮಾಡಿ ಕೊಡಿ ನಿಮ್ಮ ಮೇಲಾಧಿಕಾರಿಗಳ ಗಮನಕ್ಕೆ ತಂದು ಸಮಸ್ಯೆ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೆವೆ ಎಂದರು. ತಾ.ಪಂ.ಕಾ.ನಿ.ಅಧಿಕಾರಿ ರಮೇಶ ಸುಲ್ಪಿ ಅವರು ಮಾತನಾಡಿ, ಪ್ರಗತಿ ಪರಿಶೀಲನೆ ಸಭೆಯಲ್ಲಿ ಆಯಾ ಇಲಾಖೆಗೆ ನೀಡಿರುವ ಆದೇಶಗಳನ್ನು ಕಡ್ಡಾಯವಾಗಿ ಪಾಲಿಸುವ ಮೂಲಕ ಪಂಚ ಗ್ಯಾರಂಟಿ ಯೋಜನೆಗಳು ಜನರಿಗೆ ಸಹಾಯ ವಾಗುವಂತೆ ಕ್ರಮ ಕೈಗೊಳ್ಳಬೇಕು ಇಲ್ಲದಿದ್ದರೆ ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವುದು ಎಂದು ಹೇಳಿದರು. ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಓಡಾಡುವ ಗ್ರಾಮಗಳಿಗೆ ಬಸ್ಸ್ ಸೌಕರ್ಯ ಒದಗಿಸಿ ಕೊಡಬೇಕು ಮತ್ತು ಸಭೆಗೆ ಬರುವಾಗ ಸಂಪೂರ್ಣ ಮಾಹಿತಿಯೊಂದಿಗೆ ಬರಬೇಕು ಎಂದು ಸೂಚಿಸಿದರು. ಈ ಸಂದರ್ಭದಲ್ಲಿ ಗ್ಯಾರಂಟಿ ಯೋಜನೆಗಳ ಸದಸ್ಯರು ಮತ್ತು ಸಂಬಂಧ ಪಟ್ಟ ಇಲಾಖೆ ಅಧಿಕಾರಿಗಳು ಸೇರಿದಂತೆ ಮತ್ತಿತರರು ಇದ್ದರು.

# ಶ್ರೀ ಜಗದ್ಗುರು ರೇವಣಸಿದ್ಧೇಶ್ವರ ಮಹಾರಥೋತ್ಸವ

• **ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ**

ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವದ ಪ್ರಯುಕ್ತ ತಾಲೂಕಿನ ಬೆಳಕೇರಾ ಗ್ರಾಮದ ಬೆಟ್ಟದಲ್ಲಿರುವ ಶ್ರೀ ಜಗದ್ಗುರು ರೇವಣಸಿದ್ದೇಶ್ವರರ 17ನೇ ಜಾತ್ರಾಮಹಾರಥೋತ್ಸವ ಅಂಗವಾಗಿ ಇಂದು ಬೆಳಿಗ್ಗೆ 6 ಘಂಟೆಗೆ ಶ್ರೀ ಜಗದ್ಗುರು ರೇವಣಸಿದ್ಧೇಶ್ವರರ ಲಿಂಗೋದ್ಭವ ಮೂರ್ತಿಗೆ ರುದ್ರಾಭಿಷೇಕ. 6:30 ಗಂಟೆಗೆ ಗ್ರಾಮದ ಶ್ರೀ ನಂದಿ ಬಸವೇಶ್ವರ ದೇವಸ್ಥಾನದಿಂದ ಕಳಸ ಹಾಗೂ ಪಲ್ಲಕ್ಕಿ ಮೆರವಣಿಗೆ, ಮತ್ತು 10 ಗಂಟೆಗೆ ಪಂಚಾಚಾರ್ಯರ ಧ್ವಜಾರೋಹಣ ಹಾಗೂ ರಥದ ಕಳಸಾರೋಹಣ ನಡೆಯುತ್ತದೆ. ನಾಳೆ ಬೆಳಿಗ್ಗೆ 7 ಗಂಟೆಗೆ ಶ್ರೀ ಜಗದ್ಗುರು ರೇವಣಸಿದ್ದೇಶ್ವರರ ಲಿಂಗೋದ್ಭವ ಮೂರ್ತಿಗೆ ಸಂಗೀತ ರುದ್ರಾಭಿಷೇಕ.



8 ಘಂಟೆಗೆ ಜಂಗಿ ಕುಸ್ತಿ. ಮಧ್ಯಾಹ್ನ 1ಗಂಟೆಗೆ ಹಾಗೂ ರಾತ್ರಿ 8–00 ಗಂಟೆಗೆ ನಾಗಪ್ಪ ಈರಬ್ಬೆ ಇವರ ನೇತೃತ್ವದಲ್ಲಿ ಬೆಳಕೇರಾ ಗ್ರಾಮದ ಶಾಲಾ ಮಕ್ಕಳಿಂದ ಸಂಸ್ಕೃತಿಕ ಹಾಗೂ ಕಲಾ ಪ್ರದರ್ಶನ ಕಾರ್ಯಕ್ರಮ ಜರುಗಲಿವೆ ಮದ್ಯಾಹ್ನ 3 ಗಂ–ಟೆಗೆ ಧರ್ಮಸಭೆ ನಂತರ 5:30 ಗಂಟೆಗೆ ಶ್ರೀ ಜಗದ್ಗುರು ರೇವಣಸಿದ್ದೇಶ್ವರರ ಭವ್ಯ ಪಲ್ಲಕ್ಕಿ ಉತ್ಸವ ಹಾಗೂ ಸಾಯಂಕಾಲ 6:30 ಘಂಟೆಗೆ ಮಹಾರಥೋತ್ಸವ ಜರುಗಲಿದೆ. ರಾತ್ರಿ 9 ಘಂ–ಟೆಗೆ ಸಾನ್ವಿ ಮೆಲೋಡೀಸ್ ಮತ್ತು ಆರ್ಕೇಸ್ಟ್ರಾ ಹುಮನಾಬಾದ, ತಂಡದ ವತಿಯಿಂದ ಹಾಸ್ಯ, ಸಂಗೀತ, ನೃತ್ಯ ಮತ್ತು ಜಾದೂ ಕಾರ್ಯಕ್ರಮ ನಡೆಯಲಿದೆ ಆದ ಕಾರಣ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ದೇವರ ದರ್ಶನ ಪಡೆದು ಪುನೀತರಾಗಬೇಕೆಂದು ದೇವಸ್ಥಾನ ಸಮಿತಿಯವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬೈಕ್ ಕಾರು ಡಿಕ್ಕಿ: ದಂಪತಿ ಸಾವು



• **ಮಲ್ಲಮ್ಮ ನುಡಿ ವಾರ್ತೆ ಹುಣಸೂರು**

ತಾಲೂಕಿನ ಹನಗೋಡು ಹೋಬಳಿಯ ಬೀರನಹಳ್ಳಿ ಗ್ರಾಮದ ನಂಜುಂಡಸೋಮಚಾರ್ (51) ಇವರ ಪತ್ನಿ ನೇತ್ರಾವತಿ (48), ಎಂಬ ಮೃತಪಟ್ಟ ದಂಪತಿಗಳು ದುರ್ದೈವಿಗಳಾಗಿದ್ದಾರೆ. ಎದುರುಗಡೆಯಿಂದ ಕಾರು ಡಿಕ್ಕಿ ಹೊಡೆದ ರಭಸಕ್ಕೆ ದಂಪತಿಗಳು ಮೃತಪಟ್ಟಿರುವ ಘಟನೆ ಕೆ ಆರ್ ನಗರ ತಾಲ್ಲೂಕಿನ ಕಗ್ಗರೆ ಮತ್ತು ನಾರಾಯಣಪುರ ಬಳಿ ನಡೆದಿದೆ

ಆರ್.ನಗರ: ಸಂಬಂದಿಕರ ಸಾವಿನ ಅಂತ್ಯಕ್ರಿಯೆಗೆ ದಂಪತಿಗಳು ಬೈಕ್ ನಲ್ಲಿ ಹೋಗುವಾಗ ಯಮರಾಜನಂತೆ ಎದುರುಗಡೆಯಿಂದ ಕಾರು ಡಿಕ್ಕಿ ಹೊಡೆದ ರಭಸಕ್ಕೆ ದಂಪತಿಗಳು ಮೃತಪಟ್ಟಿರುವ ಘಟನೆ ತಾಲ್ಲೂಕಿನ ಕಗ್ಗರೆ ಮತ್ತು ನಾರಾಯಣಪುರ ಬಳಿ ನಡೆದಿದೆ. ಮೈಸೂರಿನ ಹೆಬ್ಬಾಳು ಮೂರನೇ ಹಂತದ ಸುಬ್ರಹ್ಮಣ್ಯನಗರದ ಮಗಳು ಮೇಘನಾ ಮನೆಯಲ್ಲಿ ವಾಸವಿದ್ದ ನಂಜುಂಡಸೋಮಚಾರ್ ಅವರು ಕಟ್ಟಡ ಕಾರ್ಮಿಕರ ಸೆಂಟ್ರಿಂಗ್ ಮೇಸ್ತ್ರಿಯಾಗಿ ಕೆಲಸ ಮಾಡುತ್ತಿದ್ದು ಇವರಿಗೆ ಒರ್ವ ಪುತ್ರ, ಪುತ್ರಿ ಇದ್ದಾರೆ.

ಘಟನೆ : ಅರಕಲಗೂಡು ತಾಲ್ಲೂಕಿನ ರಾಮನಾಥಪುರ ಬಳಿಯ ಮುತ್ತಕದ ಹೊಸೂರು ಗ್ರಾಮದ ಸಂಬಂದಿಕರ ಸಾವಿನ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ಇಂದು ಬೆಳಗ್ಗೆ ನಂಜುಂಡಸೋಮಚಾರ್ ತಮ್ಮ ಪತ್ನಿ ನೇತ್ರಾವತಿ ಜೊತೆ ಬಜಾಜ್ ಡಿಸ್ಕವರಿ ಬೈಕ್ ನಲ್ಲಿ ಇಲವಾಲ ಮತ್ತು ಸಾಗರಕಟ್ಟೆ ಮಾರ್ಗವಾಗಿ ನಾರಾಯಣಪುರ ಕಗ್ಗರೆ ಮೂಲಕ ಹಂಪಾಪುರ ಕಡೆಯಿಂದ ರಾಮನಾಥಪುರಕ್ಕೆ ತೆರಳುವ ಮಾರ್ಗ ಮದ್ಯೆ ನಾರಾಯಣಪುರ ಮತ್ತು ಕಗ್ಗರೆ ಬಳಿ ಅತೀ ವೇಗವಾಗಿ ಎದುರುನಿಂದ ಬಂದ ಕಾರ್ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ಅನತಿ ದೂರ ದಂಪತಿಗಳಿದ್ದ ಬೈಕ್ ಸಮೇತ ಹಾರೋಗಿ ಬಿದ್ದ ಪರಿಣಾಮ ತೀವ್ರವಾಗಿ ಗಂಬೀರವಾಗಿ ಗಾಯಗೊಂಡ ದಂಪತಿಗಳನ್ನು ಪಟ್ಟಣದ ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಅಂಬ್ಯೂಲೆನ್ಸ್ ಮೂಲಕ ಕರತಂದಾಗ ದಂಪತಿಗಳು ಮೃತಪಟ್ಟಿದ್ದಾರೆ. ಅಪಘಾತ ಮಾಡಿದ ಕಾರಿನ ಚಾಲಕ ಸ್ಥಳದಿಂದ ಪರಾರಿಯಾಗಿದ್ದಾರೆ. ಈ ಸಂಬಂದ ಅಪಘಾತದಲ್ಲಿ ಮೃತಪಟ್ಟ ದಂಪತಿಗಳ ಪುತ್ರ ರವಿಕುಮಾರ್ ಪಟ್ಟಣದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ದೂರು ದಾಖಲಿಸಿ ಕೊಂಡ ಪಟ್ಟಣದ ಪೊಲೀಸ್ ಇನ್ಸ್‌ಪೆಕ್ಟರ್ ಶಿವಪ್ರಕಾಶ್ ಅಪಘಾತ ನಡೆದ ಸ್ಥಳಕ್ಕೆ ಬೇಟಿ ನೀಡಿ ಪರಿಶೀಲನೆ ನಡೆಸಿ ಬಳಿಕ



ಗುರುಮಠಕಲ್ : ಶ್ರೀ ಹವಾ ಮಲ್ಲಿನಾಥ ಮಹಾರಾಜ ಗುರುಮಠಕಲ್ ಹೊರವಲಯದ ಶ್ರೀ ವೆಂಕಟೇಶ್ವರ ದೇವಸ್ಥಾನಕ್ಕೆ ಶುಕ್ರವಾರ ಸಾಯಂಕಾಲ ಭೇಟಿ ನೀಡಿದರು.

# ಅಧ್ಯಕ್ಷರಾಗಿ ಆಯ್ಕೆ



• **ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ**

ಕರ್ನಾಟಕ ರಾಜ್ಯ ಸರಕಾರಿ ನಿವೃತ್ತಿ ನೌಕರರ ಸಂಘ ಬೆಂಗಳೂರಿನ ಅಧ್ಯಕ್ಷರಾದ ಡಾ. ಎಲ್ ಭೈರಪ್ಪನವರು ಸಂಘದ ಬೈಲಾ ನಿಯಮಾನುಸಾರವಾಗಿ ಬಸವಣ್ಣಪ್ಪಎಸ್‌ನೆಲಗಿಬಸವಕಲ್ಯಾಣ ರವರನ್ನು ರಾಜ್ಯ ಸಂಘದ ಜಂಟಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಲು ಪ್ರಮಾಣ ಪತ್ರ ಕೊಟ್ಟಿರುತ್ತಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಿಂಹಪುರಿಯ ಸಿಂಹ ಚಿತ್ರದ ಟ್ರೈಲರ್ ಲಾಂಚ್

• **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು**



ಇತ್ತೀಚಿಗೆ ಟೀಸರ್ ಹಾಗೂ ಒಂದು ಸಾಂಗ್ ಅನ್ನು ಬಿಡುಗಡೆ ಮಾಡಿ ಕುತೂಹಲ ಮೂಡಿಸಿದ ಚಿತ್ರ ಸಿಂಹಪುರಿಯ ಸಿಂಹ. ಒಂದು ರಹಸ್ಯ ಕಥೆಯೊಂದಿಗೆ ಬಿಡುಗಡೆ ಸಜ್ಜಾಗಿದೆ ಸಿಂಹಪುರಿಯ ಚಿತ್ರತಂಡ. ಚಿತ್ರದ ನಾಯಕ ನಟ–ರಾಗಿ ಕೆ ವೈ ಮೂರ್ತಿಯವರು ಅಭಿನಯಿಸಿದ್ದು, ನಾಯಕಿಯಾಗಿ ಸೌಜನ್ಯ ಅಭಿನಯಿಸಿದ್ದಾರೆ ಇನ್ನ ಚಿತ್ರದ ವಿಲನ್‌ಗಳಾಗಿ ಸುಧೀನ್ ಕುಮ್ಮ, ನಿಲೇಶ್ ಗೌಡ ಅಭಿನಯಿಸಿದ್ದು. ಸಹಕಲಾವಿದರಾಗಿ ಶಂಕರ್ ಭಟ್, ಉಮೇಶ್, ಬ್ಯಾಂಕ್ ಜನಾರ್ಧನ್, ಜೂನಿಯರ್ ದ್ವಾರಕೀಶ್, ಪದ್ಮ ವಸಂತಿ, ರೇಖಾದಾಸ್ ,ಪ್ರಸನ್ನ ಹಾಗೂ ಮುತ್ತುರಾಜ್ ಸೇರಿ ಅನೇಕ ಕಲಾವಿದರು ಅಭಿನಯಿಸಿದ್ದಾರೆ.

ಈ ಸಿಂಹಪುರಿಯ ಚಿತ್ರದ,ಕಥ 'ಚಿತ್ರಕಥೆ,ನಿರ್ದೇಶನ,ನಿರ್ಮಾಪಕರು ಕೆ ವೈ ಮೂರ್ತಿಯವರು ಮಾಡಿದ್ದು. ಛಾಯಾಗ್ರಾಹಣ ಗುರುದತ್ ಮುಸುರಿ,ಮನೋಹರ್, ಸಿ ಎಸ್ ಸತೀಶ್ ಸಂಗೀತ ಕೃಪಾಕರ್ ,ಸಂಕಲನ ಅರುಣ್ ಬೆಂಗಳೂರು ಮೂವೀಸ್ ಸಾಹಸ ದೃಶ್ಯ ಅಲ್ಟಿಮೇಟ್ ಶಿವು ,ಜಾನಿ ಮಾಸ್ಟರ್ ಸಂಭಾಷಣೆ ಸುದರ್ಶನ್ ಇನ್ನು ಈ ಚಿತ್ರದಲ್ಲಿ ಸಾಂಗುಗಳು ಇರಲಿದ್ದು .ಸಂಗೀತ ಗಾಯಕರು ರಾಜೇಶ್ ಕೃಷ್ಣನ್, ಹೇಮಂತ್, ಅನುರಾಧ ಭಟ್, ಪ್ರಿಯಾ ಯಾದವ್, ಸ್ನೇಹ ಪ್ರಿಯ ನಾಗರಾಜ್ , ಹಾಗೂ ನೃತ್ಯ ಸಂಯೋಜಕರಾಗಿ ( ಸಂಧನ್ ರಾಜ್ ) ರಾಜದೇವ್ ರವರು ಕಾರ್ಯನಿರ್ವಹಿಸಿದ್ದಾರೆ 'ಚಿತ್ರ ಇದೆ ಏಪ್ರಿಲ್ ತಿಂಗಳಲ್ಲಿ ಅದ್ದೂರಿಯಾಗಿ ಬಿಡುಗಡೆಯಾಗಲಿದೆ.

# ಗಣ್ಯರಿಂದ ಹಾರೈಕೆ

ಬೀದರ : ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಬೀದರನಲ್ಲಿ ಗ್ರೂಪ್–ಡಿ ನೌಕರರಾಗಿ 34 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ನಾಗಶೆಟ್ಟಿ ತಾದಲಾಪುರ ರವರಿಗೆ ವಾರ್ತಾ ಇಲಾಖೆಯಿಂದ ಶುಕ್ರವಾರ ವಾರ್ತಾ ಭವನದಲ್ಲಿ ಆತ್ಮೀಯವಾಗಿ ಶಾಲು ಹೊದಿಸಿ, ಮಾಲಾರ್ಪಣೆ ಮಾಡಿ, ಕಾಣಿಕೆ ನೀಡಿ ಸನ್ಮಾನಿಸಿ ನಿವೃತ್ತಿ ನಂತರದ ಜೀವನಕ್ಕೆ ಶುಭ ಹಾರೈಸಲಾಯಿತು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ವಹಿಸಿದ ವಾರ್ತಾ ಇಲಾಖೆಯ ಸಹಾಯಕ ನಿರ್ದೇಶಕ ಮಂಜುನಾಥ್ ಸುಳ್ಳೊಳಿ ಮಾತನಾಡಿ, ನಾಗಶೆಟ್ಟಿ ಅವರದ್ದು ಯಾರ ಜೊತೆ ವರಟಾಗಿ ಮಾತನಾಡದ, ಅನುಚಿತವಾಗಿ ವರ್ತಿಸದ ಶಾಂತ ಸ್ವಭಾವದ ವ್ಯಕ್ತಿತ್ವ. ನಾನು ನನ್ನ ಸುದೀರ್ಘ ಸೇವೆಯಲ್ಲಿ ನಾಗಶೆಟ್ಟಿ ರಂತಹ ನೌಕರನನ್ನು ಕಂಡಿಲ್ಲ. ಅವರ ನಿವೃತ್ತಿ ನಂತರ ಜೀವನ ಸುಖ, ಶಾಂತಿ ನೆಮ್ಮದಿಯಿಂದ ಕೂಡಿರಲಿ ಎಂದು ಹಾರೈಸಿದರು.


ಕರ್ನಾಟಕ ಸರ್ಕಾರ

**ಜಿಲ್ಲಾ ಪಂಚಾಯತ್ ಬೀದರ.**

**ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ**

**ಸಹಾಯಕ ನಿರ್ದೇಶಕರ ಕಛೇರಿ, ನೆಹರು ಕ್ರೀಡಾಂಗಣ ಬೀದರ –585401**

ದೂರವಾಣಿ ಹಾಗೂ ಫ್ಯಾಕ್ಸ್: 08482–226681. ಇ–ಮೇಲ್:adyssbdr@yahoo.in

ಸಂಖ್ಯೆ : ಸನಿ/ಯುಸೇಕ್ರೀಇ/ಬಿ/ಸಿಆರ್:– /2025–26 ದಿನಾಂಕ: 26–02–2026

**ಪ್ರಕಟಣೆ**

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಅಗತ್ಯವಿರುವ ಈ ಕೆಳಕಂಡ ಸಾಮಗ್ರಿಗಳನ್ನು ಸರಬರಾಜು ಮಾಡಲು ಅರ್ಹ ಸರಬರಾಜುದಾರರಿಂದ (Unit Price) ದರಪಟ್ಟಿಗಳನ್ನು ಅಹ್ವಾನಸಲಾಗಿದೆ.

**Name of the Toolkit: Specification**

**1) T.T. Table:-** Frame Size:- 75mm x 25mm pipe edge banding tape. Applied through German Machine. Leg Size **:-** 100mm x 50mm capsale pipe, 25mm thick HDF 5 layer imported Board, Board :- Dark Blue:125mm wheels with lock/brake, (2 with brakes and 6 movable), Attractive white and gray colour table tennis table base frame, Rubber levelers for easy adjustment , Easily foldable for compact storage Play back position to practice table tennis alone, Table Tennis post premium with net, Double lock system to secure the table in play back and storage position, **2) VOLLEYBALL NET:-** 1) Four side Tetron Tape, 2) 5mm Pvc Coated wire, 3) 3mm Black Hdpe Netting, 4) Brass Eyelets in side Bands for stretching 5) Size: 10m*1m,, **3) BADMINTON ROCKET:-** Frame; Graphite alloy (carbon alloy), stem; graphite alloy (carbon alloy), eyelets ; polypropylene as per IS : 10951. no. of holes for stringing in frame ; 74, mass of badminton without gut; 75 to 85. Overall length of rocket (tolerance - ± 8mm) 660. Length of handle (tolerance ± 6mm) ; 146. Frame width (tolerance - ±190); 190. Frame length (tolerance ± 6mm) 241. **4) Table:-** Supporting Table for Carom and Chess, foldable steel support with wooden top (size: 24"x24")

ಅರ್ಹ ಸರಬರಾಜುದಾರರು ಈ ಮೇಲ್ಕಂಡ ಸಾಮಗ್ರಿಗಳ ದರಪಟ್ಟಿಯನ್ನು ದಿನಾಂಕ: 03/03/2026ರೊಳಗಾಗಿ ಸಹಾಯಕ ನಿರ್ದೇಶಕರವರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೆಹರು ಕ್ರೀಡಾಂಗಣ, ಬೀದರ ಕಛೇರಿಗೆ ಸಲ್ಲಿಸಲು ಕೋರಿದೆ.

**ಷರತ್ತುಗಳು:–** 1. ಸಾಮಗ್ರಿಗಳ ಸರಬರಾಜುದಲ್ಲಿ ಅನುಭವ ಹೊಂದಿರಬೇಕು 2. ಅಧಿಕೃತ ಜಿ.ಎಸ್.ಟಿ. ಹೊಂದಿರುವುದು ಹಾಗೂ ಸಾಮಗ್ರಿಗಳನ್ನು ಸರಬರಾಜು ಮಾಡುವಾಗ ಜಿ.ಎಸ್.ಟಿ. ಬಿಲ್ ನೀಡುವುದು. 3.ಬೀದರ ಜಿಲ್ಲೆಯಲ್ಲಿ ಸ್ಥಳಿಯ–ವಾಗಿ ಅಂಗಡಿ/ ಸರಬರಾಜು ಕಛೇರಿ ಹೊಂದಿರತಕ್ಕದ್ದು. 4. ಸದರಿ ಸಾಮಗ್ರಿಗಳ ಮಾದರಿಗಳನ್ನು ದಿನಾಂಕ: 05/03/2026 ರೊಳಗೆ ಈ ಕಛೇರಿಗೆ ಸಲ್ಲಿಸುವುದು.ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ:9980026489 ಗೆ ಸಂಪರ್ಕಿಸಲು ಕೋರಿದೆ.

**ಸಹಿ/– ಸಹಾಯಕ ನಿರ್ದೇಶಕರು**

**ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,ಬೀದರ.**

ವಾ.ಸಾ.ಸಂ.ಇ/ಬೀದರ/350/ಕೆ.ಎಸ್.ಎಂ.ಸಿ.&ಎ/2025–26



**ಚುನಾವಣಾಧಿಕಾರಿಗಳು, ಹುಮನಾಭಾದ ರಾಜರಾಜೇಶ್ವರಿ ಪತ್ತಿನ ಸೌಹಾರ್ದ ಸಹಕಾರಿ ನಿ.,**

**ಹುಮನಾಬಾದ ತಾ॥ ಹುಮನಾಬಾದ ಜಿ॥ ಬೀದರ**

ನಮೂನೆ 2ಎ

(ನಿಯಮ 5ಇ(3) ಅನ್ನು ನೋಡಿ)

ಸಂಖ್ಯೆ/ಆ.ಮ.ಚು/2025–26 ದಿನಾಂಕ:–24–02–2026

ವಿಷಯ:– ಹುಮನಾಭಾದ ರಾಜರಾಜೇಶ್ವರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹುಮನಾಬಾದ ತಾ॥ ಹುಮನಾಬಾದ ಜಿ॥ ಬೀದರ ಇದರ ಚುನಾವಣಾ ದಿನಾಂಕದಿಂದ ಮುಂದಿನ 05 ವರ್ಷಗಳ ಅವಧಿಗಾಗಿ ಆಡಳಿತ ಮಂಡಳಿಗೆ ಚುನಾವಣೆಜರುಗಿಸುವ ಕುರಿತು

ಉಲ್ಲೇಖ: ಮಾನ್ಯಜಿಲ್ಲಾ ಚುನಾವರ್ಣಾಧಿಕಾರಿಗಳು ಹಾಗೂ ಸಹಕಾರ ಸಂಘಗಳ ಜಂಟಿ ನಿಬಂಧಕರು, ಕಲಬುರಗಿ ಪ್ರಾಂತ ಕಲಬುರಗಿ ಇವರಆದೇಶ ಸಂಖ್ಯೆ: ಜಂನಿಕ/ವಿ–8/125/ಚುನಾವಣೆ/ರಿಆನೇ/ಬಿ.ಜಿ/2025–26 ದಿನಾಂಕ: 19–12–2025

*****

ಉಲ್ಲೇಖಿತ ಆದೇಶದಂತೆ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಶ್ರೀಮತಿ ಉಮಾದೇವಿ, ಹಿರಿಯ ನಿರೀಕ್ಷಕರು ಹಾಗೂ ರಿಟರ್ನಿಂಗ್ ಅಧಿಕಾರಿಗಳು ಹುಮನಾಭಾದ ರಾಜರಾಜೇಶ್ವರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹುಮನಾಬಾದ ತಾ॥ ಹುಮನಾಬಾದ ಜಿ॥ ಬೀದರ ಆದ ನಾನು ಸದರಿ ಸಹಕಾರಿಯ ಚುನಾವಣಾ ದಿನಾಂಕದಿಂದ ಮುಂದಿನ 05 ವರ್ಷದ ಅವಧಿಗಾಗಿ ಆಡಳಿತ ಮಂಡಳಿ ಸದಸ್ಯರ ಚುನಾವಣಾ ವೇಳಾಪಟ್ಟಿಯನ್ನು ಈ ಕೆಳಕಂಡಂತೆ ಪ್ರಕಟಿಸಿದೆ.

ಒಟ್ಟು ಚುನಾಯಿಸಬೇಕಾದ ಸ್ಥಾನಗಳು : 15

ಇದರ ಪೈಕಿ

1) ಸಾಮಾನ್ಯ ಸ್ಥಾನಗಳು : 09

2) ಮೀಸಲಿರುವ ಸ್ಥಾನಗಳು

ಅ) ಪರಿಶಿಷ್ಟ ಜಾತಿ : 01

ಆ) ಪರಿಶಿಷ್ಟ ಪಂಗಡ : 01

ಇ) ಹಿಂದುಳಿದ ವರ್ಗ "ಎ" : 01

ಈ) ಹಿಂದುಳಿದ ವರ್ಗ "ಬಿ" : 01

ಉ) ಮಹಿಳಾ ಮೀಸಲು : 02

ಚುನಾವಣಾ ವೇಳಾ ಪಟ್ಟಿ

| ಕ್ರಮ ಸಂಖ್ಯೆ | ವಿವರ | ದಿನಾಂಕ ಮತ್ತು ವೇಳೆ | ಸ್ಥಳ |
|---|---|---|---|
| (ಎ) | ಆಕಾಂಕ್ಷೆವುಳ್ಳ ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಸಲು ಪ್ರಾರಂಭ ದಿನಾಂಕ (ನಿಯಮ 5ಇ) | ದಿನಾಂಕ 01–03–2026 ನೇ ಬೆಳಿಗ್ಗೆ 11 ರಿಂದ ಮಧ್ಯಾಹ್ನ 3.00 ಘಂಟೆಯವರೆಗೆ. | ಸಹಕಾರಿಯ ಕಾರ್ಯಾಲಯದಲ್ಲಿ |
| (ಬಿ) | ಆಕಾಂಕ್ಷೆವುಳ್ಳ ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ (ನಿಯಮ 5ಇ) | ದಿನಾಂಕ 07–03–2026 ನೇ ಬೆಳಿಗ್ಗೆ 11 ರಿಂದ ಮಧ್ಯಾಹ್ನ 3.00 ಘಂಟೆಯವರೆಗೆ. | ಸಹಕಾರಿಯ ಕಾರ್ಯಾಲಯದಲ್ಲಿ |
| (ಸಿ) | ರಿಟರ್ನಿಂಗ್ ಅಧಿಕಾರಿಯಿಂದ ನಾಮಪತ್ರಗಳು ಪರಿಶೀಲನೆ (ನಿಯಮ 5ಜಿ) | ದಿನಾಂಕ 08–03–2026 ನೇ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.00 ಘಂಟೆಯವರೆಗೆ | – " – |
| (ಡಿ) | ರಿಟರ್ನಿಂಗ್ ಅಧಿಕಾರಿಯಿಂದ ಕ್ರಮಬದ್ಧವಾಗಿ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ (ನಿಯಮ 5ಐ) | ದಿನಾಂಕ 08–03–2026 ನೇ ನಾಮನಿರ್ದೇಶನ ಪತ್ರಗಳ ಪರಿಶೀಲನೆ ನಂತರ | ಸಹಕಾರಿಯ ನೋಟೀಸ್ ಬೋರ್ಡಿನಲ್ಲಿ ಪ್ರಕಟಿಸುವುದು |
| (ಇ) | ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳಿಂದ ನಾಮಪತ್ರಗಳ ಹಿಂತೆಗೆತಕ್ಕೆ ಕೊನೆಯ ದಿನ. (ನಿಯಮ 5ಹೆಚ್) | ದಿನಾಂಕ :– 09–03–2026 ನೇ ಮುಂಜಾನೆ 10:00 ಗಂಟೆಯಿಂದ ಮಧ್ಯಾಹ್ನ 3.00 ಘಂಟೆಯೊಳಗೆ | ಸಹಕಾರಿಯ ಕಾರ್ಯಾಲಯದಲ್ಲಿ |
| (ಎಫ್) | ರಿಟರ್ನಿಂಗ್ ಅಧಿಕಾರಿಯಿಂದ ಕ್ರಮಬದ್ಧ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ (ನಿಯಮ 5ಐ) | ದಿನಾಂಕ :– 09–03–2026 ನೇ ಮಧ್ಯಾಹ್ನ 4.00 ಘಂಟೆಯ ನಂತರ. | ಸಹಕಾರಿಯ ನೋಟೀಸ್ ಬೋರ್ಡಿನಲ್ಲಿ ಪ್ರಕಟಿಸುವುದು |
| (ಜಿ) | ಚಿಹ್ನೆಯ ಸಹಿತ ಕ್ರಮಬದ್ಧವಾಗಿ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿ(ನಿಯಮ 5ಜೆ) | ದಿನಾಂಕ 09–03–2026 ನೇ ಬೆಳಿಗ್ಗೆ 11:00 ರಿಂದ 3.00 ಘಂಟೆಗೆ | – " – |
| (ಹೆಚ್) | ರಿಟರ್ನಿಂಗ್ ಅಧಿಕಾರಿಯಿಂದ ಅಭ್ಯರ್ಥಿಗಳು ಅಪೇಕ್ಷಿಸಿದಲ್ಲಿ ಚಿಹ್ನೆಗಳ ಹಂಚಿಕೆ (ನಿಯಮ 5ಜೆ) | ದಿನಾಂಕ :– 11–03–2026 ನೇ ಮದ್ಯಾಹ್ನ 4.30 ಘಂಟೆಗೆ | – " – |
| (ಐ) | ಮತದಾನದ ದಿನಾಂಕ ಮತ್ತು ಸಮಯ | ದಿನಾಂಕ: 15–03–2026 ನೇ ಬೆಳಗ್ಗೆ 09–00ರಿಂದ ಮದ್ಯಾಹ್ನ4–00 ಘಂಟೆಯವರೆಗೆ | ಸಹಕಾರಿಯ ಕಾರ್ಯಾಲಯದಲ್ಲಿ |
| | ಮತ ಎಣಿಕೆಯ ದಿನ ಮತ್ತು ದಿನಾಂಕ | ದಿನಾಂಕ: 15–03–2026 ನೇ ಮತದಾನದ ಅವಧಿ ಮುಗಿದ ನಂತರ | – " – |
| (ಜೆ) | ರಿಟರ್ನಿಂಗ್ ಅಧಿಕಾರಿಯಿಂದ ಫಲಿತಾಂಶ ಘೋಷಣೆ | ದಿನಾಂಕ: 15–03–2026 ನೇ ಮತ ಎಣಿಕೆ ಮುಗಿದ ನಂತರ | ಸಹಕಾರಿಯ ನೋಟೀಸ್ ಬೋರ್ಡಿನಲ್ಲಿ ಪ್ರಕಟಿಸುವುದು |

–: ವಿಶೇಷ ಸೂಚನೆ :–

1. ಚುನಾವಣೆ ಮೂಲಕ ಆಯ್ಕೆ ಮಾಡಬೇಕಾದ ಸ್ಥಾನಗಳು 15 ಇರುತ್ತದೆ.
2. ಉಮೇದುವಾರರು ತಮ್ಮ ನಾಮಪತ್ರಗಳನ್ನು ರಿಟರ್ನಿಂಗ್ ಆಫೀಸರ್‌ಗೆ ಖುದ್ದಾಗಿ ಸಲ್ಲಿಸತಕ್ಕದ್ದು.
3. ಸ್ಪರ್ಧಿಸುವ ಉಮೇದುವಾರರಿಗೆ ಚುನಾವಣೆ ಚಿಹ್ನೆಗಳನ್ನು ಕೊಡುವ ಅಂತಿಮ ಅಧಿಕಾರ ರಿಟರ್ನಿಂಗ ಅಧಿಕಾರಿಗೆ ಇರುತ್ತದೆ.
4. ಉಮೇದುವಾರಿಕೆಯನ್ನು ನಾಮಪತ್ರ ಹಾಗೂ ಉಮೇದುವಾರಿಕೆ ಹಿಂತೆಗೆದುಕೊಳ್ಳಲು ಬೇಕಾಗುವ ನೋಟೀಸುಗಳು ಸಹಕಾರಿಯ ಸಕ್ಷಮ ಪ್ರಾಧಿಕಾರಿದಿಂದ ಪಡೆದ ಕಚೇರಿಯಲ್ಲಿ ಲಭ್ಯವಿರುತ್ತವೆ.
5. ಆಡಳಿತ ಮಂಡಲಿಯ ನಿರ್ದೇಶಕರಾಗಿ ಸ್ಪರ್ಧಿಸುವವರು ಪ.ಜಾತಿ ಪ.ಪಂಗಡ ಹಾಗೂ ಹಿಂದುಳಿದ ವರ್ಗದವರು ಸಕ್ಷಮಾ ಪ್ರಾಧಿಕಾರದಿಂದ ಪಡೆದ ಜಾತಿ ಪ್ರಮಾಣ ಪತ್ರ ಕಡ್ಡಾಯವಾಗಿ ಸಲ್ಲಿಸುವುದು.
6. ಉಮೇದುವಾರಿಕೆಯನ್ನು ಖುದ್ದು ಆಬ್ಯರ್ಥಿಯು ಹಾಜರಾಗಿ ಹಿಂತೆಗೆದುಕೊಳ್ಳತಕ್ಕದ್ದು.
7. ಉಮೇದುವಾರರು ತಮ್ಮ ನಾಮಪತ್ರದೊಂದಿಗೆ ಶೇವಣಿಯಾಗಿ ಸಹಕಾರಿ ಕ್ಷೇತ್ರದಲ್ಲಿ ಸಾಮಾನ್ಯ ರೂ.2000=00 ಜಮಾ ಮಾಡಿ ಪಾವತಿಯನ್ನು ಪಡೆಯುವದು ಹಾಗೂ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಹಿಂದುಳಿದ ವರ್ಗ ಮತ್ತು ಮಹಿಳೆಯರಿಗೆ (ಉಮೇದುವಾರರಿಗೆ) ಇದರ ಅರ್ಧದಷ್ಟು ರೂ.1000=00 ಶೇವಣಿ ಜಮಾ ಮಾಡಿ ಪಾವತಿಯನ್ನು ಪಡೆಯತಕ್ಕದ್ದು.
8. ಮೀಸಲು ಸ್ಥಾನದ ಉಮೇದುವಾರರು ಚುನಾವಣೆಯಲ್ಲಿ ಚಲಾವಣೆಯಾದ ಒಟ್ಟು ಅರ್ಹ ಮತಗಳಲ್ಲಿ 1/10 ಕ್ಕಿಂತ ಕಡಿಮೆ ಮತ ಪಡೆದರೆ ಹಾಗೂ ಸಾಮಾನ್ಯ ಕ್ಷೇತ್ರದ ಉಮೇದುವಾರರು ಚುನಾವಣೆಯಲ್ಲಿ ಚಲಾವಣೆಯಾದ ಒಟ್ಟು ಅರ್ಹ ಮತಗಳಲ್ಲಿ 1/6 ಕ್ಕಿಂತ ಕಡಿಮೆ ಮತಗಳನ್ನು ಪಡೆದರೆ ಅಂತಹ ಉಮೇದುವಾರರ ಶೇವು ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವದು.
9. ನಾಮ ಪತ್ರವನ್ನು ಸಲ್ಲಿಸುವಾಗ ಅಭ್ಯರ್ಥಿಗೆ ಒಬ್ಬ ಸದಸ್ಯನು ಸೂಚಕನಾಗಿ ಸಹಿ ಮಾಡಿ ಸಲ್ಲಿಸತಕ್ಕದ್ದು.
10. ನಾಮಪತ್ರಗಳ ಪರಿಶೀಲನಾ ವೇಳೆಯಲ್ಲಿ ಆಬ್ಯರ್ಥಿಗಳು ಅಥವಾ ಸೂಚಕರು ಹಾಜರಿರಬಹುದು.
11. ನಿರ್ದೇಶಕ ಮಂಡಳಿಗೆ ಆಯ್ಕೆಯಾಗಬೇಕಾದಲ್ಲಿ ಅಧಿನಿಯಮ ಇರಬೇಕಾದ ಅರ್ಹತೆಗಳನ್ನು ಹೊಂದಿರತಕ್ಕದ್ದು.
12. ಚುನಾವಣೆ ಚಿಹ್ನೆಗಳನ್ನು ಸಹಕಾರಿಯ ನೋಟೀಸ್ ಬೋರ್ಡ ಮೇಲೆ ಪ್ರದರ್ಶಿಸಿಸಲಾಗಿದೆ.
13. ಉಮೇದುವಾರರು ಒಂದಕ್ಕಿಂತ ಹೆಚ್ಚಿನ ಕ್ಷೇತ್ರಕ್ಕೆ ನಾಮಪತ್ರವನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.
14. ಆಡಳಿತ ಮಂಡಳಿ ಚುನಾವಣೆಗೆ ಸಂಘದ ಗುರುತಿನ ಚೀಟಿಯು ಕಡ್ಡಾಯವಾಗಿರುತ್ತದೆ.

(ಶ್ರೀಮತಿ ಉಮಾದೇವಿ, ಹಿ. ನಿರೀಕ್ಷಕರು,)
ಸಹಕಾರ ಅಭಿವೃದ್ಧಿ ಅಧಿಕಾರಿ, ಹುಮನಾಬಾದ
ರಿಟರ್ನಿಂಗ ಅಧಿಕಾರಿ
ಹುಮನಾಭಾದ ರಾಜರಾಜೇಶ್ವರಿ ಪತ್ತಿನ ಸೌಹಾರ್ದ ಸಹಕಾರಿ ನಿ.,
ಹುಮನಾಬಾದ ತಾ॥ ಹುಮನಾಬಾದ ಜಿ॥ ಬೀದರ

ಸ್ಥಳ :– ಹುಮನಾಬಾದ
ದಿನಾಂಕ : 24–02–2026

# ಮೇದಾರ ಅಲೇಮಾರಿ ಅಭಿವೃದ್ಧಿ ನಿಗಮಕ್ಕೆ ರೂ. 250 ಕೋಟಿ ಮೀಸಲಿಡಿ: ಅನಿಲ್ ಕುಮಾರ



**ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.**

ಮೇದಾರ ಅಲೇಮಾರಿ ಅಭಿವೃದ್ಧಿ ನಿಗಮಕ್ಕೆ ರೂ. 250 ಕೋಟಿ ಮೀಸಲಿಡಬೇಕು, ಸರ್ಕಾರದ ವತಿಯಿಂದ ಮೇದಾರ ಕೇತೇಶ್ವರ ಜಯಂತಿ ಆಚರಣೆ ಮಾಡಬೇಕು, ಪೌಷ್ಟಿಕ ಆಹಾರವನ್ನು ಕರ್ನಾಟಕದ ಎಲ್ಲಾ ಮೇದಾ ಸಮುದಾಯಕ್ಕೂ ವಿಸ್ತರಣೆ ಮಾಡಬೇಕು ಎಂದು ಮೇದಾರ ಯುವ ಘಟಕ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅನಿಲ್ ಕುಮಾರ ಲಿಂಗೇರಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ರವರಿಗೆ ಮನವಿಯನ್ನು ಸಲ್ಲಿಸಿದರು.

ಕರ್ನಾಟಕದಲ್ಲಿ ಮೇದಾರ ಸಮುದಾಯ ಅತೀ ಹೆಚ್ಚಿನ ಸಂಖ್ಯೆಯಲ್ಲಿದ್ದು, ಸದರಿ ಸಮುದಾಯ ಅತೀ ನಿರ್ಗತಿಕವಾಗಿದ್ದು, ಅನೇಕ ಜನರು ಸರಕಾರಿ ಸೌಲಭ್ಯಗಳಿಂದ ವಂಚಿತರಾಗಿದ್ದು, ಸದರಿ ಸಮುದಾಯ ಪ.ಪಂಗಡ. ಪಟ್ಟಿಯಲ್ಲಿ 2ನೇ ಸ್ಥಾನದಲ್ಲಿದ್ದು, ಈ ಬಾರಿ ರೂ.250 ಕೋಟಿ ಅನುದಾನ ನೀಡಬೇಕು. ಸದರಿ ನಿಗಮಕ್ಕೆ ಅಧ್ಯಕ್ಷರನ್ನಾಗಿ ನೇಮಕ ಮಾಡಬೇಕು ಎಂದು ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಮೇದಾರ ಯುವ ಘಟಕ ತಾಲೂಕಾ ಯುವ ಪ್ರಧಾನ ಕಾರ್ಯದರ್ಶಿ ಸಾಗರ್ ಮುಂಡರಗಿ ಮುಂತಾದವರಿದ್ದರು.

# ಸಿ.ಜಿ. & ಶುಭಂ ಪಿಯು ಕಾಲೇಜು ಪರವಾನಿಗೆ ಪಡೆಯದೇ ಪ್ರಕಟಣೆ ನೀಡಿದ್ದು: ಬಿರೇಶ ಚಿರತೆನೋರ

**ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**

ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಣ ಜಿಲ್ಲಾಧ್ಯಕ್ಷರು ರವರು ಪತ್ರಿಕಾ ಹೇಳಿಕೆ ಮುಖಾಂತರ ಪದವಿ ಪೂರ್ವ ಶಿಕ್ಷಣ ಅಧಿನಿಯಮದ ಪ್ರಕಾರ 25000 ಚದುರ ಅಡಿಯಲ್ಲಿ ಕಾಲೇಜು ನಿರ್ಮಾಣ ಮಾಡಬೇಕು, ಆದರೆ ಸದರಿ ಕಾಲೇಜಿನವರು 25000 ಚದುರ ಅಡಿ ಜಾಗ ಹೊಂದಿರುವುದಿಲ್ಲ. ಇಲಾಖೆ ನಿಗಧಿಪಡಿಸಿದ ನಿಯಮಗಳು ಯಾವುದು ಕೂಡಾ ಪಾಲನೆ ಮಾಡಿರುವುದಿಲ್ಲ. ನಿರಾಕ್ಷೇಪಣೆ ಪ್ರಮಾಣಪತ್ರ ಕೂಡಾ ಪಡೆದಿರುವುದಿಲ್ಲ. ಒಂದೇ ಟ್ರಸ್ಟ ಹೆಸರಿನಡಿ ಎರಡು ಕಾಲೇಜಿನ ಹೆಸರು ಸೇರಿಸಿ ಈಗ ಪ್ರಾರಂಭ ಮಾಡುತ್ತಿರುವುದು ವಿದ್ಯಾರ್ಥಿಗಳ ಜೀವನದ ಜೊತೆ ಚೆಲ್ಲಾಟ ಆಡುತ್ತಿದ್ದಾರೆ. ತಮ್ಮ ದುಡ್ಡಿನ ಆಸೆಗಾಗಿ ವಿದ್ಯಾರ್ಥಿಗಳ ಭವಿಷ್ಯ ಹಾಳು ಮಾಡುತ್ತಿದ್ದಾರೆ. ಜಾಹಿರಾತು ಕರಪತ್ರ ಹಂಚಿರುತ್ತಾರೆ. ಅಗ್ನಿಶಾಮಕದಳ, ಲೋಕೋಪಯೋಗಿ, ನಗರಾಭಿವೃದ್ಧಿ ಪ್ರಾಧಿಕಾರ, ಅನುಮತಿ ಕೂಡಾ ಪಡೆಯದೇ ಇರುವುದು ಅನುಮಾನ ಮೂಡಿದೆ. ಈಗಾಗಲೇ ಯಾದಗಿರಿಯೂ ಶೈಕ್ಷಣಿಕವಾಗಿ ಹಿಂದುಳಿದಿದ್ದು, ಕಡಿಮೆ ಫಲಿತಾಂಶ ಬರುತ್ತಿದ್ದು, ಇಂತಹ ಕಾಲೇಜಿಗಳಿಗೆ ತಾವು ಅನುಮತಿ ನೀಡಬಾರದು.

ಕಾರಣ ಮೇಲ್ಕಂಡ ಅಂಶಗಳು ಪರಿಗಣಿಸಿ, ವಿಶ್ವಗುರು ಎಜುಕೇಷನಲ್ ಟ್ರಸ್ಟ್ ಗುರುಮಠಕಲ್ ವತಿಯಿಂದ ಸಿ.ಜಿ. & ಶುಭಂ ಪಿಯು ಕಾಲೇಜು ಶಹಾಪೂರ ನಲ್ಲಿ ಕಾಲೇಜು ನಡೆಸುತ್ತೇವೆಂದು ಮೇಲಾಧಿಕಾರಿಗಳಿಂದ ಯಾವುದೇ ಪರವಾನಿಗೆ ಪಡೆಯದೇ ಪ್ರಕಟಣೆ



ನೀಡಿದ್ದು, ಕಾನೂನು ಬಾಹಿರವಾಗಿದ್ದು, ಡಿಡಿಪಿಯು ರವರ ಗಮನಕ್ಕೆ ಇದ್ದರೂ ಕೂಡಾ ಕ್ರಮ ಕೈಗೊಂಡಿರುವುದಿಲ್ಲ. ಶುಭಂ ಕಾಲೇಜು ಮಾತ್ರ ಪರವಾನಿಗೆ ಪಡೆದಿದ್ದು, ಸಿ.ಜಿ. ಅಕಾಡೆಮಿ ಯಾವುದೇ ಪರವಾನಿಗೆ ಪಡೆಯದೇ ಆ ಕಾಲೇಜನ್ನು ಜಂಟಿಯಾಗಿ ಮಾಡಿ, ಶಿಕ್ಷಣ ನೀಡುತ್ತೇವೆಂದು ಪ್ರಚಾರ ಮಾಡಿದ್ದು ಕಾನೂನು ಬಾಹಿರವಾಗಿದ್ದು, ಈಗಿರುವ ಶುಭಂ ಕಾಲೇಜಿನ ಪರವಾನಿಗೆಯನ್ನು ರದ್ದು ಮಾಡಿ, ಇವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಲು ಪತ್ರಿಕಾ ಹೇಳಿಕೆ ಮೂಲಕ ತಿಳಿಸಲಾಗಿದ್ದು, ಇದಕ್ಕೂ ಕ್ರಮ ಕೈಗೊಳ್ಳದೇ ಹೋದಲ್ಲಿ ಮುಂದಿನ ದಿನ ಹಂತ-ಹಂತವಾಗಿ ಹೋರಾಟ ಮಾಡಲಾಗುವುದೆಂದು ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಣ ಜಿಲ್ಲಾಧ್ಯಕ್ಷ ಬಿರೇಶ ಚಿರತೆನೋರ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಲಾಗಿದೆ. ಈ ಸಂದರ್ಭದಲ್ಲಿ ಶಿವಕುಮಾರ ಬೆಂಕಿ, ಭೀಮಾಶಂಕರ ಹೊನ್ನಪ್ಪನೋರ, ಚಂದ್ರಶೇಖರ ಮಗ್ಗ ಸೀಮನ್ ಅಬ್ಬೆತುಮಕೂರ, ಶಿವಕುಮಾರ ಬೆಂಕಿ, ಶಿವು ಪಾಟೀಲ್, ಶರಣು ದುಗನೂರ, ವಿಜಯಕುಮಾರ ಗೂಡೂರ ಮುಂತಾದವರು ಇದ್ದರು

# ಭಾವೈಕ್ಯತೆಯಿಂದ ಬಾಳೋಣ: ಭೀಮಾಶಂಕರ



**ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.**

ನಮ್ಮ ರಾಷ್ಟ ಹಲವು ಭಾಷೆಗಳನ್ನ ನಾಡು ನುಡಿಯ ಸಂಸ್ಕೃತಿಯನ್ನು ಹೊಂದಿ ಭಾವೈಕ್ಯತೆಯಲ್ಲಿ ಏಕತೆಯನ್ನು ಸಾರುವ ಐಕ್ಯಕ ರಾಷ್ಟವಾಗಿದೆ, ನಾವೆಲ್ಲರೂ ಸಮಾನರು ಮಾನವ ಜಾತಿ ಎಂಬ ಸಂಕಲ್ಪದೊಂದಿಗೆ ಬದುಕುವ ಎಂದು ಭೀಮಾ ಜ್ಯೋತಿ ಗ್ರಾಮೀಣಾಭಿವೃದ್ಧಿ ಶಿಕ್ಷಣ ಸಂಸ್ಥೆಯ ಜಿಲ್ಲಾಧ್ಯಕ್ಷ ಭೀಮಾಶಂಕರ ಯರಗೋಳ ಹೇಳಿದರು.

ಯಾದಗಿರಿ ತಾಲೂಕಿನ ಕಟಗಿಶಹಾಪುರ್ ಗ್ರಾಮದಲ್ಲಿ ನಡೆದ ತಾಲೂಕ ಸಮಾಜ ಕಲ್ಯಾಣ ಇಲಾಖೆ ಮತ್ತು ಸಮ್ಮನ್ವಯ ಸೇವಾ ಸಂಸ್ಥೆ ವತಿಯಿಂದ ಆಯೋಜಿಸಿರುವ ಅಸ್ಪೃಶ್ಯತೆ ನಿವಾರಣೆ ದೌರ್ಜನ್ಯ ತಡೆ, ವಿಚಾರಗೋಷ್ಠಿ ಅರಿವು ಬೀದಿ ನಾಟಕವನ್ನು ತಮಟೆ ಬಾರಿಸುವ ಮೂಲಕ ಚಾಲನೆಯನ್ನು ನೀಡಿ ಮಾತನಾಡಿದರು. ಡಾ. ಬಿ. ಆರ್. ಅಂಬೇಡ್ಕರ್ ಅವರು ರಚಿಸಿರುವ ಮಹಾಗ್ರಂಥ ಸವಿಧಾನವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ನಮಗೆ ದೊರಕಬೇಕಾದ ಮೂಲಭೂತ ಸೌಕರ್ಯಗಳನ್ನು, ಮೂಲಭೂತ ಕರ್ತವ್ಯಗಳನ್ನ ಪಡೆದುಕೊಂಡು ಆರ್ಥಿಕವಾಗಿ ಸಾಮಾಜಿಕವಾಗಿ ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಲು ಸಂವಿಧಾನ ಅಧ್ಯಯನ ಮಾಡಿ ನಿಜ ಜೀವನದಲ್ಲಿ ಅನುಸರಿಸಿಕೊಂಡಾಗ ಮಾತ್ರ ನಮ್ಮ ಜೀವನ ಸಾರ್ಥಕವಾಗುತ್ತದೆ ಮತ್ತು ಅಸ್ಪೃಶ್ಯತೆಯನ್ನು ಮಾಡಿದ ವಿರುದ್ಧ ಕ್ರಿಮಿನಲ್ ಮುಖದೊಮ್ಮೆ ದಾಖಲಿಸಿ ಕಾನೂನಿನ ಕ್ರಮ ಕೈಗೊಳ್ಳಲಾಗುವುದು ಎಂದು ಸಾರ್ವಜನಿಕರಿಗೆ ಸಂವಿಧಾನದ ಬಗ್ಗೆ ಅರಿವನ್ನ ಮೂಡಿಸಿದ್ದರು. ಈ ಸಂದರ್ಭದಲ್ಲಿ ಗ್ರಾಮ ಹಿರಿಯ ಮುಖಂಡರಾದ ಮಹಾಲಿಂಗ, ಮಲ್ಲಪ್ಪ, ಮಂಜುನಾಥ್ ಕ-ರಿಯ, ಶಿವು ಯರಗೋಳ, ಸಮನ್ವಯ ಸೇವಾ ಸಂಸ್ಥೆಯ ಅಧ್ಯಕ್ಷ ದೇವಿಂದ್ರ ಯಾದಗಿರಿ ಹಾಗೂ ಗ್ರಾಮದ ಹಿರಿಯ ಮುಖಂಡರು, ಮಹಿಳೆಯರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಮಾನವರೆಲ್ಲ ಒಂದು ನಾವೆಲ್ಲ ಬಂಧು ಒಗ್ಗಟ್ಟಿನಿಂದ ಬದುಕೋಣ: ನಾಟೇಕರ್



**ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಯಾದಗಿರಿ ತಾಲೂಕಿನ

ಕೊಯಿಲೂರು ಗ್ರಾಮದ ಹಣಮಂತ ದೇವಸ್ಥಾನ ಆವರಣದಲ್ಲಿ ಸ್ವರ ಸಾಮ್ರಾಟ ಸಂಗೀತ ಸಾಮಾಜಿಕ ಹಾಗೂ ಸಂಸ್ಕೃತಿಕ ಕಲಾ ಸಂಸ್ಥೆ ಹಾಗೂ ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ತಾಲೂಕು ಸಮಾಜ ಕಲ್ಯಾಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಅಸ್ಪೃಶ್ಯತೆ ನಿವಾರಣೆ ಹಾಗೂ ದೌರ್ಜನ್ಯ ನಿಯಂತ್ರಣ ಅಧಿನಿಯಮದಡಿಯಲ್ಲಿ ಮೂಡಿಸುವ ಜಾಗೃತಿ ಕುರಿತು ವಿಚಾರವಾಗಿ ಬೀದಿ ನಾಟಕ ಪ್ರದರ್ಶನ ಜರುಗಿತು. ಈ ವೇಳೆ ಸಂಸ್ಥೆಯ ಅಧ್ಯಕ್ಷರಾದ ಶರಣು ಎಸ್ ನಾಟೇಕರ್ ಮಾತನಾಡಿ ಅವರು ಮಾನವರೆಲ್ಲ

ಒಂದು ನಾವೆಲ್ಲ ಬಂಧು, ಸಾರ್ವಜನಿಕ ಸ್ಥಳದಲ್ಲಿ ಯಾವುದೇ ಜಾತಿಬೇಧ ಮಾಡಬಾರದು ಎಲ್ಲರೂ ಒಗ್ಗಟ್ಟಿನಿಂದ ಬಾಳಬೇಕೆಂದು ಗ್ರಾಮಸ್ಥರಲ್ಲಿ ಜನರಿಗೆ ಅರಿವು ಮೂಡಿಸಿದರು. ಈ ಸಂದರ್ಭದಲ್ಲಿ ಮಲ್ಲಪ್ಪ ಚಟ್ಟೇರಕರ್, ಮಲ್ಲಿಕಾರ್ಜುನ ಕಾಗಿ, ಶಿವಮ್ಮ ಮಾಳುರೂ, ಗಂಗಿಮಾಳಮ್ಮ, ಶಿವುಕುಮಾರ್ ಕೌಳೂರು ಸೇರಿದಂತೆ ಗ್ರಾಮಸ್ಥರು ಇದ್ದರು.

# ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

**ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**

ಬಾಗಲಕೋಟೆ ವಿಭಾಗ ವ್ಯಾಪ್ತಿಯ 110 ಕೆವಿ ವಿದ್ಯುತ್ ಕೇಂದ್ರಗಳ 4ನೇ ತ್ರೈಮಾಸಿಕ ನಿರ್ವಹಣಾ ಕಾರ್ಯದ ಪ್ರಯುಕ್ತ ಫೆಬ್ರವರಿ 28 ರಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆವರೆಗೆ 110 ಕೆವಿ ವಿದ್ಯುತ್ ಕೇಂದ್ರಗಳಿಂದ ಸರಬರಾಜು ಆಗುವ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬಾಗಲಕೋಟೆ ಹೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. 110 ಕೆವಿ ಬಾಗಲಕೋಟೆ ವಿವಿ ಕೇಂದ್ರ ವ್ಯಾಪ್ತಿಯಲ್ಲಿ ಬರುವ ವಿದ್ಯಾಗಿರಿ, ಗದ್ದನಕೇರಿ ಎನ್.ಜೆ.ವಾಯ್, ಗದ್ದನಕೇರಿ ಐಪಿ, ಬಾಗಲಕೋಟೆ ಪಟ್ಟಣ-1, ಯಡಹಳ್ಳಿ ಐಪಿ-2, ವೀರಾಪೂರ, ಕೆಇಬಿ ಕಾಲೋನಿ, ಬಾಗಲಕೋಟೆ ಪಟ್ಟಣ-2 ಸಿಂದಗಿ, 110 ಕೆವಿ ಶಿಗಿಕೇರಿ ಕೇಂದ್ರದ ಎ.ವಿ. ಆಚಿಜನೇಯ ಪ್ರಸಾದ ಸೋಲಾರ, ಗುಂಡನಪಲ್ಲಿ, ಸಂಗಮ ಕ್ರಾಸ್, ಹೊನ್ನಾಕಟ್ಟಿ, ಬೇವಿನಮಟ್ಟಿ, ಬಾಗಲಕೋಟೆ ನೀರು ಸರಬರಾಜು, ಐಪಿ ಸೆಟ್, ಆರ್.ಸ್ಕೂಲ್ ಎನ್.ಜೆ.ವಾಯ್, ಬಿವಿವಿಎಸ್ ಕ್ಯಾಂಪಸ್, ಕಾಲೋನಿ, ಕೆವಿಕೆ ಮತ್ತು ಶಿಗಿಕೇರಿ ಗ್ರಾಮ ಐಪಿ. 110 ಕೆವಿ ಗುಳೇದಗುಡ್ಡ ವ್ಯಾಪ್ತಿಯ ದೊಡ್ಡಣ್ಣವರ ಇಎಚ್‌ಟಿ, ಅಕೆಮಿ ಸೋಲಾರ ಐಪಿಸಿ, ಶಿರೂರ, ಕಮತಗಿ, ಬೂದಿನಗಡ, ನಾಗರಾಳ, ನಂದಿಕೇಶ್ವರ, ಗುಳೇದಗುಡ್ಡ, ಆಸಂಗಿ, ಹಳದೂರ, ಇಂಜಿನವಾರಿ, ತೋಗುನಶಿ ಎನ್‌ಜೆವಾಯ್, ಮುಕೇಶ್ವರಿ ಟೌನ್, 110 ಬೆನಕಟ್ಟಿ ಕೇಂದ್ರದ ಮೆಲ್‌ಬ್ರೋ ಶುಗಸ್ಸ್, ಕಿರಸೂರ ಎನ್‌ಜೆವಾಯ್, ಬೆನಕಟ್ಟಿ, ಮಲ್ಲಮ್ಮದೇವಿ, ಮಸಾರಿ, ಹನುಮಾನ, 110 ಕೆವಿ ನಾಗರಾಳ ಎಸ್ ಕೇಂದ್ರದ ಲಾಯದಗುಂದಿ, ನಾಗರಾಳ, ಚಿಮ್ಮಲಗಿ, ಮಂಗಳಗುಡ್ಡ, ಶಂಕರಲಿಂಗ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

# ಕುರಿ, ಮೇಕೆ ಘಟಕ ಸ್ಥಾಪನೆಗೆ ಅರ್ಜಿ

**ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**

ಪ್ರಸಕ್ತ 2025-26ನೇ ಸಾಲಿನಲ್ಲಿ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದಿಂದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಸಮುದಾಯದವರಿಗೆ ವಿಶೇಷ ಘಟಕ ಯೋಜನೆ ಅಡಿಯಲ್ಲಿ ಜಿಲ್ಲೆಗೆ 18 ಜನ ಫಲಾನುಭವಿಗಳು ಹಾಗೂ ಗಿರಿಜನ ಉಪ ಯೋಜನೆಯಡಿ 5 ಜನ ಫಲಾನುಭವಿಗಳಿಗೆ ಕುರಿ, ಮೇಕೆ (10+1) ಘಟಕ ಸ್ಥಾಪಿಸುವ ಸಲುವಾಗಿ ಅರ್ಜಿ ಆಹ್ವಾನಿಸಲಾಗಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕೂಲ ಕಾರ್ಮಿಕರು, ಕೃಷಿ ಕಾರ್ಮಿಕರು ಮತ್ತು ಪಶು ಸಂಗೋಪನೆಯಲ್ಲಿ ತೊಡಗಿಸಿಕೊಂಡ ಆಸಕ್ತರನ್ನು ಆಯ್ಕೆ ಮಾಡಲಾಗುವುದು. ಅರ್ಜಿದಾರರು ಆರ್‌ಡಿ ನಂಬರ ಇರುವ ಜಾತಿ ಪ್ರಮಾಣ ಪತ್ರ ಕಡ್ಡಾಯವಾಗಿ ಹೊಂದಿರಬೇಕು. ರೇಷನ್ ಕಾರ್ಡ್, ಫ್ರೂಟ್ಸ್ ತಂತ್ರಾಂಶದಲ್ಲಿ ನೋಂದಣಿಯಾಗಿರಬೇಕು.

ಆಸಕ್ತರು ಅರ್ಜಿಗಳನ್ನು ಆಯಾ ತಾಲೂಕಿನ ಮುಖ್ಯ ಪಶುವೈದ್ಯಾಧಿಕಾರಿಗಳು(ಆಡಳಿತ), ಪಶು ಆಸ್ಪತ್ರೆಯಿಂದ ಪಡೆದುಕೊಂಡು ಪ್ರಕಟಣೆ ದಿನಾಂಕದಿಂದ 10 ದಿನಗಳ ಒಳಗಾಗಿ ಅರ್ಜಿಗಳನ್ನು ದ್ವಿಪ್ರತಿಯಲ್ಲಿ ಸಲ್ಲಿಸುವಂತೆ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಆಯಾ ಪಶು ಆಸ್ಪತ್ರೆಗಳನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

# ಅಮರೇಶ್ವರ ಜಾತ್ರೆ ಆರೋಗ್ಯ ಇಲಾಖೆ ಸಿದ್ಧತೆ

**ಮಲ್ಲಮ್ಮ ನುಡಿ ವಾರ್ತೆ ಲಿಂಗಸುಗೂರು:**

ತಾಲ್ಲೂಕಿನ ಪ್ರಸಿದ್ಧ ಶ್ರೀ ಅಮರೇಶ್ವರ ಜಾತ್ರಾ ಅಂಗವಾಗಿ ಸಹಸ್ರಾರು ಭಕ್ತ ಜನ ಆಗಮಿಸುವ ಹಿನ್ನೆಲೆ ಆರೋಗ್ಯ ಇಲಾಖೆಯ ಜಿಲ್ಲಾ ಸಮೀಕ್ಷಣ ಅಧಿಕಾರಿಗಳು ಅಮರೇಶ್ವರ ಕ್ಷೇತ್ರ ಹಾಗೂ ದೇವರ ಭೂಪುರ ಗ್ರಾಮದ ಕುಡಿಯುವ ನೀರಿನ ಮೂಲಗಳ ಪರಿಶೀಲನೆ ಮಾಡಿ ನಿರ್ವಹಣೆ ಕುರಿತು ಗುರಗುಂಟ ಆರೋಗ್ಯ ಕೇಂದ್ರದ ಹಾಗೂ ಪಂಚಾಯತಿ ಸಿಬ್ಬಂದಿಯವರಿಗೆ ಸೂಕ್ತ ಮಾರ್ಗದರ್ಶನ ಸಲಹೆ ನೀಡಿದರು. ನೀರು ಸಂಗ್ರಹ ತೆ-ೂಟ್ಟಿಯ ಸ್ವಚ್ಛತೆ. ಮತ್ತು ಸಂಗ್ರಹ ಸಾಮರ್ಥ್ಯ ಅನುಗುಣವಾಗಿ ಸುಪರ್ ಕ್ಲೋರಿನೇಶನ್ ಕಾರ್ಯ ಪರಿಶೀಲಿಸಿದರು. ಯಾವುದೇ ವ್ಯತ್ಯಯವಾಗದಂತೆ ಹೆಚ್ಚುವರಿ ಸಿಬ್ಬಂದಿ ನಿಯೋಜನೆ ಮಾಡಿ ಆರೋಗ್ಯ ಸೇವೆ ಒದಗಿಸಲು ತಿಳಿಸಿದರು. ತಾಲೂಕ ಆಡಳಿತ ಸೂಚನೆಯಂತೆ ದೇವರ ಭೂಪುರ



ಪಂಚಾಯತಿ ಹಾಗೂ ದೇವಸ್ಥಾನ ಸಮಿತಿ ನೆರವಿನೊಂದಿಗೆ ಕುಡಿಯುವ ನೀರಿನ ತಾಣಗಳ ಸ್ವಚ್ಛತೆ ನಿಗದಿತ ಕ್ಲೋರಿನೇಶನ್ ಮಾಡಿಸಲಾಗಿದೆ. ಸೊಳ್ಳೆ ನಿಯಂತ್ರಣ ಕ್ರಮ ಕ್ಕಾಗಿ ಫಾಗಿಂಗ್ ಮಾಡಿಸಲಾಗುವುದು. ಜಾತ್ರಾ ಸಮಯ ಮಾರ್ಚ್ 2 ರಿಂದ ಒಂದುವಾರ ಚಿಕಿತ್ಸಾ ಕೇಂದ್ರ ಸ್ಥಾಪಿಸಲಾಗುವುದು. ಮತ್ತು ತುರ್ತು ಸಂದರ್ಭ ನಿರ್ವಹಣೆಗೆ ಸುಸಜ್ಜಿತ ಅಂಬುಲೆನ್ಸ್ ಸೇವೆ ಇರುತ್ತದೆ. ಜನರು ವೈಯಕ್ತಿಕ ಸ್ವಚ್ಛತೆ ಕಾಪಾಡಬೇಕು. ಕರಿದ ಹಾಗೂ ತೆರೆದಿಟ್ಟ ಪದಾರ್ಥಗಳ ಬಳಕೆ ಮಾಡಬಾರದು. ಸಾಬೂನಿನಿಂದ ಕೈ ತೊಳೆಯಬೇಕು. ಬಿಸಿಯಾದ ಆಹಾರ ಸೇವನೆ ಶುದ್ಧ ಕುಡಿಯುವ ನೀರಿನ ಬಳಕೆಗೆ ಕೋರಿದರು. ದೇವಸ್ಥಾನ ಸಮಿತಿ. ಭಕ್ತರು ಹಾಗೂ ಸಾರ್ವಜನಿಕರ ಸಹಕಾರ ಕೋರಿದರು. ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ್. ಸಾಂಕ್ರಾಮಿಕ ರೋಗ ಶಾಸ್ತ್ರಜ್ಞ ಅಶೋಕ ಮಡ್ಡಿಕರ್. ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಶರಣಬಸವ, ಬಾಬಣ್ಣ. ಶಾಮರಾಯ. ಸಮುದಾಯ ಆರೋಗ್ಯ ಅಧಿಕಾರಿ ರಮೇಶ ಪಂಚಾಯಿತಿ ಸಿಬ್ಬಂದಿ ಗುರುಗುಂಟ ವೈದ್ಯಾಧಿಕಾರಿ ಡಾ: ಅಭಿಜಿತ್ ನಾಯ್ಕ್ ಹಾಜರಿದ್ದರು.


# ಕುರುಬರ ಅಭಿವೃದ್ಧಿ ನಿಗಮ ಸ್ಥಾಪಿಸಲು ಕರ್ನಾಟಕ ರಾಜ್ಯ ಮಟ್ಟದ ಕುರುಬರ ಸಂಘದ ಆಗ್ರಹ



**ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.**

ನಾಯ್ಕಲ್ ಗ್ರಾಮದ ಪಿಡ್ಡಪ್ಪ ಅವರ ಅನುಮಾನಾಸ್ಪದ ಸಾವು ನಿಜವಾದ ಕೊಲೆ ಪ್ರಕರಣವನ್ನು ಆತ್ಮಹತ್ಯೆ ಎಂದು ಬಿಂಬಿಸಿರುವುದು ಖಂಡನೀಯವಾಗಿದ್ದು ಅಪರಾಧಿಗಳನ್ನು ತಕ್ಷಣ ಬಂಧಿಸಿ ನ್ಯಾಯ ಒದಗಿಸಬೇಕು ಎಂದು ಕರ್ನಾಟಕ ರಾಜ್ಯಮಟ್ಟದ ಕುರುಬರ ಸಂಘದ ಜಿಲ್ಲಾ ಘಟಕ ಒತ್ತಾಯಿಸಿದೆ. ಈ ಕುರಿತು ನಗರದ ಪತ್ರಿಕಾಭವನದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಅವರು ಮಾತನಾಡಿದರು. ಕರ್ನಾಟಕ ರಾಜ್ಯದಲ್ಲಿ ಕುರುಬ ಸಮುದಾಯದ ಮೇಲೆ ಇತ್ತೀಚೆಗೆ ನಡೆಯುತ್ತಿರುವ ದೌರ್ಜನ್ಯ ಹಲ್ಲೆ ಮತ್ತು ಕೊಲೆ ಪ್ರಕರಣಗಳು ಸಮುದಾಯದ ಜನರಲ್ಲಿ ತೀವ ಆತಂಕ ಮತ್ತು ಆಕ್ರೋಶಕ್ಕೆ ಕಾರಣವಾಗಿವೆ ಎಂದರು. ಯಾದಗಿರಿ ಜಿಲ್ಲೆಯ ವಡಿಗೇರಾ ತಾಲೂಕಿನ ನಾಯ್ಕಲ್ ಗ್ರಾಮದಲ್ಲಿ ಕುರುಬ ಸಮುದಾಯದ ಪಿಡ್ಡಪ್ಪ ಅವರ ಅನುಮಾನಾಸ್ಪದ ಸಾವು ಸಂಭವಿಸಿದ್ದು, ಗ್ರಾಮಸ್ಥರ ಪ್ರಕಾರ ಇದು ಸ್ಪಷ್ಟವಾದ ಕೊಲೆ ಪ್ರಕರಣವಾಗಿದೆ. ಆದ-ರೆ, ಈ ಪ್ರಕರಣದಲ್ಲಿ ಆರೋಪಿಗಳನ್ನು ಇಲ್ಲಿವರೆಗೆ ಬಂಧಿಸದಿರುವುದು ಮತ್ತು ಮರಣೋತ್ತರ ಪರೀಕ್ಷೆ (ಕಠಿಣ ಒಠಡಿ-ಣಜಟ) ವರದಿಯಲ್ಲಿ ಆತ್ಮಹತ್ಯೆ ಎಂದು ಬಿಂಬಿಸಿರುವುದು ಅತ್ಯಂತ ಅನುಮಾನಾಸ್ಪದ ಮತ್ತು ಖಂಡನೀಯವಾಗಿದೆ ಎಂದರು. ಗ್ರಾಮಸ್ಥರು ಮತ್ತು ಸಮುದಾಯದ ಮುಖಂಡರು ಈ ಘಟನೆ ಕೊಲೆ ಎಂಬ ಬಗ್ಗೆ ಸ್ಪಷ್ಟ ಮಾಹಿತಿಯನ್ನು ಹೊಂದಿದ್ದು, ಈ ಕುರಿತು ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಮಾನ್ಯ ಜಿಲ್ಲಾಧಿಕಾರಿಗಳ ಗಮನಕ್ಕೂ ತರಲಾಗಿದೆ. ಆದರೂ ಸಹ, ಈ ಪ್ರಕರಣದಲ್ಲಿ ಇನ್ನೂ ಸೂಕ್ತ ಕಾನೂನು ಕ್ರಮ ಕೈಗೊಳ್ಳದಿರುವುದು ನ್ಯಾಯ ವ್ಯವಸ್ಥೆಯ ಮೇಲೆ ಪ್ರಶ್ನೆ ಮೂಡಿಸಿದೆ. ಅದೇ ರೀತಿ, ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನ ಖಜೂರಿ ಗ್ರಾಮದಲ್ಲಿ ಕುರಿಗಾಹಿ ವೃತ್ತಿಯಲ್ಲಿ ತೊಡಗಿದ್ದ ಕುರುಬ ಸಮುದಾಯದ ವ್ಯಕ್ತಿಯ ಮೇಲೆ ಹಲ್ಲೆ ನಡೆದಿರುವ ಘಟನೆ ಕೂಡ ಸಮುದಾಯದ ಸುರಕ್ಷತೆ ಬಗ್ಗೆ ಗಂಭೀರ ಆತಂಕವನ್ನುಂಟುಮಾಡಿದೆ ಎಂದರು. ರಾಜ್ಯದಲ್ಲಿ ಕುರುಬ ಸಮುದಾಯದ ಮೇಲೆ ನಿರಂತರವಾಗಿ ನಡೆಯುತ್ತಿರುವ ಇಂತಹ ದೌರ್ಜನ್ಯ ಘಟನೆಗಳು ತಕ್ಷಣ ನಿಯಂತ್ರಣಗೊಳ್ಳಬೇಕು. ಕುರುಬ ಸಮುದಾಯವು ರಾಜ್ಯದ ಪ್ರಮುಖ ಹಿಂದುಳಿದ ಸಮುದಾಯವಾಗಿದ್ದು, *ಸರಕಾರ ಕುರುಬರ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಬೇಕು* ಎಂದು ಆಗ್ರಹಿಸಿದರು. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕು 75 ವರ್ಷಗಳು ಕಳೆದರೂ ಸಹ, ಕುರುಬ ಸಮುದಾಯದ ಅಭಿವೃದ್ಧಿಗಾಗಿ ಪ್ರತ್ಯೇಕ "ಕುರುಬರ ಅಭಿವೃದ್ಧಿ ನಿಗಮ" ವನ್ನು ಸ್ಥಾಪಿಸದಿರುವುದು ಸಮುದಾಯದ ಅಭಿವೃದ್ಧಿಗೆ ದೊಡ್ಡ ಅನ್ಯಾಯವಾಗಿದೆ ಎಂದರು. ನಾಯ್ಕಲ್ ಗ್ರಾಮದ ಶ್ರೀ ಪಿಡ್ಡಪ್ಪ ಅವರ ಸಾವಿನ ಪ್ರಕರಣವನ್ನು ಕೊಲೆ ಪ್ರಕರಣವಾಗಿ ಮರು ತನಿಖೆ ನಡೆಸಬೇಕು. ಪ್ರಕರಣಕ್ಕೆ ಸಂಬಂಧಿಸಿದ ನಿಜವಾದ ಆರೋಪಿಗಳನ್ನು ತಕ್ಷಣ ಬಂಧಿಸಿ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಮರಣೋತ್ತರ ಪರೀಕ್ಷೆ ವರದಿಯನ್ನು ಮರು ಪರಿಶೀಲನೆ ಮಾಡಿ ನ್ಯಾಯಸಮ್ಮತ ತನಿಖೆ ನಡೆಸಬೇಕು. ಕುರುಬ ಸಮುದಾಯದವರ ಮೇಲೆ ನಡೆಯುತ್ತಿರುವ ದೌರ್ಜನ್ಯ ಪ್ರಕರಣಗಳಿಗೆ ವಿಶೇಷ ತನಿಖಾ ತಂಡ ರಚಿಸಬೇಕು. ಕುರುಬ ಸಮುದಾಯದ ಸುರಕ್ಷತೆಗೆ ಸರ್ಕಾರ ವಿಶೇಷ ಕ್ರಮ ಕೈಗೊಳ್ಳಬೇಕು ಎಂದರು. ಈ ನ್ಯಾಯಸಮ್ಮತ ಬೇಡಿಕೆಗಳನ್ನು ಸರ್ಕಾರ ತಕ್ಷಣ ಪರಿಗಣಿಸಿ ಕ್ರಮ ಕೈಗೊಳ್ಳದಿದ್ದಲ್ಲಿ, ಕರ್ನಾಟಕ ರಾಜ್ಯದಾದ್ಯಂತ ಕುರುಬ ಸಮುದಾಯದವರು ಸಂಘಟಿತವಾಗಿ ಪ್ರಜಾಪ್ರಭುತ್ವದ ಮಾರ್ಗದಲ್ಲಿ ತೀವು ಹೋರಾಟ ನಡೆಸಲು ಬಾಧ್ಯರಾಗುವ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂದು ಅವರು ಎಚ್ಚರಿಕೆ ನೀಡಿದರು.

ಸರ್ಕಾರವು ತಕ್ಷಣ ಸ್ಪಂದಿಸಿ, ಕುರುಬ ಸಮುದಾಯದ ಸುರಕ್ಷತೆ, ನ್ಯಾಯ ಮತ್ತು ಅಭಿವೃದ್ಧಿಗಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಂಘ ಒತ್ತಾಯಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷರ ಶಿವಕುಮಾರ ಮುನಗಲ್, ಜಿಲ್ಲಾ ಉಪಾಧ್ಯಕ್ಷ ರಾಘವಾಂಕ ಪಾಟೀಲ, ಜಿಲ್ಲಾ ಯೂತ್ ಅಧ್ಯಕ್ಷ ಎಸ್ ನಿಜಲಿಂಗಪ್ಪ , ಯಾದಗಿರಿ ತಾಲೂಕು ಅಧ್ಯಕ್ಷರು ಸಿದ್ದಪ್ಪ ಪೂಜಾರಿ, ಗುರುಮಿಠಕಲ್ ತಾಲೂಕು ಅಧ್ಯಕ್ಷರು ತಾಯಪ್ಪ ಕರಣಿಗಿ ಶಹಾಪುರ ತಾಲೂಕು ಅಧ್ಯಕ್ಷರು ರೇವಣ್ಣ ಸಿದ್ದಪ್ಪ ಉಪಸ್ಥಿತರಿದ್ದರು.



ಬೀದರ:24-02-2026 ರಂದು ನಡೆದ ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿಯ 43ನೇ ವಾರ್ಷಿಕ ಘಟಿಕೋತ್ಸವದಲ್ಲಿ ಬೀದರ್ ಜಿಲ್ಲೆಯ ರೋಹಿತ್ ವಿಜಯ ಜಿರೋಬೆ ಅವರು ಎಂ.ಎಸ್.ಸಿ. ಸಸ್ಯಶಾಸ್ತ್ರ ವಿಭಾಗದ "ಸಸ್ಯ ರೋಗಶಾಸ್ತ್ರ ಮತ್ತು ಸಸ್ಯ ಸಂರಕ್ಷಣೆ" ವಿಷಯದಲ್ಲಿ ಅತ್ಯಧಿಕ ಅಂಕಗಳನ್ನು ಗಳಿಸಿ ರಾಜ್ಯಪಾಲರಾದ (ಗವರ್ನರ್) ಥಾವರ್ ಚಂದ್ ಗೆಹ್ಲೋಟ್ ರವರಿಂದ ಚಿನ್ನದ ಪದಕ ಪಡೆದು ಬೀದರ ಜಿಲ್ಲೆಗೆ ಕೀರ್ತಿ ತಂದಿದ್ದಕ್ಕೆ ಬೀದರ್ ಮೂಲದ ಪ್ರಖ್ಯಾತ ಸಮಾಜ ಸೇವಕಿ ಹಾಗೂ ಪ್ರಸ್ತುತ ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಅಕಾಡೆಮಿಕ್ ಕೌನ್ಸಿಲ್ ಸದಸ್ಯೆಯಾಗಿರುವ ಗುರಮ್ಮ ಸಿದ್ದಾರೆಡ್ಡಿ ರವರು ಅಭಿನಂದನೆಗಳನ್ನು ತಿಳಿಸಿ, ಮುಂದಿನ ಸಂಶೋಧನಾ ಜೀವನಕ್ಕೆ ಶುಭ ಹಾರೈಸಿದರು. (ಮಲ್ಲಮ್ಮ ನುಡಿ ಚಿತ್ರ)


# ಅರ್ಹರ ಹೆಸರು ಮತದಾರರ ಪಟ್ಟಿಯಲ್ಲಿರಲಿ : ಯೋಗೇಶ್ವರ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಅರ್ಹ ಮತದಾರರ ಹೆಸರು ಕೈಬಿಟ್ಟು ಹೋಗದಂತೆ ಯಾವುದೇ ಲೋಪದೋಷಗಳಿಲ್ಲದ ಮತದಾರರ ಪಟ್ಟಿ ಸಿದ್ದಪಡಿಸಲು ಕ್ರಮವಹಿಸಬೇಕು ಎಂದು ಚುನಾವಣಾ ಆಯೋಗದ ಜಂಟಿ ಮುಖ್ಯ ಚುನಾವಣಾಧಿಕಾರಿ ಎಸ್. ಯೋಗೇಶ್ವರ ಹೇಳಿದರು. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ಬಾಗಲಕೋಟೆ ಮತಕ್ಷೇತ್ರದ ಉಪಚುನಾವಣೆಯ ಪೂರ್ವ ಸಿದ್ದತೆ ಕುರಿತು ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅರ್ಹ ಮತದಾರರ ಪಟ್ಟಿ ಸಿದ್ದಪಡಿಸುವಿಕೆ ತುಂಬಾ ಮಹತ್ವದ್ದಾಗಿದೆ. ಈವರೆಗೂ ಶೇ.80ರಷ್ಟು ಮಾತ್ರ ಆಗಿದ್ದು, ಇನ್ನುಳಿದಂತಹ ಮತದಾರರ ಹೆಸರುಗಳನ್ನು 2002ರ ಮತದಾರರ ಪಟ್ಟಿಯೊಂದಿಗೆ ಮ್ಯಾಪಿಂಗ್ ಪ್ರಕ್ರಿಯೆಯಲ್ಲಿ ಪ್ರಗತಿ ಸಾಧಿಸಬೇಕು ಎಂದು ಹೇಳಿದರು.

ತಪ್ಪು ಮಾಹಿತಿ ನೀಡುವವರ ವಿರುದ್ದ ಕೂಡ ಕ್ರಮವಾಗುತ್ತದೆ. ಬಿ ಎಲ್ ಓ ಗಳಿಗೆ ಸರಿಯಾದ ತರಬೇತಿ ನೀಡುವ ಕೆಲಸ ಮೊದಲು ಮಾಡಿ, ತರಬೇತಿ ಹೊಂದಿದ್ದರೆ ಲೋಪದೋಷಗಳಾಗುವದಿಲ್ಲ ಎಲ್ಲವೂ ಶಿಸ್ತುಬದ್ದವಾಗಿರಬೇಕು . ಫಾರ್ಮ ನಂ.6,7ಮತ್ತು 8ನ್ನು ಪರಿಶೀಲಿಸಿ ಎಲ್ಲ ಅರ್ಜಿಗಳನ್ನು ವಿಲೇವಾರಿ ಮಾಡಿಕೊಳ್ಳಬೇಕು. ಉಪಚುನಾವಣೆಯ ಅಗತ್ಯ ಪೂರ್ವ ಸಿದ್ದತೆಗಳನ್ನು ಈಗಲೇ ಮಾಡಿಟ್ಟುಕೊಂಡಿರಿ ಎಂದು ಯೋಗೇಶ್ವರ್ ಸೂಚಿಸಿದರು. ಭಾರತ ಚುನಾವಣಾ ಆಯೋಗದ ಮಾರ್ಗಸೂಚಿಗಳನ್ನು ಉಪ ಚುನಾವಣೆಗೂ ಕಡ್ಡಾಯವಾಗಿ ಪಾಲಿಸಬೇಕಾಗುತ್ತದೆ, ಈ ಹಿನ್ನಲೆಯಲ್ಲಿ ಎಲ್ಲಾ ಮಾದರಿ ನೀತಿ ಸಂಹಿತೆ ಪಾಲನಾ ತಂಡಗಳನ್ನು ಮಾಡಿಟ್ಟುಕೊಳ್ಳಿ. ಚುನಾವಣಾ ನೀತಿ ಸಂಹಿತೆ ಜಾರಿಯಾದ ತಕ್ಷಣ ಎಲ್ಲಾ ತಂಡಗಳು ಜಾಗೃತಿಯಿಂದ ಕಾರ್ಯನಿರ್ವಹಿಸಬೇಕು. ಪೈಡ್ ನ್ಯೂಸ್ ಬಗ್ಗೆ ಗಮನ ನೀಡಬೇಕು. ಕಂಟೆಟ್ ನೋಡಿಕೊಂಡೆ ಜಾಹೀರಾತಿಗೆ ಅನುಮತಿ ನೀಡುವ ಕೆಲಸವಾಗಬೇಕು. ಜಿಪಿಎಸ್ ಇಲ್ಲದ ವಾಹನಗಳಿಂದ ಮತಯಂತ್ರಗಳನ್ನು ಸಾಗಿಸುವ ಕೆಲಸವಾಗಬಾರದು. ಜಿಪಿಎಸ್ ವಾಹನ ಚಾಲಕರಿಗೆ ನಿಗದಿಪಡಿಸಿದ ಸ್ಥಳಗಳಲ್ಲಿಯೇ ವಾಹನ ನಿಲ್ಲಿಸಬೇಕು ಎಂಬ ಸೂಕ್ತ ತಿಳುವಳಿಕೆ ನೀಡಿ ಚುನಾವಣಾ ಕಾರ್ಯದಲ್ಲಿ ಎಲ್ಲರೂ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕಾಗುತ್ತದೆ ಎಂದ ಅವರು, ಒಟ್ಟಾರೆಯಾಗಿ ಚುನಾವಣಾ ಕಾರ್ಯದಲ್ಲಿ ಎಲ್ಲೂ ಲೋಪದೋಷಗಳಾಗದಂತೆ ನೋಡಿಕೊಳ್ಳಬೇಕು ಎಂದರು. ಸಭೆಯಲ್ಲಿ ಜಿಲ್ಲಾಧಿಕಾರಿ ಸಂಗಪ್ಪ, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಬಾಗಲಕೋಟೆ ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ತಹಶೀಲ್ದಾರ ವಾಸುದೇವ ಸ್ವಾಮಿ, ಶೀರೆಸ್ತೇದಾರ ಮಹೇಶ ಪಾಂಡವ ಸೇರಿದಂತೆ ಇತರರು ಇದ್ದರು.

# ಬಸವರಾಜ ಗೌರಗೆ ಬಿಜೆಪಿ ಸನ್ಮಾನ



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯರಾಗಿ ಆಯ್ಕೆಯಾದ ಬಸವರಾಜ ಗೌರಾ ಅವರನ್ನು ಕುಕನೂರ ತಾಲೂಕಿನ ಬಂಜಾರ ಸಮುದಾಯದವರು ಸನ್ಮಾನ ಮಾಡಿ ಅಭಿನಂದಿಸಿದರು.

ಕುಕನೂರಿನ ಗೌರಾ ಗ್ರಾನೈಟ ಬಿಜೆಪಿ ಕಾರ್ಯಾಲಯದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಬಸವರಾಜ ಗೌರಾ ಅವರು ಪಕ್ಷ ನಮ್ಮನ್ನು ಗುರುತಿಸಿ ಈ ಜವಾಬ್ದಾರಿ ನೀಡಿದೆ, ಬಿಜೆಪಿ ನಾಯಕರು ಮತ್ತು ಕಾರ್ಯಕರ್ತರು ನಮ್ಮ ಮೇಲೆ ಇಟ್ಟಿರುವ ನಂಬಿಕೆ ಉಳಿಸಿಕೊಂಡು ಪಕ್ಷ ಬಲವರ್ಧನೆಗೆ ನನ್ನ ಸಾಮರ್ಥ್ಯ ಮೀರಿ ಕೆಲಸ ಮಾಡುತ್ತೇನೆ.

ಈ ಜವಾಬ್ದಾರಿ ನೀಡಿದ ಬಿಜೆಪಿ ವರಿಷ್ಠರಿಗೆ ಹಾಗೂ ಕಾರ್ಯಕರ್ತರ ಋಣ ಹಾಗೂ ಅಭಿಮಾನಕ್ಕೆ ನಾನು ಸದಾ ಚಿರಋಣಿಯಾಗಿರುತ್ತೇನೆ ಎಂದರು.

ಅಭಿನಂದನೆ ಸಲ್ಲಿಸಿ ಮಾತನಾಡಿದ ಗೋರ ಸೇನಾ ರಾಜ್ಯ ಪ್ರಧಾನ ಕಾರ್ಯದರ್ಶಿ ಸುರೇಶ ಬಳೂಟಗಿ ಮಾತನಾಡಿ ಮಾಜಿ ಸಚಿವರಾದ ಹಾಲಪ್ಪ ಆಚಾರ ಹಾಗೂ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯರಾಗಿ ಆಯ್ಕೆಯಾದ ಬಸವರಾಜ ಗೌರಾ ಅವರು ಯಾವಾಗಲೂ ನಮ್ಮ ಬಂಜಾರ ಸಮುದಾಯದ ಜನರ ಮೇಲೆ ಅಪಾರ ಗೌರವ, ಅಭಿಮಾನ,ಕಾಳಜಿ ಹೊಂದಿದ್ದು, ಬಸವರಾಜ ಗೌರಾ ಅವರು ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯರಾಗಿ ಆಯ್ಕೆಯಾಗಿದ್ದು ನಮಗೆಲ್ಲ ಬಹಳ ಸಂತಸ ತಂದಿದೆ, ಅವರು ರಾಜಕೀಯ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಪ್ರಗತಿ ಸಾಧಿಸಲಿ ಎಂದು ಹಾರೈಸಿದರು. ಈ ಸಂಧರ್ಭದಲ್ಲಿ ಸಮುದಾಯದ ಪ್ರಮುಖರಾದ ವಿಶ್ವನಾಥ ಬಳಿಗೇರಿ, ರಾಘವೇಂದ್ರ ಬಳಿಗೇರಿ, ಸೋಮಪ್ಪ ಕಾರಭಾರಿ,ದುರಗಪ್ಪ ಕಟ್ಟಿಮನಿ,ನಾಗರಾಜ ಭಾನಾಪುರ, ಹನಮಂತ ಚವ್ಹಾಣ, ಶಿವು ಮಾರನಾಳ, ಮಹೇಶ ಕಾರಭಾರಿ,ಶಶಿಕುಮಾರ ಕಾರಭಾರಿ,ವಿಜಯ ಚವ್ಹಾಣ, ಇನ್ನಿತರ ಯುವಕರು ಅವರಿಗೆ ಶುಭ ಹಾರೈಸಿದರು.

# ಪ್ರಥಮ ಚಿಕಿತ್ಸೆಯ ಅರಿವು ಅಗತ್ಯ : ಜಗದೀಶ ನಾಯ್ಕ



ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ

ವಾತಾವರಣದಲ್ಲಿ ವ್ಯತ್ಯಾಸಗಳು ಉಂಟಾಗುತ್ತಿದ್ದು ಬಿಸಿಲಿನ ತಾಪಮಾನ ಹೆಚ್ಚಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಮನುಷ್ಯರು ಮತ್ತು ಪ್ರಾಣಿಗಳ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮಗಳು ಕಂಡುಬರುತ್ತಿವೆ. ಆದ್ದರಿಂದ ಪ್ರತಿಯೊಬ್ಬರು ಪ್ರಥಮ ಚಿಕಿತ್ಸೆ ಮತ್ತು ಶೈತ್ಯೋಪಚಾರ ತಿಳಿವಳಿಕೆಯನ್ನು ಹೊಂದಿರಬೇಕು ಎಂದು ತಾಲೂಕು ವೈದ್ಯಾಧಿಕಾರಿ ಡಾ. ಜಗದೀಶ ನಾಯ್ಕ ಹೇಳಿದರು. ಪಟ್ಟಣದ ಜಿ. ಸಿ. ಕಾಲೇಜಿನ ಎನ್.ಎಸ್.ಎಸ್. ಸಮಾರೋಪ ಸಮಾರಂಭದಲ್ಲಿ ಅವರು ಭಾಗವಹಿಸಿ ಮಾತನಾಡಿದರು. ಕೆನರಾ ವೆಲ್‌ಫೆರ್ ಟ್ರಸ್ಟಿನ ಆಡಳಿತಾಧಿಕಾರಿ ರವೀಂದ್ರ ಕೇಣಿ ಎನ.ಎಸ್. ಎಸ್. ಚಟುವಟಿಕೆಗಳಿಂದ ವಿದ್ಯಾರ್ಥಿಗಳಲ್ಲಿ ಶಿಸ್ತು, ಸೇವಾ ಮನೋಭಾವ ಉಂಟಾಗುತ್ತದೆ ಎಂದು ಮಾಹಿತಿ ನೀಡಿದರು.ಪ್ರಾಚಾರ್ಯ ಡಾ. ಎಸ್. ವಿ. ವಸ್ತ್ರದ ಅಧ್ಯಕ್ಷತೆ ವಹಿಸಿದ್ದರು. ಎನ್.ಎಸ್.ಎಸ್. ಶಿಬಿರದ ವರದಿಯನ್ನು ಭಾವನಾ ನಾಯಕ ವಾಚಿಸಿದರು. ಕೀರ್ತಿ ಸಂಗಡಿಗರು ಎನ್.ಎಸ್. ಎಸ್. ಗೀತೆಯನ್ನು ಹಾಡಿದರು. ಶಿಬಿರಾರ್ಥಿಗಳಾದ ಮೇಘನಾ ಗೌಡ, ವೈಷ್ಣವಿ ನಾಯಕ, ಸಾಗರಿಕಾ ನಾಯಕ ಶಿಬಿರದ ಕುರಿತು ಅನಿಸಿಕೆಗಳನ್ನು ಹಂಚಿಕೊಂಡರು. ಇದೇ ಸಂದರ್ಭದಲ್ಲಿ ಸರ್ದಾರ್ ವಲ್ಲಭಾಯಿ ಪಟೇಲರ 150ನೇ ಜನ್ಮ ಜಯಂತಿಯ ಅಂಗವಾಗಿ ಏರ್ಪಡಿಸಲಾಗಿದ್ದ ವಿವಿಧ ಸ್ಪರ್ದೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ನಗದು ಬಹುಮಾನಗಳನ್ನು ವಿತರಿಸಲಾಯಿತು. ಎನ್.ಎಸ್.ಎಸ್. ಅಧಿಕಾರಿ ಡಾ. ನಂಜುಂಡಯ್ಯ ಸ್ವಾಗತಿಸಿದರು. ಶಿಬಿರಾರ್ಥಿ ಸ್ನೇಹಾ ನಾಗ್ವೇಕರ ನಿರೂಪಿಸಿದರು. ವೈಭವ ನಾಯಕ ವಂದಿಸಿದರು.

# ಪ್ರತಿನಿತ್ಯ ಇಷ್ಟಲಿಂಗ ಪೂಜೆ ಮಾಡುವುದರಿಂದ ಏಕಾಗ್ರತೆ ವೃದ್ಧಿ





• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ


ಪ್ರತಿನಿತ್ಯ ಇಷ್ಟಲಿಂಗ ಪೂಜೆ ಮಾಡುವುದರಿಂದ ಏಕಾಗ್ರತೆ ವೃದ್ಧಿಯಾಗಿ ಮನಸ್ಸಿನ ಚಂಚಲತೆ ದೂರಾಗುತ್ತದೆ ಎಂದು ಕೇದಾರ್ ಮಹಾಪೀಠದ 1008 ಜಗದ್ಗುರು ಕೇದಾರ್ ವೈರಾಗ್ಯ ಸಿಂಹಾಸನಾಧೀಶ್ವರ ರಾಹುಲ ಪದವಿ ವಿಭೂಷಿತ ಭಿಮಾಶಂಕರಲಿಂಗಶಿವಾಚಾರ್ಯರು ಹೇಳಿದರು. ಪಟ್ಟಣ ಶ್ರೀ ಜಗದ್ಗುರು ರೇವಣಸಿದ್ದೇಶ್ವರರ ದ್ವಿತೀಯ ವರ್ಷದ ರಥೋತ್ಸವ ಹಾಗೂ ಜಾತ್ರಾಮಹೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಧಾರ್ಮಿಕ ಸಭೆಯ ಪಾವನ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದರು. ಇಷ್ಟಲಿಂಗ ಪೂಜೆ ಮಾಡಿಕೊಳ್ಳುವುದರ ಹಿಂದೆ ಅನೇಕ ವೈಜ್ಞಾನಿಕ ಕಾರಣಗಳಿವೆ ಮತ್ತು ಪ್ರಯೋಜನಗಳಿವೆ. ಇಷ್ಟಲಿಂಗ ಪೂಜೆಯಿಂದ ಆತ್ಮಶಾಂತಿ, ಮಾನಸಿಕ ನೆಮ್ಮದಿ ಸಿಗುತ್ತದೆ. ಇದರಿಂದ ಮನಸ್ಸು ಪರಿವರ್ತನೆ ಜತೆಗೆ ಹೊಸ ಚೈತನ್ಯ ಸಿಗುತ್ತದೆ. ದಿನವೀಡಿ ಉತ್ಸಾಹದಿಂದ ಇರಲು ಸಾಧ್ಯ ಎಂದು ಹೇಳಿದರು.

ಮಾಜಿ ಸಚಿವ ರಾಜಶೇಖರ ಪಾಟೀಲ್ ಮಾತನಾಡಿ, ಇಂದಿನ ಒತ್ತಡದ ಬದುಕಿನಲ್ಲಿ ಎಲ್ಲರಲ್ಲಿಯೂ ಸಂಸ್ಕೃತಿ, ಸಂಸ್ಕಾರ ಮರೆಮಾಚುತ್ತಿದೆ. ಹೀಗಾಗಿ ಎಲ್ಲರೂ ಜಾಗೃತರಾಗಿ ನಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರ ನೀಡುವ ಮೂಲಕ ಮಕ್ಕಳ ಭವಿಷ್ಯದ ನಿರ್ಮಾಣಕ್ಕೆ ಶ್ರಮಿಸಬೇಕು. ಪಟ್ಟಣದ ಸಮಗ್ರ ಅಭಿವೃದ್ಧಿಗೆ ಹಿಂದಿನಿಂದಲೂ ಸಹಕಾರ ನೀಡುತ್ತಾ ಬಂದಿದ್ದೇವೆ. ಮುಂದೆಯೂ ಕೂಡಾ ಪಟ್ಟಣದ ಹಾಗೂ ದೇವಸ್ಥಾನದ ಅಭಿವೃದ್ಧಿಗೆ ತನು ಮನ ಧನದಿಂದ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಶಾಸಕ ಡಾ. ಸಿದ್ದು ಪಾಟೀಲ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಧರ್ಮವಿಲ್ಲದೇ ಜೀವನವಿಲ್ಲ. ಧರ್ಮವನ್ನು ಬಿಟ್ಟರೆ ಮನುಷ್ಯನಾಗಲೂ ಸಾಧ್ಯವಿಲ್ಲ. ಪ್ರತಿಯೊಬ್ಬರು ಧರ್ಮವನ್ನು ಆಚರಿಸಬೇಕು. ಇದರಿಂದ ಜೀವನ ಸಾರ್ಥಕವಾಗುತ್ತದೆ. ಸಮಯವನ್ನು ವ್ಯರ್ಥ ಮಾಡದಂತೆ ಯುವಕರು ಧರ್ಮಾಚರಣೆಯಲ್ಲಿ ಪಾಲ್ಗೊಂಡು ಪ್ರವಚನ ಕೇಳಬೇಕು. ಧ್ಯಾನ ಮಾಡಬೇಕು.

ವಿಶ್ವಕ್ಕೆ ಶ್ರೇಷ್ಠ ಧರ್ಮ ಸನಾತನ ಹಿಂದೂ ಧರ್ಮ ಆ ಧರ್ಮದಲ್ಲಿ ಜನಿಸಿದ ನಾವೆಲ್ಲರೂ ಪುಣ್ಯವಂತರು. ಸಂಸದ ಸಾಗರ್ ಖಂಡ್ರೆ ಮಾತನಾಡಿ, ಇಂದಿನ ಯುವಕರು ಕೆಟ್ಟ ಚಟಗಳಿಂದ ದೂರವಿದ್ದು ಇಂತಹ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳಬೇಕು ಎಂದು ಹೇಳಿದರು. ದೇವಸ್ಥಾನ ಸಮಿತಿ ಅಧ್ಯಕ್ಷ ವಿಜಯಕುಮಾರ್ ಬೊಮ್ಮಣಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ವಿರೋಪಕ್ಷ ಶಿವಾಚಾರ್ಯರು, ಚಂದ್ರಗುಂಡ ಶಿವಾಚಾರ್ಯರು, ರಾಜೇಶ್ವರ ಶಿವಾಚಾರ್ಯರು, ಚಂದ್ರಶೇಖರ ಶಿವಾಚಾರ್ಯರು, ಉಪಮನ್ಯು ಶಿವಾಚಾರ್ಯರು, ಮಲ್ಲಿಕಾರ್ಜುನ್ ಶಿವಾಚಾರ್ಯರು, ದಿಲೀಪಕುಮಾರ ಬಗದಲಕರ್, ಬಸವರಾಜ ಪಾಟೀಲ್ ಬೆಳಕೇರಾ, ಸೂರ್ಯಕಾಂತ ಮಠಪತಿ, ಅಣ್ಣೆಪ್ಪ ವರನಾಳ, ಅಮೀತ ತೊಗಲೂರ್, ವೀರಪ್ಪ ಹೊಸಳ್ಳಿ, ಸೇರಿದಂತೆ ಸಹಸ್ರಾರು ಭಕ್ತರು ಇದ್ದರು.

# ಹಳ್ಳಿಖೇಡ(ಕೆ): ಪರೀಕ್ಷಾ ಕೇಂದ್ರಕ್ಕೆ ಚಾಲನೆ

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ



ಹಳ್ಳಿಖೇಡ (ಕೆ) ಗ್ರಾಮದ ಸರ್ಕಾರಿ ಪ್ರೌಢ ಶಾಲೆ ಹಾಗೂ ಶ್ರೀ ಕಿನ್ನೂರಿ ಭೋಮ್ಮಯ್ಯಾ ಅನುದಾನಿತ ಪ್ರೌಢ ಶಾಲೆಗೆ ಭೇಟಿ ನೀಡಿ ವಿದ್ಯಾರ್ಥಿಗಳ ಜೊತೆ ಶಿಕ್ಷಣದ ಗುಣಮಟ್ಟದ ಬಗ್ಗೆ ಚರ್ಚಿಸಿದೆ. ಶೈಕ್ಷಣಿಕವಾಗಿ ಬಹಳ ಮುಂದುವರೆದಿದ್ದು ಅಲ್ಲಿರುವ ವಿದ್ಯಾರ್ಥಿಗಳನ್ನು ಪರೀಕ್ಷಿಸಿದ ಸಂದರ್ಭದಲ್ಲಿ ತಿಳಿಯಿತು.

ಇದೇ ಸಂದರ್ಭದಲ್ಲಿ ಎಸ್. ಎಸ್.ಎಲ್.ಸಿ ಪರೀಕ್ಷಾ ಕೇಂದ್ರ ಕಾರಣಾಂತರ

ದಿಂದ ರದ್ದುಗೊಂಡಿರುವ ಬಗ್ಗೆ ಗ್ರಾಮಸ್ಥರು ಕೆಲವು ತಿಂಗಳಗಳ ಹಿಂದೆ ನನ್ನ ಗಮನಕ್ಕೆ ತಂದಾಗ ಮೂಲ ಸ್ಥಾನ ಗ್ರಾಮದಲ್ಲಿಯೇ ಸುಮಾರು 300 ರಿಂದ 400 ವಿದ್ಯಾರ್ಥಿಗಳು ಎಸ್.ಎಸ್. ಎಲ್.ಸಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿದ್ದು ನನ್ನ ಗಮನಕ್ಕೆ ತಂದ ಕೂಡಲೇ ಉಪನಿರ್ದೇಶಕರು

ಬೀದರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹುಮನಾಬಾದ ರವರ ಗಮನಕ್ಕೆ ತಂದು ಪುನಃ ಹಳ್ಳಿಖೇಡ (ಕೆ) ಗ್ರಾಮದಲ್ಲಿಯೇ ಪರೀಕ್ಷಾ ಕೇಂದ್ರ ಮುಂದುವರೆಸಲು ಸೂಚಿಸಿರುವ ಪ್ರಯುಕ್ತ ಗ್ರಾಮಸ್ಥರು ನನ್ನನು ಕೈಲಾಸನಾತ ದೇವಾಲಯದಲ್ಲಿ ಆಯೋಜಿಸಿದ ಅಭಿನಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದೆ.

ಈ ಸಂದರ್ಭದಲ್ಲಿ ಶ್ರೀ ಶಿವಕುಮಾರ ಪಾಟೀಲ್ ಮುಸ್ತಾಪುರ, ಸುಭಾಷ ವಾರದ, ಸುಭಾಷ ಚಿಲಶೆಟ್ಟಿ, ಅಣ್ಣಾರಾವ ರಟಕಲ್,

ಸಿದ್ಧರಾಮ ಇಂಡಿ, ಗುರು ಬಸಯ್ಯಾ ಹೀರೆಮಠ, ನಾಗರಾಜ ಚಿಕ್ಕ ಪಾಟೀಲ್, ಪ್ರಭುರಾವ ಬೀರಾದಾರ, ಉದಯಕುಮಾರ ವಾರದ, ಭೀಮಶಾ ಕೊರಿ ಮುಂತಾದವರು ಹಾಜರಿದ್ದರು.

# ಕೆಬಿಎನ್ ವಿಶ್ವವಿದ್ಯಾಲಯದಲ್ಲಿ ಕ್ರ್ಯಾಶ್ ಕೋರ್ಸ್ ಆರಂಭ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ



ಖಾಜಾ ಬಂದನವಾಜ್ ವಿಶ್ವವಿದ್ಯಾಲಯವು ಬೀಕನ್ ಋಂಋ ಸಂಸ್ಥೆಯ ಸಹಯೋಗದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳು ಹಾಗೂ ಸರ್ಕಾರಿ ಸೇವಾ ವೃತ್ತಿಗಳತ್ತ ವಿದ್ಯಾರ್ಥಿಗಳನ್ನು ಮಾರ್ಗದರ್ಶನ ಮಾಡುವ ಉದ್ದೇಶದಿಂದ "A Gateway to Government Jobs" ಎಂಬ ವಿಶೇಷ ಕ್ರ್ಯಾಶ್ ಕೋರ್ಸ್ ಅನ್ನು ಆರಂಭಿಸಿದೆ. ಈ ಕಾರ್ಯಕ್ರಮಕ್ಕೆ ಸಂಬಂಧಿಸಿದ ಕಿಯೋಸ್ಕ್ ಅನ್ನು ಬುಧವಾರ ವಿಶ್ವವಿದ್ಯಾಲಯದ ಆಡಿಟೋರಿಯಂನಲ್ಲಿ ಉದ್ಘಾಟಿಸಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಖಾಜಾ ಬಂದನವಾಜ್ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಅಲಿ ರಝಾ ಮೂಸವಿ ಅವರು ವಿದ್ಯಾರ್ಥಿಗಳಿಗೆ ಪ್ರೇರಣಾದಾಯಕ ಭಾಷಣ ಮಾಡಿದರು. ವಿಶ್ವವಿದ್ಯಾಲಯಗಳು ಸಾಮಾಜಿಕ ಪರಿವರ್ತನೆಗೆ ಕಾರಣವಾಗುವ ಜೊತೆಗೆ ವಿದ್ಯಾರ್ಥಿಗಳ ಬೌದ್ಧಿಕ ಚಿಂತನೆಗಳನ್ನು ರೂಪಿಸುವಲ್ಲಿ ಮಹತ್ವದ ಪಾತ್ರವಹಿಸುತ್ತವೆ ಎಂದು ಅವರು ಹೇಳಿದರು.

ಸರ್ಕಾರಿ ಉದ್ಯೋಗಗಳ ಮಹತ್ವವನ್ನು ವಿವರಿಸಿದ ಅವರು, ಸರ್ಕಾರಿ ಉದ್ಯೋಗಗಳು ಗೌರವ, ಭದ್ರತೆ ಹಾಗೂ ಸಮಾಜ ಸೇವೆಯ ಅವಕಾಶವನ್ನು ಒದಗಿಸುತ್ತವೆ ಎಂದು ತಿಳಿಸಿದರು. ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎಂದು ಕರೆ ನೀಡಿದ ಅವರು, ಯಶಸ್ವಿಯಾದ ವಿದ್ಯಾರ್ಥಿಗಳು ತಮ್ಮ ಕಿರಿಯರಿಗೆ ಆದರ್ಶವಾಗುತ್ತಾರೆ ಎಂದರು. ವಿಶಾಲ ಚಿಂತನೆ, ಪರಿಶ್ರಮ ಮತ್ತು ರಾಷ್ಟ್ರ ನಿರ್ಮಾಣದಲ್ಲಿ ಪಾಲ್ಗೊಳ್ಳುವ ಮನೋಭಾವ ಅಗತ್ಯವೆಂದು ಅವರು ಅಭಿಪ್ರಾಯಪಟ್ಟರು. ವಲಸೆ ಹೋಗುವುದು ಸಮಸ್ಯೆಗಳ ಪರಿಹಾರವಲ್ಲ; ಸರಿಯಾದ ವೃತ್ತಿ ಆಯ್ಕೆ ಮತ್ತು ಶ್ರಮವೇ ವ್ಯಕ್ತಿ ಹಾಗೂ ಸಮಾಜವನ್ನು ಬಲಪಡಿಸುತ್ತದೆ ಎಂದು ಹೇಳಿದರು.ಪ್ರೊ ವೈಸ್ ಚಾನ್ಸಲರ್ ಪ್ರೊ. ಅಫ್ಫಾಕ್ ಅಹ್ಮದ್ ಮಾತನಾಡಿ, ಇಂದಿನ ತೀವ್ರ ಸ್ಪರ್ಧಾತ್ಮಕ ಪರಿಸ್ಥಿತಿಯಲ್ಲಿ ಸರಿಯಾದ ವೃತ್ತಿ ಆಯ್ಕೆ ಮಾಡುವುದು ಸವಾಲಾಗಿದೆ ಎಂದು ಹೇಳಿದರು. ವಿಶ್ವವಿದ್ಯಾಲಯದ ಯಶಸ್ಸು ವಿದ್ಯಾರ್ಥಿಗಳ ಯಶಸ್ಸಿನೊಂದಿಗೆ ನೇರವಾಗಿ ಸಂಬಂಧಿಸಿದೆ ಎಂದು ತಿಳಿಸಿದ ಅವರು, ಮಾರ್ಗದರ್ಶನದ ಅಗತ್ಯತೆಯನ್ನು ಒತ್ತಿಹೇಳಿ, ವಿದ್ಯಾರ್ಥಿ ಕೇಂದ್ರಿತ ಕಾರ್ಯಕ್ರಮವನ್ನು ಆಯೋಜಿಸಿದ ಋಕಿಂಅ ಅನ್ನು ಪ್ರಶಂಸಿಸಿದರು. ರಿಜಿಸ್ಟ್ರಾರ್ ಮಿರ್ ವಿಲಾಯತ್ ಅಲಿ ಈ ಕಾರ್ಯಕ್ರಮವನ್ನು ದೂರದೃಷ್ಟಿಯ ಉಪಕ್ರಮವೆಂದು ಬಣ್ಣಿಸಿ, ಶೈಕ್ಷಣಿಕ ಶ್ರೇಷ್ಠತೆಯನ್ನು ಸಾಧಿಸಲು ಇದು ಮಹತ್ವದ ಹೆಜ್ಜೆಯಾಗಿದೆ ಎಂದು ಹೇಳಿದರು. ವಿದ್ಯಾರ್ಥಿಗಳನ್ನು ಭವಿಷ್ಯದ ರಾಷ್ಟ್ರ ನಿರ್ಮಾತೃಗಳು, ನಾಯಕರು ಹಾಗೂ ಸಾಧಕರಾಗಿ ರೂಪಿಸುವುದು ವಿಶ್ವವಿದ್ಯಾಲಯದ ಉದ್ದೇಶ ಎಂದು ತಿಳಿಸಿದರು. ದಿವಂಗತ ಡಾ. ಸಯ್ಯದ್ ಶಾ ಖುಸ್ರೋ ಹುಸೈನಿಯವರ ದೂರದೃಷ್ಟಿಯ ನಾಯಕತ್ವಕ್ಕೆ ಕೃತಜ್ಞತೆ ಸಲ್ಲಿಸಿದರು. ಡೀನ್ ಅಕಾಡೆಮಿಕ್ಸ್ ಡಾ. ಝುಮಾ ಮೂಸವಿ ಅವರು ನೋಂದಣಿ ವಿಧಾನ, ಆಯ್ಕೆ ಪ್ರಕ್ರಿಯೆ, ಪಠ್ಯಕ್ರಮದ ರಚನೆ, ಅವಧಿ ಹಾಗೂ ತರಗತಿ ವೇಳಾಪಟ್ಟಿಗಳ ಬಗ್ಗೆ ವಿವರಿಸಿದರು. ಸರ್ಕಾರಿ ಉದ್ಯೋಗವು ಕೇವಲ ಉದ್ಯೋಗವಲ್ಲ, ಅದು ರಾಷ್ಟ್ರ ಸೇವೆಯಾಗಿದೆ ಎಂದು ತಿಳಿಸಿದ ಅವರು, ಜನರೇಶನ್ ಚ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳು ಅರ್ಥಪೂರ್ಣ ವೃತ್ತಿ ನಿರ್ಮಾಣಕ್ಕೆ ಸಹಕಾರಿ ಎಂದು ಹೇಳಿದರು. ಬೀಕನ್ ಋಂಋ ಮುಖ್ಯ ಸಲಹೆಗಾರ ಇಕ್ಬಾಲ್ ಅಲಿ ಅವರು ವಿದ್ಯಾರ್ಥಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಸರ್ಕಾರಿ ಉದ್ಯೋಗಗಳತ್ತ ಮುಂದಾಗಲು ಪ್ರೇರೇಪಿಸಿದರು. ಈ ಭಾಗದ ವಿದ್ಯಾರ್ಥಿಗಳ ಸರ್ಕಾರಿ ಉದ್ಯೋಗಗಳಲ್ಲಿ ಭಾಗವಹಿಸುವಿಕೆ ಕಡಿಮೆ ಇರುವುದನ್ನು ಉಲ್ಲೇಖಿಸಿ, ಸರ್ಕಾರಿ ಉದ್ಯೋಗಗಳು ಸ್ಥಿರತೆ, ಗೌರವ ಮತ್ತು ಉತ್ತಮ ವೇತನವನ್ನು ಒದಗಿಸುತ್ತವೆ ಎಂದು ಹೇಳಿದರು. ತರಬೇತಿ ಕಾರ್ಯಕ್ರಮಗಳು ಜ್ಞಾನ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸುತ್ತವೆ ಎಂದು ತಿಳಿಸಿ, ಈ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳುವಂತೆ ಕರೆ ನೀಡಿದರು. ಬೀಕನ್ ಋಂಋ ನಿರ್ದೇಶಕ ಆಸಿಫ್ ಇಕ್ಬಾಲ್ ಅವರು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ವಿವರಿಸಿದರು. ಗಕಋಅ ಅನ್ನು "ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳ ತಾಯಿ" ಎಂದು ಕರೆಯುತ್ತಾ, ಕೋರ್ಸ್‌ನಲ್ಲಿ ಪ್ರಬಂಧ ಬರವಣಿಗೆ, ಡಾಕ್ಯುಮೆಂಟರಿ ಕ್ಲಬ್, ಪುಸ್ತಕ ವಿಮರ್ಶೆ, ಕಾರ್ಯಾಗಾರಗಳು, ಲೀಡರ್ ಶ್ಯಾಡೋ ಕಾರ್ಯಕ್ರಮ, ಸಾಹಿತ್ಯ ಕ್ಲಬ್, ಕ್ಯಾಂಪಸ್ ನ್ಯೂಸ್ ರೂಮ್, ಮಾಕ್ ಸಂದರ್ಶನಗಳು ಹಾಗೂ ವಿದ್ಯಾರ್ಥಿ ಸಂಸತ್ ಸೇರಿದಂತೆ ವಿವಿಧ ಚಟುವಟಿಕೆಗಳನ್ನು ಒಳಗೊಂಡಿರುವುದಾಗಿ ಹೇಳಿದರು. ಬಳಿಕ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಉತ್ತರಿಸಿದರು.

ಕಾರ್ಯಕ್ರಮವು ಶಕೀರುದ್ದೀನ್ ಅವರಿಂದ ನಾತ್ ಪಠಣದೊಂದಿಗೆ ಆರಂಭವಾಯಿತು. ಋಕಿಂಅ ನಿರ್ದೇಶಕ ಡಾ. ಮೊಹಮ್ಮದ್ ಅಬ್ದುಲ್ ಬಶೀರ್ ಅವರು ಅತಿಥಿಗಳನ್ನು ಸ್ವಾಗತಿಸಿದರು. ಫೊರೆನ್ಸಿಕ್ ಮೆಡಿಸಿನ್ ವಿಭಾಗದ ಟ್ಯೂಟರ್ ಡಾ. ತೆಹ್ಸಾನ್ ಕಾರ್ಯಕ್ರಮ ನಿರ್ವಹಿಸಿದರು. ಸಹಾಯಕ ಕುಲಸಚಿವ (ಅಕಾಡೆಮಿಕ್ಸ್) ಸಯ್ಯದ್ ಖುಸ್ರೋ ವಂದನಾರ್ಪಣೆ ಸಲ್ಲಿಸಿದರು.

ವಿಶ್ವವಿದ್ಯಾಲಯದ ಡೀನ್‌ಗಳು, ವಿಭಾಗಾಧ್ಯಕ್ಷರು, ಸಹಾಯಕ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳ ದೊಡ್ಡ ಸಂಖ್ಯೆಯು ಆಡಿಟೋರಿಯಂನಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

# ಶ್ರೀಶೈಲ ಮಹಾಕ್ಷೇತ್ರದಲ್ಲಿ ಯುಗಾದಿ ಮಹೋತ್ಸವ

• ಮಲ್ಲಮ್ಮ ನುಡಿ ವಾರ್ತೆ ಆಂದ್ರಪ್ರದೇಶ

ಶ್ರೀಶೈಲ ಮಹಾಕ್ಷೇತ್ರದಲ್ಲಿ ಮಾರ್ಚ್ 16 ರಿಂದ 20 ರವರೆಗೆ ಯುಗಾದಿ ಮಹೋತ್ಸವಗಳ ಆಚರಣೆ ನಡೆಯಲಿವೆ. ಉತ್ಸವಗಳಿಗೆ ಅಚ್ಚುಕಟ್ಟಾದ ವ್ಯವಸ್ಥೆಗಳನ್ನು ಮಾಡಲಾಗಿದೆ. ಉತ್ಸವ ದಿನಗಳಲ್ಲಿ ಶ್ರೀ ಸ್ವಾಮಿಯ ಅಲಂಕಾರಿಕ ದರ್ಶನಕ್ಕೆ ಮಾತ್ರ ಅವಕಾಶವಿದೆ.

ಉತ್ಸವ ಪ್ರಾರಂಭವಾಗುವ ಮೊದಲು 10 ದಿನಗಳವರೆಗೆ ಪ್ರತಿದಿನ ನಿರ್ದಿಷ್ಟ ಸಮಯಗಳಲ್ಲಿ ನಾಲ್ಕು ಹಂತಗಳಾಗಿ ಶ್ರೀ ಸ್ವಾಮಿಯನ್ನು ಸ್ಪರ್ಶಿಸುವ ಸ್ಪರ್ಶದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ.

ಶ್ರೀಶೈಲ ಮಹಾಕ್ಷೇತ್ರದಲ್ಲಿ ಯುಗಾದಿ ಮಹೋತ್ಸವವು ದಿನಾಂಕ: 16–03–2026 ರಿಂದ 20–03–2026ರವರೆಗೆ ನಡೆಯಲಿದೆ ಎಂದು ಧರ್ಮದರ್ಶಿ ಮಂಡಳಿಯ ಅಧ್ಯಕ್ಷರಾದ ಶ್ರೀಪೋತುಗುಂಟ ರಮೇಶ್ ನಾಯ್ಡು ಮತ್ತು ಸ್ಪೆಷಲ್ ಗ್ರೇಡ್ ಡೆಪ್ಯುಟಿ ಕಲೆಕ್ಟರ್ ದೇವಸ್ಥಾನದ ಕಾರ್ಯನಿರ್ವಾಹಣ ಅಧಿಕಾರಿ ಎಂ.ಶ್ರೀನಿವಾಸ ರಾವ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಉತ್ಸವ ಸಂದರ್ಭದಲ್ಲಿ ಒಟ್ಟು 7 ಲಕ್ಷದಿಂದ 8 ಲಕ್ಷ ಭಕ್ತರು ಶ್ರೀಶೈಲ ಮಹಾಕ್ಷೇತ್ರವನ್ನು ಸಂದರ್ಶಿಸಬಹುದೆಂದು ಭಾವಿಸಲಾಗಿದೆ. ಉತ್ಸವಗಳು ಪ್ರಾರಂಭವಾಗುವ 10 ದಿನಗಳ ಮೊದಲು ಹೆಚ್ಚಿನ ಸಂಖ್ಯೆಯ ಭಕ್ತರು ಈ ಕ್ಷೇತ್ರಕ್ಕೆ ಆಗಮಿಸುತ್ತಾರೆ. ಇವುಗಳಲ್ಲಿ 2 ಲಕ್ಷಕ್ಕೂ ಹೆಚ್ಚು ಭಕ್ತರು ಪಾದಯಾತ್ರೆಯಾಗಿ ಶ್ರೀಶೈಲ ದೇವಸ್ಥಾನಕ್ಕೆ ಕಾಲ್ನಡಿಗೆ (ಪಾದಯಾತ್ರೆ)ಯಲ್ಲಿ ಬರುತ್ತಾರೆ.

ಕರ್ನಾಟಕ ರಾಜ್ಯದಿಂದ ವಿಶೇಷವಾಗಿ ಉತ್ತರ ಕರ್ನಾಟಕ ಪ್ರದೇಶದಿಂದ ಮತ್ತು ಮಹಾರಾಷ್ಟ್ರ ರಾಜ್ಯದ ಸೊಲ್ಲಾಪುರ ಮತ್ತು ಸಾಂಗ್ಲಿಯಂತಹ ಸ್ಥಳಗಳಿಂದ ಭಕ್ತರು ಈ ಉತ್ಸವಗಳಿಗೆ ಶ್ರೀಶೈಲಕ್ಕೆ ಸೇರುತ್ತಾರೆ.

ಆದಾಗ್ಯೂ, ಎಲ್ಲಾ ಭಕ್ತರಿಗೆ ಆರಾಮದಾಯಕ ದರ್ಶನ ನೀಡುವ ಸಲುವಾಗಿ ಯುಗಾದಿ ಮಹೋತ್ಸವದ ಸಮಯದಲ್ಲಿ ಅಂದರೆ ಮಾರ್ಚ್ 16 ರಿಂದ 20ರವರೆಗೆ ಎಲ್ಲಾ ಭಕ್ತರಿಗೆ ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ಅಲಂಕಾರಿಕ ದರ್ಶನ (ಲಘು ದರ್ಶನ) ಮಾತ್ರ ಒದಗಿಸಲಾಗುವುದು. ಹಬ್ಬದ ದಿನಗಳಲ್ಲಿ ಭಗವಂತಹ ಸ್ಪರ್ಶ ದರ್ಶನಕ್ಕೆ ಅವಕಾಶವಿರುವುದಿಲ್ಲ.

ಆದರೆ ಉತ್ಸವದ 10 ದಿನಗಳ ಮೊದಲು ಅಂದರೆ ಮಾರ್ಚ್ 06 ರಿಂದ 15ರವರೆಗೆ ಭಕ್ತರಿಗೆ ಪ್ರತಿದಿನ ನಿರ್ದಿಷ್ಟ ಸಮಯಗಳಲ್ಲಿ ನಾಲ್ಕು ಹಂತಗಳಲ್ಲಿ ಶ್ರೀಸ್ವಾಮಿಯವರ ಸ್ಪರ್ಶ ದರ್ಶನ ಪಡೆಯುವ ಅವಕಾಶ ನೀಡಲಾಗುವುದು. ಈ ಸ್ಪರ್ಶ ದರ್ಶನದ ಟಿಕೇಟ್ ಶುಲ್ಕವನ್ನು ರೂ. 500/– ನಿಗದಿಪಡಿಸಲಾಗಿದೆ. ಪ್ರತಿ ಹಂತದಲ್ಲಿ ಕರೆಂಟ್ ಬುಕಿಂಗ್ ಮೂಲಕ ಕೇವಲ 1500 ಟಿಕೆಟ್‌ಗಳನ್ನು ನೀಡಲಾಗುವುದು. ಅದೇ ರೀತಿ, ಇನ್ನೂ 500 ಟಿಕೆಟ್‌ಗಳನ್ನು ಅನ್‌ಲೈನ್‌ನಲ್ಲಿ ಲಭ್ಯವಾಗುವಂತೆ ಮಾಡಲಾಗಿದೆ. ಈ ಅನ್‌ಲೈನ್ ಟಿಕೆಟ್ ಗಳನ್ನು www.srisailadevasthanam.orgCxÀªÁwww.aptemples.ap.gov.in ನಿಂದ ಪಡೆಯಬಹುದಾಗಿದೆ. ಅದೇ ರೀತಿ, ಸ್ಪರ್ಶ ದರ್ಶನ ಟಿಕೆಟ್‌ಗಳನ್ನು ಪಡೆಯುವ ಅವಕಾಶವನ್ನು ಮನಮಿತ್ರ ಅವರ ವಾಟ್ಸಪ್ ಗವರ್ನೆನ್ಸ್ 8552300009 ರ ಮೂಲಕವು ಒದಗಿಸಲಾಗಿದೆ.

ಉತ್ಸವಕ್ಕೆ ಮುಂಚಿನ 10 ದಿನಗಳಲ್ಲಿ ಒಟ್ಟಾರೆಯಾಗಿ 8000 ಮಂದಿ ಜನರಿಗೆ ಸ್ಪರ್ಶ ದರ್ಶನ ನೀಡಲಾಗುವುದು.

ಈ ನಿಟ್ಟಿನಲ್ಲಿ ದೇವಾಲಯವು ದಿನಾಂಕ: 25–02–2026 ರಂದು ಬಾಗಲಕೋಟೆ ಜಿಲ್ಲೆಯ ತೇರದಾಳ್ ಪಟ್ಟಣದಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರದ ವಿವಿಧ ಭಕ್ತರ ಗುಂಪುಗಳು, ಪಾದಯಾತ್ರೆಗುಂಪುಗಳು ಮತ್ತು ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಸಮನ್ವಯ ಸಭೆಯನ್ನು ಆಯೋಜಿಸಲಾಗಿದೆ.

ಸಮಸ್ತ ಭಕ್ತರಿಗೆ ದರ್ಶನದ ಬಗ್ಗೆ ಬೇಕಾದ ಸಮಾಚಾರವನ್ನು ತಿಳಿಸಲು, ಭಕ್ತ ಸಮೂಹಗಳ ಪ್ರತಿನಿಧಿಗಳಿಗೆ ಹಬ್ಬದ ದಿನಗಳಲ್ಲಿ ದರ್ಶನ ವ್ಯವಸ್ಥೆ ಹಾಗೂ ದೇವಸ್ಥಾನದ ಭಕ್ತರಿಗೆ ಒದಗಿಸುವ ಸೌಲಭ್ಯಗಳ ಕುರಿತು ಮಾಹಿತಿ ನೀಡಲಾಗಿದೆ. ಯುಗಾದಿ ಹಬ್ಬದ ಪ್ರಯುಕ್ತ ದೇವಾಲಯವು ಭಕ್ತರ ಅನುಕೂಲಕ್ಕಾಗಿ ವಿವಿಧ ವ್ಯವಸ್ಥೆಗಳನ್ನು ಮಾಡುತ್ತಿದೆ. ಮುಖ್ಯವಾಗಿ ಪಾದಚಾರಿ ಮಾರ್ಗ, ಭಕ್ತರಿಗೆ ವಿಶ್ರಾಂತಿ ಪಡೆಯಲು ತಂಪಾದ ಹೊರಾಂಗಣ ಚಪ್ಪರಗಳು, ಕುಡಿಯುವ ನೀರು, ಅನ್ನಸಂತರ್ಪಣೆ, ಅನುಕೂಲವಾದ ದರ್ಶನ ವ್ಯವಸ್ಥೆ, ವಾಹನ ನಿಲುಗಡೆ ವ್ಯವಸ್ಥೆ, ಭಕ್ತರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಲು ಉಚಿತ ಬಸ್‌ಗಳ ವ್ಯವಸ್ಥೆ ಉಚಿತ ಬ್ಯಾಟರಿ ವಾಹನಗಳ ವ್ಯವಸ್ಥೆ, ನೈರ್ಮಲ್ಯ ನಿರ್ವಹಣೆ, ಸ್ವಚ್ಛತಾ ವ್ಯವಸ್ಥೆ ಇತ್ಯಾದಿಗಳನ್ನು ವ್ಯವಸ್ಥೆ ಮಾಡಲಾಗುತ್ತಿದೆ. ಆದ್ದರಿಂದ ಸರ್ವ ಭಕ್ತಾಧಿಗಳು ಈ ವಿಷಯಗಳನ್ನು ಗಮನಿಸಿ, ದೇವಾಸ್ಥಾನಕ್ಕೆ ಸಹಕರಿಸಬೇಕೆಂದು ವಿನಂತಿಸಲಾಗಿದೆ. ಈ ಸಂದರ್ಭದಲ್ಲಿ ಸಮಸ್ತ ಭಕ್ತಾಧಿಗಳು ಶ್ರೀ ಭ್ರಮರಾಂಭ ಮಲ್ಲಿಕಾರ್ಜುನ ಸ್ವಾಮಿಯವರ ಅನುಗ್ರಹವನ್ನು ಸದಾ ಪಡೆಯಲಿ ಎಂದು ಹಾರೈಸುತ್ತೇನೆ ಎಂದು ದೇವಸ್ಥಾನದ ಸ್ಪೆಷಲ್ ಗ್ರೇಡ್ ಡೆಪ್ಯೂಟಿ ಕಲೆಕ್ಟರ್ ಮತ್ತು ಕಾರ್ಯನಿರ್ವಾಹಕ ಅಧಿಕಾರಿ ಎಂ. ಶ್ರೀನಿವಾಸರಾವ್ ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ.



# ಸಾರ್ವಜನಿಕ ಉಕ್ಕು ಕಾರ್ಖಾನೆಗಳಿಗೆ ಸಂಡೂರು ಪ್ರದೇಶದಲ್ಲಿ ಹೊಸ ಗಣಿಗಾರಿಕೆ ಬೇಡ



**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಗಣಿಗಾರಿಕೆಗೆ ಕರ್ನಾಟಕ ರಾಜ್ಯ ಸರ್ಕಾರ ಸಹಕಾರ ನೀಡುತ್ತಿಲ್ಲ ಎಂದು ಕೇಂದ್ರದ ಉಕ್ಕು ಸಚಿವ ಹೆಚ್.ಡಿ.ಕುಮಾರಸ್ವಾಮಿ ಬಾಳೆಹೊನ್ನೂರಿನಲ್ಲಿ ನೀಡಿದ ಹೇಳಿಕೆಯನ್ನು ಗಣಿ ಬಾಧಿತ ಪ್ರದೇಶದ ಪರಿಸರ ಮತ್ತು ಜನ ಬದುಕಿನ ಪುನಶ್ಚೇತನ ಹೋರಾಟ ಸಮಿತಿ ಆಕ್ಷೇಪಿಸಿದೆ.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿದ ಸಮಿತಿಯ ಮುಖಂಡರು. ಸುಪ್ರೀಂ ಕೋರ್ಟ್ ವಾರ್ಷಿಕ 30 ಮಿಲಿಯನ್ ಟನ್ ಅದಿರಿನ ಗಣಿಗಾರಿಕೆಗೆ ಅನುಮತಿ ನೀಡಿತ್ತು. ಇದಕ್ಕಿಂತಲೂ ಹೆಚ್ಚಿಗೆ ನಡೆಯುತ್ತಿರುವಾಗಲೂ. ಯಾರದೋ ಕೆಲವರ ಹಿತಾಸಕ್ತಿಗೆ ಕೆಐಓಸಿಎಲ್ ಮತ್ತು ವಿಎಸ್ ಐಎಲ್ ಗೋಸ್ಕರ ಸಂಡೂರು ಅರಣ್ಯ ಪ್ರದೇಶದಲ್ಲಿ ಹೊಸದಾಗಿ ಗಣಿಗಾರಿಕೆಗೆ ಕೇಳುವುದು ಸರಿಯಲ್ಲ.

ಅದಿರು ಬೇಕಾದರೆ ಎನ್ ಎಂ ಡಿ ಸಿ ಗಣಿಗಾರಿಕೆ ಪ್ರದೇಶದಿಂದ ಪಡೆಯಲಿ. ಅಭಿವೃದ್ಧಿಗೆ ಪೂರಕವಾಗಿ ಗಣಿಗಾರಿಕೆ ಇರಲಿ. ಆದರೆ ಪ್ರಕೃತಿ ಯನ್ನು ನಾಶ ಮಾಡುವ ಗಣಿಗಾರಿಗೆ ಅಪಾಯಕಾರಿ ಅದಕ್ಕಾಗಿ ನಮ್ಮ ವಿರೋಧ ಎಂದರು. ಉತ್ತಮ ರಾಜಕಾರಣಿಯಾಗಿರುವ ಕುಮಾರಸ್ವಾಮಿ ಅವರು ಸರಕಾರಿ ಸ್ವಾಮ್ಯದ ಕಂಪನಿಗಳಿಗೆ ಗಣಿಗಾರಿಕೆ ಕೇಳುವುದು ಸರಿ ಆದರೆ, ಅದಿರನ್ನು ಕೇಂದ್ರ ಸ್ವಾಮ್ಯದ ಎನ್.ಎಂ.ಡಿ.ಸಿ. ಯಿಂದ ಪಡೆಯಲಿ ಎಂದು ಶ್ರೀಶೈಲ ಆಲದಹಳ್ಳಿ ಆಗ್ರಹಿಸಿದರು. ಜೊತೆಗೆ ಎನ್.ಎಂ.ಡಿ.ಸಿ ಕುಡುತಿನಿಯಲ್ಲಿ ಕೈಗಾರಿಕೆ ಆರಂಭಿಸಲು ಪಡೆದಿರುವ ಜಮೀನಿನಲ್ಲಿ ಉಕ್ಕು ಕಾರ್ಖಾನೆ ಆರಂಭಿಸಲಿ ಎಂದರು. ಕುಮಾರಸ್ವಾಮಿ ಅವರು ಕೆಐಓಸಿಎಲ್ ಹೆಸರಲ್ಲಿ ಹೊಸದಾಗಿ ಗಣಿಗಾರಿಕೆ ಪಡೆದು ನಂತರ ಖಾಸಗಿಯವರಿಗೆ ನೀಡುವ ಹುನ್ನಾರ ಇದೆ ಎಂದು ಆರೋಪಿಸಿದರು.ಸಮಿತಿಯ ಮುಖಂಡರುಗಳಾದ ಉಗ್ರ ನರಂಸಿಂಹೇಗೌಡ, ಶ್ರೀಶೈಲ ಆಲದಹಳ್ಳಿ, ಟಿ.ಎಂ.ಶಿವಕುಮಾರ್, ಕೆ.ಸೋಮಶೇಖರಗೌಡ, ಎಂ.ಎಲ್.ಕೆ.ನಾಯ್ಡು, ನಾಯ್ಡು , ನಾಗರಾಜ್, ಮೂಲಿಮನೆ ಈರಣ್ಣ ಮೊದಲಾದವರು ಇದ್ದರು.

# ಸಂತೋಷ್ ಲಾಡ್ ಜನ್ಮದಿನ ನಿರಾಶ್ರಿತ ಕೇಂದ್ರದಲ್ಲಿ ಹಣ್ಣು ವಿತರಣೆ

**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರ ಜನ್ಮ ದಿನದ ಅಂಗವಾಗಿ ಇಂದು ಅವರ ಅಭಿಮಾನಿಗಳು, ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು ನಗರದ ಕಂಟೋನ್ಮೆಂಟ್ ನ ಶಾಂತಿಧಾಮದಲ್ಲಿರುವ ನಿರಾಶ್ರಿತರ ಕೇಂದ್ರದಲ್ಲಿ ಕೇಕ್ ಕತ್ತರಿಸಿ, ಅಲ್ಲಿನ ನಿವಾಸಿಗಳಿಗೆ ಹಣ್ಣು, ಸಿಹಿ ಹಂಚುವ ಮೂಲಕ ಆಚರಿಸಿದರು.

ಈ ವೇಳೆ ಮಾತನಾಡಿದ ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಎಸ್.ಎಲ್.ಸ್ವಾಮಿ, ಜಿಪಂ ಮಾಜಿ ಸದಸ್ಯ ಎ.ಮಾನಯ್ಯ, ಮೇಯರ್ ಪಿ.ಗಾದೆಪ್ಪ, ಛಲವಾದಿ ಮಹಾಸಭಾದ ಸಿ.ನರಸಪ್ಪ, ಮೊದಲಾದವರು ಮಾತನಾಡಿ, ಸಂತೋಷ್ ಲಾಡ್ ಅವರು ಎಷ್ಟೇ ಶ್ರೀಮಂತರು, ಅಧಿಕಾರವನ್ನು ಪಡೆದರೂ, ಅವರಿಗೆ ಬಡ ಜನತೆ ಬಗ್ಗೆ ಇರುವ ಕಾಳಜಿ ಮಹತ್ವದ್ದು. ಭವಿಷ್ಯದಲ್ಲಿ ಅವರಿಗೆ ಮತ್ತಷ್ಟು ಸ್ಥಾನಮಾನವನ್ನು ದೇವರು ಕಲ್ಪಿಸಲಿ ಎಂದು ಹಾರೈಸಿದರು.

ಈ ಸಂದರ್ಭದಲ್ಲಿ ಪಕ್ಷದ ಹಾಗು ದಲಿತ ಮುಖಂಡರುಗಳಾದ ಎಪಿಎಂಸಿ ಮಾಜಿ ಅಧ್ಯಕ್ಷ ಸರಗು ನಾಗರಾಜ್, ವಿಜುಕುಮಾರ್ ಸಂಗನಕಲ್ಲು, ಕೊಳಗಲ್ಲು ಮಲ್ಲಯ್ಯ, ಹೆಚ್.ಅಂಜನೇಯ, ಬಿ.ರಮೇಶ್, ಟಿ.ಎಂ.ಎರ್ರಿಸ್ವಾಮಿ, ಜಿ.ಪಂಪಾಪತಿ, ಹೆಚ್.ಶಂಕರ್ ಬಾಪೂಜಿ ನಗರ, ಗಂಗಾಧರ ವೇಣಿ ವೀರಾಪುರ, ದುರ್ಗಾದಾಸ್ ಡಿ, ಬತ್ತಿ ಮಹೇಶ್, ಭೀಮಾಶಂಕರ್, ಹನುಮಂತ, ರಾಜಣ್ಣ, ತಿರುಮಲ, ಕುಡುತಿನಿ ಹನುಮಂತ, ಗಾದಿಲಿಂಗ ಹರಗಿನದೋಣಿ, ಗಂಗಾಧರ ಚೇಳ್ಳಗುರ್ಕಿ, ಹಲಕುಂದಿ ಶೇಷಪ್ಪ, ಸೋಮಸಮುದ್ರದ ತಿಪ್ಪಯ್ಯ, ಎತ್ತಿನಬೂದಿಹಾಳ್ ಹನುಮಂತ, ಉಪೇಂದ್ರ, ಸು-ರೇಂದ್ರ ಇಬ್ರಾಹಿಂಪುರ, ಸಿದ್ಧಾರ್ಥ, ಸಾಗರ್, ಮಣಿಕಂಠ, ಪೃಥ್ವಿ, ಬೆಂಜಿ ಮೊದಲಾದವರು ಇದ್ದರು..



# ವಿಶೇಷ ಚೇತನರಿಗೆ ತ್ರಿಚಕ್ರದ ಮೋಟಾರ್ ಸೈಕಲ್ ವಿತರಣೆ



**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಜಿಲ್ಲಾಡಳಿತ, ಕಾರ್ಮಿಕ ಇಲಾಖೆ ಹಾಗೂ ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಆರೋಗ್ಯ ಇಲಾಖೆ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಂಯುಕ್ತಾಶ್ರಯವಾಗಿ ಇಂದು ನಗರದ ಮುನಿಷಿಪಲ್ ಹೈಸ್ಕೂಲ್ ಮೈದಾನದಲ್ಲಿ ,46 ಜನ ವಿಶೇಷ ಚೇತನರಿಗೆ ಜಿಲ್ಲೆಯ 9 ಕೈಗಾರಿಕೆಗಳು ಸಾಮಾಜಿಕ ಹೊಣೆಗಾರಿಕೆ ನಿಧಿ(ಸಿಎಂರ್)ಅಡಿ ಬಳ್ಳಾರಿ ಜಿಲ್ಲೆಯ ಮೋಟಾರ್ ಚಾಲಿತ ತ್ರಿಚಕ್ರ ವಾಹನಗಳನ್ನು ವಿತರಣೆ ಮಾಡಲಾಯ್ತು.

ಸಂಡೂರು ಶಾಸಕಿ ಈ.ತುಕರಾಂ ಅನ್ನಪೂರ್ಣ, ಮೇಯರ್ ಪಿ.ಗಾದೆಪ್ಪ, ಜಿಲ್ಲಾಧಿಕಾರಿ ನಾಗೇಂದ್ರಪ್ರಸಾದ್ ಕೆ, ಕಾರ್ಮಿಕ ಇಲಾಖೆಯ ಮೌನೇಶ್ ಮೊದಲಾದವರು ಇದ್ದರು.

ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರ ಜನ್ಮದಿನದ ಅಂಗವಾಗಿ ಇಲಾಖೆಯಿಂದ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಇಂತಹ ಕಾರ್ಯಕ್ರಮ ಆಯೋಜನೆ ಮಾಡಲಾಗಿದೆ.

# ಬಿಜೆಪಿಯಿಂದ ಯಡಿಯೂರಪ್ಪ ಜನ್ಮ ದಿನ ಆಚರಣೆ



**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ರಾಜ್ಯದ ಮಾಜಿ ಮುಖ್ಯ ಮಂತ್ರಿ, ಬಿಜೆಪಿಯ ಕೇಂದ್ರ ಸಂಸದೀಯ ಸಮಿತಿ ಸದಸ್ಯ, ಹಿರಿಯ ನಾಯಕ ಬಿ.ಎಸ್.ಯಡಿಯೂರಪ್ಪ ಅವರ 84 ನೇ ಜನ್ಮ ದಿನಸಚರಣೆಯನ್ನು ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ಇಂದು ನಗರದ ದುರ್ಗಮ್ಮ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ. ಕೇಕ್ ಕತ್ತರಿಸಿ, ಸಿಹಿ ಹಂಚಿ ಸಂಭ್ರಮದಿಂದ ಆಚರಿಸಿದರು.

ಈ ವೇಳೆ ಮಾತನಾಡಿದ ಬಿಜೆಪಿಯ ಜಿಲ್ಲೆಯ ಹಿರಿಯ ಮುಖಂಡ ಡಾ.ಎಸ್.ಜೆ.ವಿ.ಮಹಿಪಾಲ್, ಬಿಜೆಪಿಯ ರಾಜ್ಯ ಕಾರ್ಯದರ್ಶಿ ಕೆ.ಎಸ್.ದಿವಾಕರ್ ಮೊದಲಾದವರು ಮಾತನಾಡಿ, ರೈತಪರ ಹೋರಾಟಗಾರ ಯಡಿಯೂರಪ್ಪನವರು ಅವರ ಅಧಿಕಾರದಲ್ಲಿ ಕೃಷಿಗಾಗಿ ಪ್ರತ್ಯೇಕ ಬಜೆಟ್ ಮಂಡಿಸಿದರು. 108, ಭಾಗ್ಯಲಕ್ಷ್ಮಿ ಬಾಂಡ್ ಮೊದಲಾದ ಯೋಜನೆಗಳ ಮೂಲಕ ಉತ್ತಮ ಆಡಳಿತ ನೀಡಿ ಜನಮಾನಸದಲ್ಲಿ ಉಳಿದಿದ್ದಾರೆಂದರು.

ಈ ಸಂದರ್ಭದಲ್ಲಿ ಪಕ್ಷದ ನಗರ ಅಧ್ಯಕ್ಷ ವೆಂಕಟರಮಣ, ಪಾಲಿಕೆ ಸದಸ್ಯೆ ಸುರೇಖ ಮಲ್ಲನಗೌಡ, ಗಣಪಾಲ ಐನಾಥರೆಡ್ಡಿ, ಮದಿರೆ ಕುಮಾರಸ್ವಾಮಿ, ಶ್ರೀನಿವಾಸ್ ಪಾಟೀಲ್, ವಿ.ರಾಮಚಂದ್ರಯ್ಯ ಮೊದಲಾದವರು ಪಾಲ್ಗೊಂಡಿದ್ದರು.

# ಪಶು ಸಂಗೋಪನೆ ಗ್ರಾಮೀಣ ಆರ್ಥಿಕತೆಯ ಬೆನ್ನೆಲುಬು:ಗೆಹ್ಲೋಟ್

**ಮಲ್ಲಮ್ಮ ನುಡಿ ವಾರ್ತೆ ಬೀದರ**

ಗ್ರಾಮೀಣ ಭಾರತವು ಸಂಪೂರ್ಣ ಕೃಷಿ ಆಧಾರಿತವಾಗಿದ್ದು, ಪಶು ಸಂಗೋಪನೆಯೇ ಗ್ರಾಮೀಣ ಆರ್ಥಿಕ ಅಭಿವೃದ್ಧಿಗೆ ಬೆನ್ನೆಲುಬು ಆಗಿದೆಯೆಂದು ರಾಜ್ಯಪಾಲರಾದ ಥಾವರಚಂದ್ ಗೆಹ್ಲೋಟ್ ಅವರು ತಿಳಿಸಿದರು.

ಅವರು ಇಂದು ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರನ 15ನೇ ಘಟಿಕೋತ್ಸವ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ವಿದ್ಯಾರ್ಥಿಗಳಿಗೆ ಪದಕ, ಪದವಿ ಪ್ರಧಾನ ಮಾಡಿ ಮಾತನಾಡಿದರು.

ಕೃಷಿ ಉತ್ಪಾದನೆ, ಹಾಲು ಉತ್ಪಾದನೆ, ಡೈರಿ ಉತ್ಪಾದನೆಗಳು ಮೀನು ಉತ್ಪಾದನೆ ರೈತರ ಆರ್ಥಿಕ ಅಭಿವೃದ್ಧಿಗೆ ಕಾರಣವಾಗಿವೆ. ಭಾರತವು ಹಾಲು ಹಾಗೂ ಮೀನು ಉತ್ಪಾದನೆಯಲ್ಲಿ ಮುಂಚೂಣಿ ಸ್ಥಾನದಲ್ಲಿದೆ. ವಿಶ್ವವಿದ್ಯಾಲಯದ ವಿಜ್ಞಾನಿಗಳು ಮಾನವ, ಪ್ರಾಣಿ ಮತ್ತು ಪರಿಸರವನ್ನು ಒಳಗೊಂಡಂತೆ ಸಮಗ್ರ ದೃಷ್ಟಿಕೋನದಲ್ಲಿ ಒಂದು ಆರೋಗ್ಯ ದೃಷ್ಟಿಕೋನದಲ್ಲಿ ಕಾರ್ಯನಿರ್ವಹಿಸಬೇಕೆಂದರು.

ಆಧುನಿಕ ವಿಜ್ಞಾನ, ತಂತ್ರಜ್ಞಾನ ಮೂಲಿಕ ಕೃಷಿ, ಕೃಷಿಯೇತರ, ಪಶು ಸಂಗೋಪನೆ ಉತ್ಪಾದನೆಯನ್ನು ಹೆಚ್ಚಿಸುವ, ವೃದ್ಧಿಸುವ ಕಾರ್ಯ ಆಗಬೇಕು. ವಿವಿಧ ರೀತಿಯ ರೋಗಗಳ ನಿಯಂತ್ರಣವು ಸಹ ದೊಡ್ಡ ಸವಾಲಾಗಿದ್ದು, ವಿಜ್ಞಾನಿಗಳು ಸತತ ಸಂಶೋಧನೆಯಲ್ಲಿ ತೊಡಗಿಸಿಕೊಂಡಿದ್ದಾರೆ ಎಂದರು.

ವಿಜ್ಞಾನಿಗಳು ಯಶಸ್ಸು, ಪರಿಶ್ರಮ ಹಾಗೂ ಸೇವಾಭಾವನೆಯಿಂದ ಜೀವನ ನಡೆಸಬೇಕು. ಜ್ಞಾನ ನೈತಿಕ ಮೌಲ್ಯಗಳ ಆಚರಣೆ ಜೊತೆ ದೇಶ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು.ಪಶುಗಳ ಬಗ್ಗೆ ಕರುಣೆಯಿಂದ ರೈತರಿಗೆ ಸೇವೆ ನೀಡುವಂತಾಗಲಿ ಹಾಗೂ ಪರಿಸರ ಸಂರಕ್ಷಣೆಯಲ್ಲಿ ತೊಡಗಿಸಿಕೊಳ್ಳಬೇಕೆಂದು ಹಿತ ನುಡಿಗಳನ್ನು ಆಡಿದರು.

ಪಶು ಸಂಗೋಪನೆ ಸಚಿವರಾದ ಕೆ.ವೆಂಕಟೇಶ ಅವರು ಮಾತನಾಡಿ, ರಾಜ್ಯದಲ್ಲಿ 2.9 ಕೋಟಿ ಜಾನುವಾರುಗಳಿವೆ. ಹಾಲು ಉತ್ಪಾದನೆಯಲ್ಲಿ ರಾಜ್ಯ 2ನೇ ಸ್ಥಾನದಲ್ಲಿದೆ. ಕಳೆದ ವರ್ಷ ಪ್ರತಿದಿನ 1 ಕೋಟಿ ಲೀಟರ ಹಾಲು ಉತ್ಪಾದನೆಯಾಗುತ್ತದೆ ಎಂದರು.

ಗ್ರಾಮೀಣ ಜನರ ಆರ್ಥಿಕತೆಯಲ್ಲಿ ಪಶು ಸಂಗೋಪನೆ ಅತೀ ಮಹತ್ವದ





- **34 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಪ್ರಧಾನ**
- **ಉಡುಪಿ ಮೂಲದ ವಿದ್ಯಾರ್ಥಿನಿ ಖುಷಿ ಮೆಂಡನ್ 16 ಚಿನ್ನದ ಪದಕಗಳನ್ನು ಪಡೆದರು**
- **ರಾಜ್ಯದಲ್ಲಿ 2.9 ಕೋಟಿ ಜಾನುವಾರುಗಳಿವೆ. ಹಾಲು ಉತ್ಪಾದನೆಯಲ್ಲಿ ರಾಜ್ಯ 2ನೇ ಸ್ಥಾನದಲ್ಲಿದೆ. ಕಳೆದ ವರ್ಷ ಪ್ರತಿದಿನ 1 ಕೋಟಿ ಲೀಟರ ಹಾಲು ಉತ್ಪಾದನೆ,**

ಪಾತ್ರ ವಹಿಸುತ್ತಿದೆ. ಸರಕಾರವು ವಿವಿಧ ಯೋಜೆನಗಳ ಮೂಲಕ ಪಶು ಸಂಗೋಪನೆಯನ್ನು ಬಲಪಡಿಸುತ್ತಿದೆಯೆಂದರು. ನುರಿತ ತಜ್ಞರು, ವಿಜ್ಞಾನಿಗಳು ಪಶು ಸಂಗೋಪನೆ ಉತ್ಪಾದನೆ ಹೆಚ್ಚಿಸುವಲ್ಲಿ ತೊಡಗಿಸಿಕೊಂಡಿದ್ದಾರೆ. ಅನುಗ್ರಹ ಯೋಜನೆಯಡಿ ಜಾನುವಾರು ಸಾವಿಗೆ ಪರಿಹಾರ ನೀಡಲಾಗುತ್ತಿದೆ. ಮಹಿಳೆಯರಿಗೆ, ಸ್ತ್ರೀ ಶಕ್ತಿಗುಂಪುಗಳಿಗೆ ಜಾನುವಾರುಗಳನ್ನು ವಿತರಿಸಲಾಗುತ್ತಿದೆಯೆಂದರು. ಘಟಿಕೋತ್ಸವ ಕಾರ್ಯಕ್ರಮವನ್ನು ಇನ್ನು ಮುಂದೆ ಕನ್ನಡದಲ್ಲೇ ಮಾಡುವಂತೆ ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಮಾತನಾಡಿದ ಇಕ್ರಿಸ್ಯಾಟ್ ಸಂಸ್ಥೆಯ ಮಹಾನಿರ್ದೇಶಕರಾದ ಹಿಮಾಂಶು ಪಾಠಕ್ ಅವರು ಕರ್ನಾಟಕ ರಾಜ್ಯದ ಅಭಿವೃದ್ಧಿಯನ್ನು ಹೊಗಳಿದರು. ಕರ್ನಾಟಕ ರಾಜ್ಯವು ಕೃಷಿ ಹಾಗೂ ಶಿಕ್ಷಣ ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿದೆ. ದೇಶದ ವಿವಿಧೆಡೆ ರಾಜ್ಯದ ವಿಜ್ಞಾನಿಗಳಿದ್ದಾರೆ ಎಂದರು. 2025 ರಲ್ಲಿ ದೇಶವು 217 ಮಿಲಿಯನ್ ಲೀಟರ ಹಾಲು ಉತ್ಪಾದನೆಯಾಗುತ್ತಿದೆ. ದೇಶವು ಕೃಷಿಯಲ್ಲಿ ಸಾಕಷ್ಟು ಅಭಿವೃದ್ಧಿ ಹೊಂದುತ್ತಿದೆ. ಪಶುಪಾಲನೆ ಹಾಗೂ ಮೀನುಗಾರಿಕೆ ಮಹತ್ತರ ಪಾತ್ರ ವಹಿಸುತ್ತಿವೆ. ಆಧುನಿಕ ವಿಜ್ಞಾನ ತಂತ್ರಜ್ಞಾನದಿಂದ ಅನೇಕ ನ್ಯೂನ್ಯತೆಗಳನ್ನು ಬಗೆಹರಿಸಲಾಗುತ್ತಿದೆ. ಸವಾಲುಗಳು ಸಾಕಷ್ಟಿವೆ. ವಿದ್ಯಾರ್ಥಿಗಳು ಶಿಕ್ಷಣದ ಮಹತ್ವವನ್ನು ಅರಿಯಬೇಕು. ಶಾಂತಿ, ನೆಮ್ಮದಿ, ಆರ್ಥಿಕ ಅಭಿವೃದ್ಧಿಗೆ ಶಿಕ್ಷಣವೇ ಅಗತ್ಯ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯಗಳು ಮಹತ್ತರ ಪಾತ್ರ ವಹಿಸುತ್ತದೆ ಎಂದರು.

ಬೀದರನ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಕೆ.ಸಿ.ವೀರಣ್ಣ ಅವರು ಪ್ರಾಸ್ತಾವಿಕ ಭಾಷಣ ಮಾಡಿದರು.

ಘಟಿಕೋತ್ಸವದಲ್ಲಿ 34 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಪ್ರಧಾನ ಮಾಡಲಾಯಿತು. ಉಡುಪಿ ಮೂಲದ ವಿದ್ಯಾರ್ಥಿನಿ ಖುಷಿ ಮೆಂಡನ್ 16 ಚಿನ್ನದ ಪದಕಗಳನ್ನು ಪಡೆದರು.

ಈ ಸಮಾರಂಭದಲ್ಲಿ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಗಿರೀಶ ಬದೋಲೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ ಗುಂಟಿ, ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರನ ಕುಲಸಚಿವರಾದ ಪಿ.ಟಿ.ರಮೇಶ ಸೇರಿದಂತೆ ಗಣ್ಯ ಮಾನ್ಯರು ಪಾಲ್ಗೊಂಡಿದ್ದರು.

# ಆಶಾ ಕಾರ್ಯಕರ್ತೆಯರ ಬೇಡಿಕೆ ಈಡೇರಿಕೆಗೆ ಮನವಿ



**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಜಿಲ್ಲಾ ಸಮಿತಿ ವತಿಯಿಂದ ಮುಂಬರುವ ರಾಜ್ಯದ ಬಜೆಟ್ನೇಲ್ಲಿ ಆಶಾ ಕಾರ್ಯಕರ್ತೆಯರ ಬೇಡಿಕೆಗಳ ಈಡೇರಿಸುವಂತೆ ಆಗ್ರಹಿಸಿ ಇಂದು ಜಿಲ್ಲಾಧಿಕಾರಿಗಳ ಮೂಲಕ ರಾಜ್ಯದ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿತು.

**ಬಜೆಟ್-ಪೂರ್ವ ಹಕ್ಕೊತ್ತಾಯಗಳು:**

ಕೇಂದ್ರ ಸರ್ಕಾರದ ಪ್ರೋತ್ಸಾಹಧನ ಹಾಗೂ ರಾಜ್ಯ ಸರ್ಕಾರದ ಗೌರವಧನ ಒಟ್ಟಿಗೆ ಸೇರಿಸಿ ಮಾಸಿಕ ರೂ.15,000 ಗೌರವಧನ ನೀಡಬೇಕು.ಅಲ್ಲಿಯವರೆಗೆ, ರಾಜ್ಯ ಸರ್ಕಾರದಿಂದ ಈ ಮಾರ್ಚ್ 2026ರ ಬಜೆಟ್ನಲ್ಲಿ – ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ, ಘೋಷಿಸಿರುವಂತೆ – ಆಶಾ ಕಾರ್ಯಕರ್ತೆಯರ ಗೌರವಧನವನ್ನು ರೂ. 5,000 ದಿಂದ ರೂ. 8,000 ಕ್ಕೆ ಹೆಚ್ಚಿಸಬೇಕು. ನಿವೃತ್ತ ಆಶಾಗಳಿಗೆ ಪಶ್ಚಿಮ ಬಂಗಾಳ ಮಾದರಿಯಲ್ಲಿ ಇಡಿಗಂಟು ನೀಡಬೇಕು. ತೀವ್ರತರ ರೋಗಗಳ ಚಿಕಿತ್ಸಾ ವೆಚ್ಚಕ್ಕಾಗಿ ಕಾರ್ಪಸ್ ಫಂಡ್ ಮಾಡಿ, ಚಿಕಿತ್ಸಾ ವೆಚ್ಚ ಮರುಪಾವತಿಗೆ ವ್ಯವಸ್ಥೆ ಮಾಡಿ.(ಅಂಗನವಾಡಿ ಮಾದರಿಯಲ್ಲಿ) ಗಂಭೀರ ಖಾಯಿಲೆಗಳಿಂದ ಬಳಲುತ್ತಿರುವ ಆಶಾ ಕಾರ್ಯಕರ್ತೆಯರಿಗೆ ಚೇತರಿಕೆ ಅವಧಿಯಲ್ಲಿ (3 ತಿಂಗಳು) ಮಾಸಿಕ ನಿಶ್ಚಿತ ಗೌರವಧನವನ್ನು ಪಾವತಿ ಮಾಡುವಂತೆ ಮನವಿ ಮಾಡಿದೆ.

**ಆಡಳಿತಾತ್ಮಕ ಹಕ್ಕೊತ್ತಾಯಗಳು:**

ಕೇಂದ್ರದ ಮಾರ್ಗಸೂಚಿಯನ್ನೇ ಉಲ್ಲಂಘಿಸಿ, ರಾಜ್ಯದಲ್ಲಿ ಆಶಾ ಕಾರ್ಯಕರ್ತೆಯರನ್ನು ತರ್ಕಬದ್ಧಗೊಳಿಸುವ ಹೆಸರಿನಲ್ಲಿ ಸಾವಿರಾರು ಆಶಾ ಕಾರ್ಯಕರ್ತೆಯರನ್ನು ಕೈಬಿಡುವ ಪ್ರಕ್ರಿಯೆ ನಿಲ್ಲಿಸಿ. ಆಶಾ ಸುಗಮಕಾರರನ್ನು ಸೂಕ್ತ ವೇತನದೊಂದಿಗೆ ಮುಂದುವರೆಸಬೇಕು. ಆಶಾ ಸುಗಮಕಾರರಿಗೆ 2024–25ರಲ್ಲಿ ಹೆಚ್ಚಳ ಆದ ಗೌರವಧನ (6,000 ದಿಂದ 7,500), ಒಂದು ವರ್ಷದ ಬಾಕಿ ಮಾಸಿಕ ರೂ.1,500 ರಂತೆ ಎಲ್ಲಾ ಸುಗಮಕಾರರಿಗೆ ನೀಡಿ. (ಆನಪಿ: 2024–25, 2025–26) ರಾಜ್ಯಾದ್ಯಂತ ಕೇಂದ್ರದ ಪ್ರೋತ್ಸಾಹಧನ ಆಶಾ ಕಾರ್ಯಕರ್ತೆಯರು ಕೆಲಸ ಮಾಡಿದಷ್ಟು ಬರುತ್ತಿಲ್ಲ. ಈ ಸಮಸ್ಯೆ ಬಗೆಹರಿಸಿ. ಆಶಾಗಳಿಗೆ ಕೂಡಲೇ ಬಾಕಿ ಇರುವ ಪ್ರೋತ್ಸಾಹಧನ ನೀಡಿ. ಹಲವಾರು ವರ್ಷಗಳಿಂದ ಬಾಕಿ ಇರುವ ವಿವಿಧ ಕಂಪೋನೆಂಟ್ಗ0ಳ ಹಣ ಬಿಡುಗಡೆ ಮಾಡಿ. (ಟಿಬಿ, ಟಿಬಿಐ,ಇತ್ಯಾದಿ) 'ರಾಜ್ಯ ಸರ್ಕಾರದ ಗ್ಯಾರಂಟಿ' ಸರ್ವೆ ಮಾಡಿದ್ದಕ್ಕೆ ನಿಗದಿಯಾಗಿದ್ದ ರೂ.1,000 ಬಿಡುಗಡೆ ಮಾಡಲು ಒತ್ತಾಯಿಸಲಾಗಿದೆ ಈ ಸಂದರ್ಭದಲ್ಲಿ ಸಂಘಟನೆಯ ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು.

# ಸುರಕ್ಷತೆಗೆ ಮಾನ್ಯತೆ ನೀಡಬೇಕು ಕರುಣಾಕರ ನಾಯ್ಕ



**ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ**

ದಂತ ಸುರಕ್ಷತೆ ಇವತ್ತಿನ ದಿನಗಳಲ್ಲಿ ಅಗತ್ಯವಾಗಿದ್ದು, ಅದನ್ನು ಉತ್ತಮ ಆರೆ ೂೕಗ್ಯ ಮತ್ತು ಸೌಂದರ್ಯಕ್ಕಾಗಿ ಉಳಿಸಿಕೊಳ್ಳಬೇಕಾಗಿದೆ. ಇತ್ತೀಚಿನ ಆಹಾರ ಪದ್ಧತಿಯಿಂದಾಗಿ ಹಲ್ಲು ಬೇಗನೆ ನಾಶವಾಗುತ್ತಿದ್ದು ಆ ಕುರಿತು ಜಾಗೃತರಾಗಿರಬೇಕು. ಹಲ್ಲನ್ನು ಅಧಿಕ ಕಾಲ ಉಜ್ಜುವುದು, ಅತ್ಯಧಿಕ ಪೇಸ್ಟ್ ಬಳಸುವುದು ಅಲ್ಲಿನ ಆರೋಗ್ಯವನ್ನು ಹದಗೆಡಿಸಿದಂತೆ ಎಂದು ದಂತ ವೈದ್ಯ ಡಾ.ಕರುಣಾ-ಕರ ಎಂ. ನಾಯ್ಕ ಹೇಳಿದರು. ಪಟ್ಟಣದ ಕೆಎಲ್ಇ ಸಂಸ್ಥೆಯ ಶೇಷಗಿರಿ ಪಿಕಳೆ ಶಿಕ್ಷಣ ಮಹಾವಿದ್ಯಾಲಯ, ಬಾಸಗೋಡದ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ಎನ್ಎಸ್ಎಸ್ ವಾರ್ಷಿಕ ವಿಶೇಷ ಶಿಬಿರದಲ್ಲಿ ಇಂಡಿಯಾ ಡೆಂಟಲ್ ಅಸೋಸಿಯೇಷನ್ ಸಹಯೋಗದಲ್ಲಿ ದಂತ ಸುರಕ್ಷತೆ ಕುರಿತು ಜಾಗ್ರತೆ ಮೂಡಿಸಿ ಅವರು ಮಾತನಾಡಿದರು. ಸುಮಾರು 60 ಶಿಬಿರಾರ್ಥಿಗಳಿಗೆ ದಂತ ತಪಾಸಣೆ ನಡೆಸಲಾಯಿತು. ಉಪನ್ಯಾಸಕಿ ಪ್ರವೀಣಾ ನಾಯಕ ಅಧ್ಯಕ್ಷತೆ ವಹಿಸಿದರು. ಬಸವರಾಜ ಶೀಲವಂತರ್ ಸಂಗಡಿಗರು ಪ್ರಾರ್ಥಿಸಿದರು. ಕಾವ್ಯ ಕಂಡಪ್ಪನವರ್ ಸ್ವಾಗತಿಸಿದರು. ಸಂಪ್ರೀತಿ ನಾಯಕ ಪರಿಚಯಿಸಿದರು. ಅಧಿಕಾರಿಗಳಾದ ರಾಘವೇಂದ್ರ ಅಂಕೋಲೆಕರ್, ಪ್ರಧಾನ ಕಾರ್ಯದರ್ಶಿ ಸೂರಜ ನಾಯಕ ಉಪಸ್ಥಿತರಿದ್ದರು. ಗಗನಾ ನಾಯಕ ನಿರೂಪಿಸಿದರು ಅನುಷಾ ನಾಯ್ಕ ವಂದಿಸಿದರು.

# ಚಿಟ್ಟಾ ಗ್ರಾಮದಲ್ಲಿ ಉಚಿತ ಕ್ಯಾನ್ಸರ್ ಮತ್ತು ಕಣ್ಣಿನ ತಪಾಸಣೆ ಶಿಬಿರ

**ಮಲ್ಲಮ್ಮ ನುಡಿ ವಾರ್ತೆ ಬೀದರ್**

ತಾಲೂಕಿನ ಚಿಟ್ಟಾ ಗ್ರಾಮ ಪಂಚಾಯತ ಹಾಗೂ ಆರೋಗ್ಯ ಕ್ಷೇಮ ಕೇಂದ್ರದ ಆವರಣದಲ್ಲಿ ಆರ್ಬಿಟ್ ಸೇವಾ ಸಂಸ್ಥೆ ಹುಮನಾಬಾದ, ಇಂಡಿಯನ್ ಕ್ಯಾನ್ಸರ್ ಸೊಸೈಟಿ ಗುಲ್ಬರ್ಗ, ಡಾನ್ ಬಾಸ್ಕೋ ಹಾಗೂ ಸೈಲೆನ್ಸ್ ಆಸ್ಪತ್ರೆ ಬೀದರ್ ಇವರ ಸಂಯುಕ್ತ ಆಶ್ರಯದಲ್ಲಿ ಉಚಿತ ಕ್ಯಾನ್ಸರ್ ಮತ್ತು ಕಣ್ಣಿನ ತಪಾಸಣೆ ಶಿಬಿರವನ್ನು ಏರ್ಪಡಿಸಲಾಗಿತ್ತು. ಈ ಕ್ಯಾನ್ಸರ್ ತಪಾಸಣಾ ಶಿಬಿರದಲ್ಲಿ ಡಾನ್ ಬಾಸ್ಕೋ ಸಂಸ್ಥೆಯ ನಿರ್ದೇಶಕರಾದ ಫಾದರ್ ಸ್ಟೀವನ್ ಲಾರೆನ್ಸ್ ಅವರು ಮುಖ್ಯ ಅತಿಥಿ ಸ್ಥಾನವನ್ನು ವಹಿಸಿದರು. ಇಂಡಿಯನ್ ಕ್ಯಾನ್ಸರ್ ಸುಸೈತಿಯಯ ವೈದ್ಯರಾದ ಡಾ.ಸುಶ್ಮಿತಾ, ಸಿ ಏಚ್ ಓ ನಜರೆತ್, ಗ್ರಾಮ ಪಂಚಾಯ ಅಭಿವೃದ್ಧಿ ಅಧಿಕಾರಿಗಳು ಮತ್ತು ಸೆಕ್ರೆಟರಿ, ಅತಿಥಿಗಳಾಗಿದ್ದರು. ಆರ್ಬಿಟ್ ಸಂಸ್ಥೆಯ ಕ್ಯಾನ್ಸರ್ ಕಾರ್ಯಕ್ರಮದ ಸಂಯೋಜಕರಾದ ಯೊಹಾನ್ ವಾಲಿ, ಕಾರ್ಯಕರ್ತೆ ರೋಸ್ ಮೇರಿ, ಆನಂದ ಹಾಗೂ ಡಾನ್ ಬಾಸ್ಕೋ ಸೀಮನ್ ಸರ್, ರಾಜೇಶ್ರೀ ಮೇಡಂ, ಆಶಾ ಕಾರ್ಯಕರ್ತೆಯರು ಅತ್ತು ಗ್ರಾಮಸ್ಥರು ಉಪಸ್ತಿತರಿದ್ದರು. ಆರೋಗ್ಯವೇ ಭಾಗ್ಯ ಎಂಬ ಧ್ಯೆಯ ವಾಕ್ಯದೊಂದಿಗೆ ಕ್ಯಾನ್ಸರ್





ರೋಗದ ಕುರಿತು ಮತ್ತು ಕ್ಯಾನ್ಸರ್ ತಪಾಸಣೆಯ ಉದ್ದೇಶ ಕುರಿತು ತಿಳಿಸಿದರು. ನಮ್ಮ ಆರೋಗ್ಯ ನಾವೇ ಕಾಪಾಡಿಕೊಳ್ಳಬೇಕು ನಮ್ಮ ಜೀವನದಲ್ಲಿ ಎಲ್ಲದರಿಂದ ಆರೋಗ್ಯದ

ಜೀವನ ಜೀವಿಸಬೇಕು ಎಂದು ಪ್ರಾಸ್ತಾವಿಕ ನುಡಿಗಳನ್ನು ನುಡಿದ್ದರು. ಆರ್ಬಿಟ್ ಸಂಸ್ಥೆಯ ಕ್ಯಾನ್ಸರ್ ಕಾರ್ಯಕ್ರಮದ ಸಂಯೋಜ-ಕರಾದ ಯೊಹಾನ್ ವಾಲಿ ಅವರು ಸುಮಾರ 33 ವರ್ಷಗಳಿಂದ ಬೀದರ್ ನಾಡಿನ 8 ತಾಲೂಕಗಳಲ್ಲಿ ವಿಧವಾದ ಸಮಾಜ ಸೇವೆಯನ್ನು ಮಾಡುತ್ತಾ ಬರುತ್ತಿದ್ದು ಮಾನಸಿಕ ಆರೋಗ್ಯ, ಬೆಳವಣಿಗೆಯಲ್ಲಿ ಕುಂಠಿತ, ಮಹಿಳಾ ಸಬಲೀಕರಣ ಕಾರ್ಯಕ್ರಮಗಳನ್ನು ಸಮಾಜದ ಜನರಿಗೆ ಸೇವೆ ಸಲ್ಲಿಸುತ್ತಾ ಬಂದಿದೆ. ಇದರಲ್ಲಿ ಕ್ಯಾನ್ಸರ್ ಎಂಬುದು ತುಂಬ ಜನರಲ್ಲಿ ಇತ್ತೀಚಿನ ದಿನಗಳಲ್ಲಿ ಕಂಡು ಬರುತ್ತಿದ್ದು. ತಮ್ಮ ಜೀವಿಸುವ ಜೀವನವನ್ನು ನಸ್ಯ ಪಡಿಸುತ್ತಿದೆ ಅದನ್ನು ನಾವು ಅರಿಯದೇ ಬೇಜವಾಬ್ದಾರಿಯಿಂದ ಇರುತ್ತೇವೆ ಅದಕ್ಕಾಗಿ ಕ್ಯಾನ್ಸರ್ ಬರುವುದಕ್ಕಿಂತ ಮುಂಚಿತವಾಗಿಯೇ ನಾವು ತಪಾಸಣೆಯನ್ನು ಮಾಡಿಸಿಕೊಂಡು ಪ್ರಾರಂಭದಲ್ಲಿಯೇ ಪತ್ತೆ ಹಾಚಿ ಉತ್ತಮ ಚಿಕಿತ್ಸೆಯನ್ನು ಮಾಡಿಕೊಂಡು ಗುಣಮುಖರಾಗಬಹುದು. ಹಾಗೂ ಒಳ್ಳೆಯ ಆರೋಗ್ಯದ ಜೀವನ ನಡೆಸಬಹುದು. ಈ ಉಚಿತ ಕ್ಯಾನ್ಸರ್ ಮತ್ತು ಕಣ್ಣಿನ ತಪಾಸಣೆ ಪಡೆದುಕೊಂಡು ಆರೋಗ್ಯವಂತರಾಗಿ ಇರಬೇಕು ಎಂದು ಸ್ಪಷ್ಟವಾಗಿ ತಿಳಿಸಿದರು. ಈ ಕ್ಯಾನ್ಸರ್ ತಪಾಸಣೆ ಶಿಬಿರದಲ್ಲಿ ಗ್ರಾಮದ 57 ಜನರು ತಪಾಸಣೆ ಮಾಡಿಸಿಕೊಂಡರು ಹಾಗೂ 22 ಜನರು ಕಣ್ಣಿನ ತಪಾಸಣೆ ಮಾಡಿಸಿಕೊಂಡರು.08 ಜನರಿಗೆ ಕಣ್ಣಿನ ಸಮಸ್ಯೆ ಇರುವುದರಿಂಗ ಸೈಲೆನ್ಸ್ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವುದಕಾಗಿ ತಿಳಿಸಿದರು. ಈ ಉಚಿತ ಕ್ಯಾನ್ಸರ್ ಮತ್ತು ಕಣ್ಣಿನ ತಪಾಸಣೆ ಶಿಬಿರದಲ್ಲಿ 93 ಜನರು ಉಪಸ್ತಿತರಿದ್ದರು. ಸುಮಾರು 4:30 ಗಂಟೆಗೆ ಮುಕ್ತಾಯ ಮಾಡಲಾಗಿತ್ತು. ಈ ಕಾರ್ಯಕ್ರಮವನ್ನು ಆನಂದ್ ಎಲ್ ಎಲ್ ಎಲ್ ಏಫ್ ಕ್ಷೇತ್ರ ಮೇಲ್ವಿಚಾರಕರು ನಿರೂಪಣೆ ಮಾಡಿದರು. ಯೊಹಾನ್ ವಾಲಿ ಕ್ಯಾನ್ಸರ್ ಕಾರ್ಯಕ್ರಮದ ಸಂಯೋಜಕರು ಸ್ವಾಗತಿಸಿದರು, ಮಹಿಳಾ ಸಬಲೀಕರಣ ಆರ್ಬಿಟ್ ಕಾರ್ಯಕ್ರಮದ ಕಾರ್ಯಕರ್ತೆ ರೋಸ್ ಮೇರಿ ಅವರು ವಂದಿಸಿದರು.

# ಶೈಕ್ಷಣಿಕ ಪ್ರಗತಿಯೊಂದಿಗೆ ಉತ್ತಮ ಭವಿಷ್ಯ ರೂಪಿಸಿಕೊಳ್ಳಿ : ಮದ್ದಾನಪ್ಪ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ / ಕಂಪ್ಲಿ

ವಿದ್ಯಾರ್ಥಿನಿಯರು ಚೆನ್ನಾಗಿ ಓದಿ ಶೈಕ್ಷಣಿಕ ಪ್ರಗತಿ ಸಾಧಿಸುವ ಮೂಲಕ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಮುಂದಾಗಬೇಕು. ಶಿಕ್ಷಣ ಭವಿಷ್ಯದ ದಾರಿ ದೀಪ ಎಂದು ವಿನೂತನ ಮಹಿಳಾ ಪದವಿ ಮಹಾವಿದ್ಯಾಲಯದ ಪ್ರಾಂಶುಪಾಲ ಮದ್ದಾನಪ್ಪ ಬಿಡನಾಳ ಅಭಿಪ್ರಾಯ ವ್ಯಕ್ತಪಡಿಸಿದರು. ಪಟ್ಟಣದಲ್ಲಿರುವ ಮದರ್ ತೆರೇಸಾ ಪದವಿ ಪೂರ್ವ ಕಾಲೇಜು ಹಾಗೂ ವಿನೂತನ ಮಹಿಳಾ ಪದವಿ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಅಂತಿ ವರ್ಷದ ವಿದ್ಯಾರ್ಥಿನಿಯರ ಬೀಳ್ಕೊಡಿಗೆ ಹಾಗೂ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿನಿಯರ ಸನ್ಮಾನ ಮತ್ತು ಸಾಂಸ್ಕೃತಿಕಾರ್ಯಕ್ರಮದನೇತೃತ್ವವಹಿಸಿ ಮಾತನಾಡಿ, ನಮ್ಮ ಸಂಸ್ಥೆಯು ಇಲ್ಲಿನ ವಿದ್ಯಾರ್ಥಿನಿಯರಿಗೆ ಉತ್ತಮ ಶಿಕ್ಷಣ ನೀಡುವ ಮೂಲಕ ಶೈಕ್ಷಣಿಕ ಮಟ್ಟದ ಅಭಿವೃದ್ಧಿಗೆ ಸದಾ ಶ್ರಮಿಸುತ್ತಿದೆ. ಶಿಕ್ಷಣ ಸಮಾಜದ ಸರ್ವತೋಮುಖ ಅಭಿವದ್ಧಿಗೆ ಮೂಲ ಅಸ್ತ್ರವಾಗಿದೆ. ವಿದ್ಯಾರ್ಥಿಗಳು ಶಿಸ್ತು, ತಾಳ್ಮೆ ಮತ್ತು ಏಕಾಗ್ರತೆಯನ್ನು ಮೈಗೂಡಿಸಿಕೊಂಡು ಕಲಿಕೆಯಲ್ಲಿ ಉತ್ತಮ ಸಾಧನೆ ಮಾಡಬೇಕು ಎಂದರು. ಶಾಸಕ ಜೆ.ಎನ್.ಗಣೇಶ್ ಉದ್ಘಾಟಿಸಿದರು. ಹೆಚ್.ವೀರಾಪುರದ ಶಿವಲಿಂಗ ಮಠದ ಜಡೇಶ್ ತಾತ ಕಾರ್ಯಕ್ರಮದ ದಿವ್ಯಸಾನಿಧ್ಯವಹಿಸಿದ್ದರು. ವಿವಿಎಸ್‌ಎಸ್ ಟ್ರಸ್ಟ್ ಅಧ್ಯಕ್ಷೆ ರಾಜಮ್ಮ ಹುಲುಗಪ್ಪ ಅಧ್ಯಕ್ಷತೆವಹಿಸಿದ್ದರು.

ನಂತರ ಪದವಿಯಲ್ಲಿ ಅತಿ ಹೆಚ್ಚು ಅಂಕದ ಸಾಧನೆ ಮಾಡಿದ ವಿದ್ಯಾರ್ಥಿನಿಯರಾದ ಇಂದ್ರಜಾ, ಗೌಡ್ರು ರಶ್ಮಿ, ತುಂಗಭದ್ರ, ಕೆ.ಎಂ.ಪವಿತ್ರಾ, ಜಿ.ಸಿದ್ದೇಶ್ವರಿ, ಎಂ.ಸುನಂದಾ, ಎನ್.ಭಾಗ್ಯಮ್ಮ,

ಎಂ.ಐಶ್ವರ್ಯ, ಕೆ.ಅಕ್ಷತಾ, ಕೆ.ಅಂಜಲಿ, ಶಮಾ ಪರ್ವಿನ್, ಸನ್ಮಾನಿಸಿ ಗೌರವಿಸಿದರು. ತದನಂತರ ಅಂತಿ ವರ್ಷದ ವಿದ್ಯಾರ್ಥಿನಿಯರಿಗೆ ಅದ್ದೂರಿಯಾಗಿ ಬೀಳ್ಕೊಡಲಾಯಿತು.

ಇಲ್ಲಿನ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯರು ಕನ್ನಡ ಸೇರಿದಂತೆ ವಿವಿಧ ಹಾಡಿಗೆ ನೃತ್ಯ ಮಾಡುವ ಮೂಲಕ ಗಮನ ಸೆಳೆದರು. ಈ ಸಂದರ್ಭದಲ್ಲಿ ಅಪೆಕ್ಸ್ ಬ್ಯಾಂಕ್ ನಿರ್ದೇಶಕ ಪಿ.ಮೂಕಯ್ಯಸ್ವಾಮಿ, ಅಕ್ಕಿ ಗಿರಿಣಿ ಮಾಲಿಕರ ಸಂಘದ ರಾಜ್ಯ ಉಪಾಧ್ಯಕ್ಷ ಕೆ.ಎಂ.ಹೇಮಯ್ಯಸ್ವಾಮಿ, ಪುರಸಭೆ ಮಾಜಿ ಸದಸ್ಯ ಸಿ.ಆರ್. ಹನುಮಂತ,

ವಿವಿಎಸ್‌ಎಸ್ ಟ್ರಸ್ಟ್ ಕಾರ್ಯದರ್ಶಿ ಪ್ರಕಾಶ್ ನಾಯಕ, ಪ್ರಾಚಾರ್ಯರಾದ ಮಹಮ್ಮದ್ ಶಫಿ, ಬಸವರಾಜಸ್ವಾಮಿ, ಮದ್ದಾನೆಪ್ಪಬಿಡನಾಳ, ಮಹಾಬಲೇಶ್ವರಪ್ಪ, ದಕ್ಷಿಣ ಭಾರತದ ಸಾವಿತ್ರಿ ಬಾಯಿ ಪುಲೆ ಅತ್ಯುತ್ತಮ ಪ್ರಶಸ್ತಿ ಪುರಸ್ಕೃತೆ ಶಾಂತ ಗಡ್ಡದ್, ವಸತಿ ನಿಲಯ ಪಾಲಕಿ ಎಂ.ಬಿ.ಶುಭಾ ಸೋಮಶೇಖರ, ವೈದ್ಯಕೀಯ ಕ್ಷೇತ್ರದ ಡಾ.ಶ್ರದ್ಧಾ ಭರತ್, ಆರೋಗ್ಯಕ್ಷೇತ್ರಶಿಕ್ಷಣಾಧಿಕಾರಿ ಕೆ.ಶೋಭಾ ಸೇರಿದಂತೆ ಉಪನ್ಯಾಸಕರು, ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.

# ರಸ್ತೆ ಅಭಿವೃದ್ಧಿ ನೆಪದಲ್ಲಿ ಶಾಲೆ ತೆರವು




ಹುಣಸೂರು ನಗರದ ಕಲ್ಕುಣಿಕೆ ಸರ್ಕಲ್ ನಲ್ಲಿರುವ ಐತಿಹಾಸಿಕ ಸರ್ಕಾರಿ ಶಾಲೆಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಅವೈಜ್ಞಾನಿಕವಾದ ರಸ್ತೆ ಅಭಿವೃದ್ಧಿ ನೆಪದಲ್ಲಿ ಶಾಲೆ ಕಟ್ಟಡವನ್ನು ನೆಲಸಮ ಮಾಡಿ ರಸ್ತೆ ಅಗಲಿಕರಣಕ್ಕೆ ಮುಂದಾಗಿರುವುದನ್ನು ಖಂಡಿಸಿ ಮಾಜಿ ಶಾಸಕ ಸ್ನೇಹಜೀವಿ ಎಚ್ ಪಿ ಮಂಜುನಾಥ್ ರವರು ಕಲ್ಕುಣಿಕೆ ಶಾಲಾಭಿವೃದ್ಧಿ ಸಮಿತಿ, ಪೋಷಕರ ಸಮಿತಿ, ಹಿರಿಯ ವಿದ್ಯಾರ್ಥಿಗಳ ಸಮಿತಿ ಹಾಗೂ ಗ್ರಾಮಸ್ಥರುಗಳೊಂದಿಗೆ ಪ್ರತಿಭಟನೆ ನಡೆಸಿ ಸ್ಥಳಕ್ಕೆ ಮಾಜಿ ಶಾಸಕ ಎಚ್ ಪಿ ಮಂಜುನಾಥ್ ಬೇಟಿ ನೀಡಿ ಪ್ರತಿಭಟನಾಕಾರರ ಸಮಸ್ಯೆಯನ್ನು ಆಲಿಸಿ ಶಾಲಾ ಸಮಿತಿ ವತಿಯಿಂದ ಹಾಗೂ ಸ್ಥಳೀಯರ ಮನವಿ ಪತ್ರವನ್ನು ಸ್ವೀಕರಿಸಿ

ನಂತರ ಮಾತನಾಡಿ ಮಾಜಿ ಶಾಸಕಸ್ನೇಹಜೀವಿ ಎಚ್ ಪಿ ಮಂಜುನಾಥ್ ರವರು ಮಾತನಾಡಿ 1937 ರ ಸ್ವಾತಂತ್ರ್ಯ ಪೂರ್ವದಲ್ಲಿ ಆರಂಭಗೊಂಡ ಕಲ್ಕುಣಿಕೆ ಸರ್ಕಲ್ ಸರ್ಕಾರಿ ಶಾಲೆಯು ಶತಮಾನೋತ್ಸವದ ಅಂಚಿನಲ್ಲಿದೆ. ಈ ಶಾಲೆಯಲ್ಲಿ ಕಲಿತ ಸಾವಿರಾರು ಮಂದಿ ವಿದ್ಯಾರ್ಥಿಗಳು ಉನ್ನತ ಮಟ್ಟಕ್ಕೇರಿದ್ದಾರೆ. ಹಾಗೂ ಈ ಶಾಲೆಯು ಭಾಗದ ಜನರ ಅಸ್ಮಿತೆಯಾಗಿದ್ದು ಇದನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು, ಅವೈಜ್ಞಾನಿಕವಾಗಿ ರಸ್ತೆ ಅಭಿವೃದ್ಧಿ ನೆಪದಲ್ಲಿ ಶಾಲೆ ತೆರವು ಮಾಡಲು ಹೊರಟಿರುವುದು ಖಂಡನೀಯ ಎಂದರು

ಈ ಕೂಡಲೆ ಅವೈಜ್ಞಾನಿಕ ವಾಗಿ ಕೂಡಿರುವ ರಸ್ತೆ ಅಗಲಿಕರಣ ಕಾಮಗಾರಿಯನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ಶಾಲಾಭಿವೃದ್ಧಿ ಸಮಿತಿ, ಪೋಷಕರ ಸಮಿತಿ, ಹಿರಿಯ ವಿದ್ಯಾರ್ಥಿಗಳ ಸಮಿತಿ ಹಾಗೂ ಗ್ರಾಮಸ್ಥರು ಗಳೊಂದಿಗೆ ಉಗ್ರ ಪ್ರತಿಭಟನೆ ನಡೆಸಲಾಗುವುದೆಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರಿಗೆ ಎಚ್ಚರಿಕೆ ನೀಡಿದ್ದೇವೆ ಎಂದು ತಿಳಿಸಿದರು ಈ ಸಂದರ್ಭದಲ್ಲಿ ಶಿಕ್ಷಣಾಧಿಕಾರಿಗಳ ಮಾದೇವಸ್ವಾಮಿ ಹಾಗೂ ನಗರಸಭೆ ಪೌರಾಯುಕ್ತರು ಮಾನಸ ಅವರಿಗೂ ಕೂಡ ಮನವಿ ಪತ್ರ ಸಲ್ಲಿಸಲಾಯಿತು.ಈ ವೇಳೆ ಶಾಲಾ ಅಭಿವೃದ್ಧಿ ಸಮಿತಿಯವರು, ಪೋಷಕರು ಹಿರಿಯ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು

# ಮಿಷನ್ ಪ್ರಕೃತಿ ಅಭಿಯಾನ ಪ್ರಶಸ್ತಿ ಪ್ರದಾನ




ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ / ಕಂಪ್ಲಿ

ತಾಲೂಕಿನ ಎಮ್ಮಿಗನೂರು ಗ್ರಾಮದ ಶಾಲೆ ರಾಜ್ಯ ಸರಕಾರದ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯಿಂದ ಮಿಷನ್ ಪ್ರಕೃತಿ ಅಭಿಯಾನ ನಿಮಿತ್ತ ಕೈಗೊಂಡ ಚಟುವಟಿಕೆಗಳನ್ನು ಪರಿಗಣಿಸಿ ಗ್ರಾಮದ ಸರಕಾರಿ ಶತಮಾನ ಶಾಲೆಗೆ ಬೆಂಗಳೂರಿನ ವಿಕಾಸ ಸೌಧದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಿಕ್ಷಣ ಮಂತ್ರಿ ಮಧು ಬಂಗಾರಪ್ಪ ಪ್ರಶಸ್ತಿ ಫಲಕ ನೀಡಿ ಗೌರವಿಸಿದರು.

ಶಾಲೆಯ ಮುಖ್ಯಶಿಕ್ಷಕ ಬಿ.ಎಸ್. ಸದ್ಯೋಜಾತಪ್ಪ ಮಾತನಾಡಿ, ಎರಡು ತಿಂಗಳು ನಡೆದ ಮಿಷನ್ ಪ್ರಕೃತಿ ಅಭಿಯಾನದಲ್ಲಿ ಪರಿಸರಕ್ಕೆ ಸಂಬಂಧಿಸಿದ ಹಲವಾರು ಚಟುವಟಿಕೆಗಳನ್ನು ಇಕೋ ಕ್ಲಬ್‌ನಿಂದ ಹಮ್ಮಿಕೊಂಡು ಯಶಸ್ವಿಗೊಳಿಸಲಾಗಿದೆ. ಮಕ್ಕಳಿಗೆ ಸರಿಯಾದ ಮಾಹಿತಿ ನೀಡಿದ ಮಾರ್ಗದರ್ಶಿ ಶಿಕ್ಷಕಿ ಶ್ರುತಿ ಹಾಗೂ ಸಿಬ್ಬಂದಿ, ಎಸ್‌ಡಿಎಂಸಿ ಸದಸ್ಯರಿಗೆ ಧನ್ಯವಾದಗಳು ಎಂದರು. ಬಳ್ಳಾರಿ ಡಯಟ್‌ನ ರಂಗಾರೆಡ್ಡಿ, ವಿಜ್ಞಾನ ಶಿಕ್ಷಕಿ ಶ್ರುತಿ, ಶಿಕ್ಷಕ ವೆಂಕಟೇಶ್, ಮಕ್ಕಳಾದ ರೆಹಮಾನ್ ಬಿ., ಮೇಘನಾ, ಅನೀಫ್, ಕೆಂಚಮಾಳಪ್ಪ ಹಾಗೂ ಶಾಲೆ ಶಿಕ್ಷಕರು, ಇಲಾಖೆ ಅಧಿ ಕಾರಿಗಳು ಇತರರು ಇದ್ದರು.

# ನೀಲಕಂಠೇಶ್ವರ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಪ್ರಥಮ ವಾರ್ಷಿಕೋತ್ಸವ ಸಂಭ್ರಮ



ಮಲ್ಲಮ್ಮನುಡಿ ಹುಣಸಗಿ ಪೇ :ಬುದುವಾರಸ್ಥಳೀಯನೀಲಕಂಠೇಶ್ವರ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಪ್ರಥಮ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಸಂಭ್ರಮದಿಂದ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮಕ್ಕೆ ದಿವ್ಯಸಾನಿಧ್ಯವನ್ನು ಶಿವಮೂರ್ತಿ ಶಿವಾಚಾರ್ಯದೇವಾಪುರಪೂಜ್ಯರು ವಹಿಸಿದ್ದರು.

ವಿಶೇಷ ಉಪನ್ಯಾಸಕರಾಗಿ ಆಗಮಿಸಿದ ಸಹನಾ ಸುನಿಲ್ ಅವರು ಮಾತನಾಡಿ, "ಶಿಕ್ಷಣವೇ ಎಲ್ಲದಕ್ಕೂ ಮೂಲಧಾರ. ಶಿಕ್ಷಣದೊಂದಿಗೆ ಧೈರ್ಯವೂ ಇರಬೇಕು. ಮಕ್ಕಳಲ್ಲಿ ಆತ್ಮವಿಶ್ವಾಸ ಬೆಳೆಸುವುದು ಅತ್ಯಂತ ಮುಖ್ಯ" ಎಂದು ಹೇಳಿದರು.

ನಂತರಪಂಚಾಕ್ಷರಯ್ಯಸ್ಥಾವರಮಠ ಅವರು ಮಾತನಾಡಿ, ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರವೂ ಅಗತ್ಯವೆಂದು ತಿಳಿಸಿದರು. ಶಾಲಾ ವಾರ್ಷಿಕೋತ್ಸವವು ಕೇವಲ ಮನರಂಜನೆಗೆ ಸೀಮಿತವಾಗದೆ, ಪ್ರಗತಿಪರ ಚಿಂತನೆಗಳಿಗೆ ದಾರಿಯಾಗಬೇಕು ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ನಾಗಣ್ಣ ದಂಡಿನ ಸಾಹುಕಾರ, ವಿರೇಶ ಬಿ. ಚಿಂಚೋಳಿ, ಬಸವರಾಜಸ್ವಾಮಿ ಸ್ಥಾವರಮಠ, ಅಮರಣ್ಣದೇಸಾಯಿ, ಸಿದ್ದಣ್ಣಸಾಹುಕಾರ ಅಂಕಲಕೋಟ, ಬಸಣ್ಣದೇಸಾಯಿ, ಸೋಮಶೇಖರ ಸ್ಥಾವರಮಠ, ಸುರೇಶ ದೋರಿ, ಶಿವನಗೌಡ ಪಾಟೀಲ, ಮುರಿಗಣ್ಣ ದೇಸಾಯಿ, ಆರ್.ಎಲ್. ಸು–ಣಗಾರ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಸವರಾಜ ವೈಲಿ ವಹಿಸಿದ್ದರು. ಮುಖ್ಯ ಗುರುಗಳಾದ ಪಲ್ಲವಿ ವೈಲಿ ಕಾರ್ಯಕ್ರಮದ ನೇತೃತ್ವ ವಹಿಸಿದರು. ಕಾರ್ಯಕ್ರಮವನ್ನು ಆನಂದ ಬಾರಿಗಿಡ ನಿರೂಪಿಸಿದರು.

ಈ ಸಂದರ್ಭದಲ್ಲಿ ಮಕ್ಕಳಿಂದ ವೈವಿಧ್ಯಮಯ ಸಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಜೊತೆಗೆ ಪಾಲಕರ ಕ್ರೀಡಾಕೂಟ ಸ್ಪರ್ಧೆಗಳನ್ನುಆಯೋಜಿಸಿ, ಭಾಗವಹಿಸಿದ ಪಾಲಕರಿಗೆ ಬಹುಮಾನ ವಿತರಣೆ ಮಾಡಲಾಯಿತು. ಕಾರ್ಯಕ್ರಮವು ಸಂತೋಷ ಮತ್ತು ಸಂಭ್ರಮದ ವಾತಾವರಣದಲ್ಲಿ ನೆರವೇರಿತು.

# ಶಿಕ್ಷಕ ನಿರೂಪಕ ರಾಮಪ್ಪ ಅವರಿಗೆ ಸಾಧಕ ಪ್ರಶಸ್ತಿ



ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಗರದ ಮೋತಿ ಸರ್ಕಲ್ ನ ಖಾದಿ ಬಂಡಾರದ ರಾಕ್ ವಿಲ್ಲೆ ಕರೋಕೆ ಕ್ಲಬ್ಬಿನಲ್ಲಿ ಕರ್ನಾಟಕದ ಕಾರ್ಮಿಕ ಸಚಿವ ಸಂತೋಷ್ ಎಸ್ ಲಾಡ್ ಅವರ 52ನೇ ಹುಟ್ಟುಹಬ್ಬದ ಪ್ರಯುಕ್ತ ಸಂಜೀವಿನಿ ಜೀವ ರಕ್ಷಕ ಟ್ರಸ್ಟ್ ವತಿಯಿಂದ ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ ಸಮಾರಂಭದಲ್ಲಿ ಎಮ್ಮಿಗನೂರು ಗ್ರಾಮದ ಸರಕಾರಿ ಶತಮಾನಶಾಲೆಯ ಗೌರವ ಶಿಕ್ಷಕ ನಿರೂಪಕ ಎಸ್ ರಾಮಪ್ಪ ಅವರ ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರದ ಸಾಧನೆಯನ್ನು ಪರಿಗಣಿಸಿ ಗೌರವಿಸಿ ಅಭಿನಂದಿಸಲಾಯಿತು

ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಿಷ್ಠಿ ರುದ್ರಪ್ಪ, ತೋರಣಗಲ್ಲನ ಬಂಡಾಯ ಸಾಹಿತಿ ಅಬ್ದುಲ್ ಹೈ, ಸಂಜೀವಿನಿ ಜೀವ ರಕ್ಷಕ ಟ್ರಸ್ಟಿನ ರಾಜ್ಯ ಯುವ ಘಟಕದ ಅಧ್ಯಕ್ಷರಾದ ಪ್ರಸನ್ನ ಕುಮಾರ್, ಪದಾಧಿಕಾರಿಗಳಾದ ಡಿಜೆ ತಿರುಮಲ, ಲೋಕೇಶ್ ಸೇರಿದಂತೆ ಇತರರಿದ್ದರು.

# ಪತ್ರಕರ್ತರ ಸಂಘದ ಸದಸ್ಯತ್ವ ನವೀಕರಣ ಹೊಸ ಸದಸ್ಯತ್ವಕ್ಕೆ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 2026–27ನೇ ಸಾಲಿನ ಸದಸ್ಯತ್ವ ನವೀಕರಣ ಮತ್ತು ಹೊಸ ಸದಸ್ಯತ್ವ ಪಡೆಯಲು ರಾಜ್ಯ ಸಮಿತಿಯ ನಿರ್ದೇಶನದ ಮೇರೆಗೆ ರಾಯಚೂರು ಜಿಲ್ಲಾ ಸಮಿತಿಯಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ



ಜಿಲ್ಲಾಧ್ಯಕ್ಷ ಆರ್.ಗುರುನಾಥ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ಮಾ.1ರಿಂದ ಆಯಾ ತಾಲೂಕಿನ ಅಧ್ಯಕ್ಷರಿಗೆ ಅರ್ಜಿ ಸಲ್ಲಿಸಬೇಕು. ರಾಯಚೂರು ನಗರ ವ್ಯಾಪ್ತಿಯ ಪತ್ರಕರ್ತರು ನಗರದ ಪತ್ರಿಕಾ ಭವನದಲ್ಲಿ ಅರ್ಜಿಗಳನ್ನು ಪಡೆಯಬಹುದು. ಅರ್ಜಿ ನವೀಕರಣ ಅಥವ ನೂತನ ಸದಸ್ಯತ್ವಪಡೆಯಲು ಹಿಂದಿನ ವರ್ಷದ ಸಂಘದ ಕಾರ್ಡ್, ಸಂಪಾದಕರು ಅಥವ ಮಾಧ್ಯಮ ಸಂಸ್ಥೆಗಳು ನೀಡಿದ ಆದೇಶ ಪ್ರತಿ, ಆಧಾರ್ ಕಾರ್ಡ್, ಎರಡು ಭಾವಚಿತ್ರ ಮತ್ತು 510 ರೂ. ಶುಲ್ಕದೊಂದಿಗೆ ಅರ್ಜಿ ಸಲ್ಲಿಸತಕ್ಕದ್ದು. ಅರ್ಜಿ ಸಲ್ಲಿಸಲು ಮಾ.8 ಕೊನೆ ದಿನವಾಗಿದೆ ಎಂದು ತಿಳಿಸಿದ್ದಾರೆ.ತಾಲೂಕು ಮಟ್ಟದಲ್ಲಿ ಸಲ್ಲಿಕೆಯಾದ ಅರ್ಜಿಗಳನ್ನು ಆಯಾ ತಾಲೂಕು ಘಟಕಗಳ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು ಸೇರಿದಂತೆ ಪದಾಧಿಕಾರಿಗಳು ಪರಾಮರ್ಶೆ ನಡೆಸಿ ಮಾ.10ರೊಳಗೆ ಅರ್ಜಿ ಮತ್ತು ಶುಲ್ಕದ ಮೊತ್ತವನ್ನು ಜಿಲ್ಲಾ ಸಮಿತಿಗೆ ರವಾನಿಸಬೇಕು. ಹೊಸದಾಗಿ ಅರ್ಜಿ ಸಲ್ಲಿಸುವವರು ಎಸ್‌ಎಸ್‌ಎಲ್‌ಸಿ ತೇರ್ಗಡೆ ಪ್ರಮಾಣ ಪತ್ರ ಲಗತ್ತಿಸಬೇಕು. ಜತೆಗೆ ಕನಿಷ್ಠ ಎರಡು ವರ್ಷ ಸೇವಾನುಭವ ಹೊಂದಿರುವ ಕುರಿತು ಸಂಸ್ಥೆಗಳಿಂದ ದೃಢಿಕರಣ ಪತ್ರ ಸಲ್ಲಿಸಬೇಕು ಎಂದು ತಿಳಿಸಿದ್ದಾರೆ.

# ಇಂದು ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಚಾಲನೆ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,27–ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕೃಷಿ ಮತ್ತು ಕೃತಿ ಸಂಬಂಧಿತ ಇಲಾಖೆಗಳ ಆಶ್ರಯದಲ್ಲಿ ಫೆಬ್ರವರಿ 28 ರಂದು ಜಿಲ್ಲಾ ಕೃಷಿ ತರಬೇತಿ ಕೇಂದ್ರದ ನೂತನ ಕಟ್ಟಡ ಉದ್ಘಾಟನೆ, ಕಬ್ಬಿನಲ್ಲಿ ಮಣ್ಣಿನ ಆರೋಗ್ಯ ಮತ್ತು ನೀರಿನ ಸಮಗ್ರ ನಿರ್ವಹಣೆ ಹಾಗೂ ಎಣ್ಣೆಕಾಳು ಬೆಳೆಗಳ ನವೀನ ತಾಂತ್ರಿಕತೆಗಳ ಕುರಿತು ತಾಂತ್ರಿಕ ಗೋಷ್ಠಿ ಮತ್ತು ದೇಸಿ ತಳಿಗಳ ಸಂರಕ್ಷಣೆ ಮತ್ತು ಪ್ರದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಶನಿವಾರ ಮಧ್ಯಾಹ್ನ 2 ಗಂಟೆಗೆ ನವನಗರದ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಆವರಣದಲ್ಲಿ ಜರಗುವ ಕಾರ್ಯಕ್ರಮದ ಉದ್ಘಾಟನೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ನೆರವೇರಿಸಲಿದ್ದು, ವಿಶೇಷ ಆಹ್ವಾನಿತರಾಗಿ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಆಗಮಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ನವದೆಹಲಿಯ ಕರ್ನಾಟಕದ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ, ಬೀಳಗಿ ಶಾಸಕ ಜೆ.ಟಿ.ಪಾಟೀಲ, ಹುನಗುಂದ ಶಾಸಕ ವಿಜಯಾನಂದ ಕಾಶಪ್ಪನವರ, ಸಂಸದ ಪಿ.ಸಿ.ಗದ್ದಿಗೌಡರ, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಸೇರಿದಂತೆ ಜಿಲ್ಲೆಯ ಎಲ್ಲ ವಿಧಾನ ಸಭಾ, ವಿಧಾನ ಪರಿಷತ್ ಶಾಸಕರು ಹಾಗೂ ಇತರೆ ಗಣ್ಯಮಾನ್ಯರು ಆಗಮಿಸಲಿದ್ದಾರೆ.

# ಕೈ ಮತ್ತು ಕಾಲು ಶಸ್ತ್ರಚಿಕಿತ್ಸಾ ಕಾರ್ಯಾಗಾರ ಶಸ್ತ್ರಚಿಕಿತ್ಸಾ ಕೌಶಲಕ್ಕಾಗಿ ತರಬೇತಿ ಅಗತ್ಯ: ಭುವನೇಶ್ವರಿ

ಮಲ್ಲಮ್ಮ ನುಡಿ ವಾರ್ತೆ




ಬಾಗಲಕೋಟೆ,27–ವೈದ್ಯಕೀಯ ಕ್ಷೇತ್ರದಲ್ಲಿ ಶಸ್ತ್ರಚಿಕಿತ್ಸೆ ಕಠಿಣವಾದ ಚಿಕಿತ್ಸಾ ವಿಧಾನವಾಗಿದ್ದು, ಈ ಕ್ಷೇತ್ರದಲ್ಲಿ ಪರಿಣತಿ ಹೊಂದಲು ವೈದ್ಯರಿಗೆ ತರಬೇತಿ ನೀಡುವುದು ಅವಶ್ಯಕವಾಗಿದೆ. ತರಬೇತಿ ಮೂಲಕ ಪರಿಣತ ಮತ್ತು ಕೌಶಲಪೂರ್ಣ ಶಸ್ತ್ರಚಿಕಿತ್ಸಕರನ್ನು ರೂಪಿಸಲು ಸಾಧ್ಯ ಎಂದು ನಿಜಲಿಂಗಪ್ಪ ಮೆಡಿಕಲ್ ಕಾಲೇಜಿನಪ್ರಾಚಾರ್ಯೆ ಡಾ.ಭುವನೇಶ್ವರಿ ಯಳಮಲಿ ಹೇಳಿದರು.

ಬಿ.ವಿ.ವಿ ಸಂಘದ ಎಸ್.ನಿಜಲಿಂಗಪ್ಪ ಮೆಡಿಕಲ್ ಕಾಲೇಜಿನಲ್ಲಿ ಎಲುಬು ಮತ್ತು ಕೀಲು ವಿಭಾಗ, ಕರ್ನಾಟಕ ಆರ್ಥೋಪೆಡಿಕ್ ಅಸೋಸಿಯೇಷನ್ ಮತ್ತು ಬಾಗಲಕೋಟ ಜಿಲ್ಲಾ ಆರ್ಥೋಪೆಡಿಕ್ ಅಸೋಸಿಯೇಷನ್ ಇವುಗಳ ಸಹಯೋಗದಲ್ಲಿ ಆಯೋಜಿಸಿದ್ದ ಪ್ರಕಾರದ ಶಸ್ತ್ರಚಿಕಿತ್ಸಾ ತಜ್ಞರು ತಮ್ಮ ವೃತ್ತಿಯಲ್ಲಿ ಪರಣತಿ ಹೊಂದಲು ಈ ವಿಧಾನ ಉಪಯುಕ್ತವಾಗಿದೆ. ಶಸ್ತ್ರಚಿಕಿತ್ಸಾ ತರಬೇತಿಗಾಗಿ ಸುಸಜ್ಜಿತ ಪ್ರಯೋಗಾಲಯ ಸ್ಥಾಪಿಸಿದ್ದು ಕರ್ನಾಟಕ ಮಾತ್ರವಲ್ಲದೆ ಬೇರೆ ರಾಜ್ಯಗಳ ವೈದ್ಯಕೀಯ ವಿದ್ಯಾರ್ಥಿಗಳು ಮತ್ತು ವೈದ್ಯರು ಕಾರ್ಯಾಗಾರದಲ್ಲಿ ಶಸ್ತ್ರಚಿಕಿತ್ಸಾತರಬೇತಿ ಪಡೆಯುತ್ತಿದ್ದಾರೆ ಎಂದು ಡಾ.ಭುವನೇಶ್ವರಿ ಹೇಳಿದರು.

ಕಾರ್ಯಾಗಾರದ ನಿರ್ದೇಶಕ ಮತ್ತು ಡಾ.ಹರ್ಷ ಕ್ಯಾಲಕೊಂಡ ವಂದಿಸಿದರು. ವೈದ್ಯಕೀಯ ಅಧೀಕ್ಷಕ ಡಾ.ಶ್ರೀರಾಮ ಕೋರಾ, ಅಡ್ವಾನ್ಸ್ಡ್ ಕ್ಯಾಡವರಿಕ್ ಸ್ಕಿಲ್ ಲ್ಯಾಬ್ ಸಂಯೋಜಕ ಡಾ.ಸಂಜೀವ ಕೊಳಗಿ, ಬಾಗಲಕೋಟ ಜಿಲ್ಲಾ ಆರ್ಥೋಪೆಡಿಕ್ ಅಸೋಸಿಯೇಷನ್ ಅಧ್ಯಕ್ಷ ಡಾ.ಉದಯಕುಮಾರ ನಾಯಕ್, ಕಾರ್ಯದರ್ಶಿ ಡಾ.ಶುಶ್ರುತ ಭಾವಿ, ಅನಾಟಮಿ ಮತ್ತು ಆರ್ಥೋಪೆಡಿಕ್ಸ್ ವಿಭಾಗಗಳ ವೈದ್ಯರು ಮತ್ತು ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

ಎಸ್.ಎನ್.ಮೆಡಿಕಲ್ ಕಾಲೇಜಿನ ಎಲುಬು ಮತ್ತು ಕೀಲು ವಿಭಾಗ ಹಾಗೂ ಅಂಗರಚನಾಶಾಸ್ತ್ರ ವಿಭಾಗದ ವೈದ್ಯರು ಶಿಬಿರಾರ್ಥಿಗಳಿಗೆ ಕೈ ಮತ್ತು ಕಾಲು ಶಸ್ತ್ರಚಿಕಿತ್ಸೆ ಕುರಿತು ಪ್ರಾತ್ಯಕ್ಷಿಕ ತರಬೇತಿ ನೀಡಿದರು. ಆಧುನಿಕ ಪದ್ಧತಿಯಿಂದ ಸಂರಕ್ಷಿಸಲ್ಪಟ್ಟ ಮೃತಶರೀರವನ್ನು ಶಸ್ತ್ರಚಿಕಿತ್ಸೆಗೆ ಉಪಯೋಗಿಸಿಕೊಂಡು ಕಾರ್ಯಾಗಾರದಲ್ಲಿ ಶಿಬಿರಾರ್ಥಿಗಳಿಗೆ ತರಬೇತಿ ನೀಡಲಾಯಿತು.

# ಮುಳನಾಳ ಮಠದ ವಾಣಿ: ಈ ವರ್ಷ ಉತ್ತಮ ಮಳೆ

ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ




ಪ್ರಸಕ್ತ ವರ್ಷ ಮುಂಗಾರು ಮಳೆಗಳಾದ ರೋಹಿಣಿ. ಆರಿದ್ರಾ, ಪುನರ್ವಸು ಮತ್ತು ಹಿಂಗಾರು ಮಳೆಗಳಲ್ಲಿ ಮಗಿ, ಹುಬ್ಬಿ, ಉತ್ತರಿ ಮಳೆಗಳು ಸಂಪೂರ್ಣ ಸುರಿಯಲಿವೆ ಎಂಬುದು ಮುರನಾಳ ಮಳೆರಾಜೇಂದ್ರಸ್ವಾಮಿ ಮಠದ ವಾಣಿ. ಕೃಷಿಕರ ಮಠವೆಂದು ಖ್ಯಾತಿ ಪಡೆದಿರುವ ಮುರನಾಳ ಶ್ರೀ ಮಳೆರಾಜೇಂದ್ರಸ್ವಾಮಿ ಮಠದ ಜಾತ್ರಾ ಮಹೋತ್ಸವದ ಅಂಗವಾಗಿ ಗುರುವಾರ ರಾತ್ರಿ ನಡೆದ ಕಡುಬಿನ ಕಾಳಗ(ಮಳೆ ಬೆಳೆ ಸೂಚನೆ)ದಲ್ಲಿ ಈ ಸೂಚನೆ ದೊ–ರೆತಿದ್ದು, ಈ ವರ್ಷದ ಮುಂಗಾರಿನಲ್ಲಿ ರೋಹಿಣಿ ಉತ್ತಮ. ಆರಿದ್ರಾ ಸಂಪೂರ್ಣ, ಪುನರ್ವಷು, ಪುಷ್ಯ ಮಳೆಗಳು ಸಾಧಾರಣವಾಗಿ ಆಗಲಿವೆ. ಹಿಂಗಾರಿನಲ್ಲಿ ಮಗಿ ಉತ್ತಮ, ಉತ್ತರಿ ಸಂಪೂರ್ಣ, ಹುಬ್ಬಿ, ಚಿತ್ತಿ, ಸ್ವಾತಿ ಮಳೆಗಳು ಸಾಧಾರಣವಾಗಿ ಸುರಿಯಲಿವೆ ಎಂದು ಶ್ರೀಮಠದ ಸೂಚನೆ ದೊರೆತಿದೆ ಎಂದು ಶ್ರೀಮಠದ ಮಠಾಧೀಶರಾದ ಗುರುಲಿಂಗಸ್ವಾಮಿಗಳು ಮಹಾಪುರುಷ ನೆರೆದ ಭಕ್ತಾಧಿಗಳಿಗೆ ತಿಳಿಸಿದರು.

ಮಳೆ–ಬೆಳೆ ಕುರಿತಂತೆ ಮಠದ ಶುಭ ಸೂಚನೆ ಪಡೆದ ರೈತರು ಪ್ರಸಕ್ತ ವರ್ಷದ ಸಾಧಕ–ಬಾಧಕಗಳ ಬಗ್ಗೆ ವಿಚಾರ ವಿನಿಮಯ ಮಾಡಿಕೊಂಡರು. ಕಡುಬಿನ ಕಾಳಗದ ಮುಂಚೆ ನಡೆದ ಮಳೆರಾಜೇಂದ್ರಸ್ವಾಮಿಗಳ ಮೂರ್ತಿ ಹೊತ್ತ ಪಲ್ಲಕ್ಕಿ ಮೆರವಣಿಗೆಯಲ್ಲಿ ಗ್ರಾಮದ ಮಹಿಳೆಯರು ಆರತಿ ಹಾಗೂ ಪಂಚಬಿಂದಿಗೆಯೊಂದಿಗೆ ಪಾಲ್ಗೊಂಡಿದ್ದರು. ಗಂಗೆಯ ಪೂಜೆಗಾಗಿ ನಿರ್ಮಿಸಿದ ಹೊಂಡದವರೆಗೆ ಮೆರವಣಿಗೆಯಲ್ಲಿ ಸಾಗಿದ ಗ್ರಾಮಸ್ಥರು ಗಂಗೆಗೆ ಪೂಜೆ ಸಲ್ಲಿಸಿದ ಬಳಿಕ ಪಂಚ ಬಿಂದಿಗೆಗಳಲ್ಲಿ ಗಂಗೆಯನ್ನು ತುಂಬಿ, ಮಳೆಸ್ವಾಮಿಗೆ ಜಲಾಭಿಷೇಕ, ಪಂಚಾಮೃತ ಅಭಿಷೇಕ ನೆರವೇರಿಸಿ, ಮುತ್ತೈದೆಯರಿಗೆ ಊಡಿ ತುಂಬಿದರು. ಪಂಚ ಬಿಂದಿಗೆಗಳಿಗೆ ಪೂಜೆ ಸಲ್ಲಿಸಿ ಮಹಾಮಂಗಳಾರತಿ ನಡೆದು ನಂತರ ತುಂಬಲ್ಪಟ್ಟ ಪ್ರತಿ ಬಿಂದಿಗಿಯ ಮೇಲೆ ಎರಡೆರಡು ಮಳೆಗಳ ಹೆಸರನ್ನು ನಮೂದಿಸಲಾಗುತ್ತದೆ. ಪಂಚ ಬಿಂದಿಗೆ ಹೊತ್ತು ನಂತರ ಗಂಗಾ ಹೊಂಡದಿಂದ ಪುನ: ಮೆರವಣಿಗೆಯಲ್ಲಿ ರಥೋತ್ಸವ ಇರುವಸ್ಥಳಕ್ಕೆ ಬರುತ್ತಾರೆ. ರಥೋತ್ಸವ ಪ್ರದಕ್ಷಿಣೆಹಾಕಿ ಪಂಚಬಿಂದಿಗೆ ಪೂಜೆ ಸಲ್ಲಿಸಿ ತರುವಾಯ ಮಳೆ–ಬೆಳೆ ಸೂಚನೆ ನೀಡಲಾಗುತ್ತದೆ. ಮಳೆಗಳ ಹೆಸರನ್ನು ಹೊಂದಿರುವ ಬಿಂದಿಗೆಗಳ ಬಸಿಯುವಿಕೆ(ಸೋರಿಕೆ)ಆಧಾರದ ಮೇಲೆ ಮಳೆ, ಬೆಳೆ ಸೂಚನೆ ಹೊರಬೀಳುತ್ತದೆ. ಸೋರಿಕೆ ಪ್ರಮಾಣದ ಮೇಲೆಯೇ ಯಾವ ಮಳೆ ಹೆಚ್ಚು ಸುರಿಯುತ್ತದೆ ಹಾಗೂ ಯಾವುದು ಕಡಿಮೆಯಾಗುತ್ತದೆ ಎಂಬುದನ್ನು ಹೇಳಲಾಗುತ್ತದೆ. ವಿಶಿಷ್ಟ ಪರಂಪರೆ ಹೊಂದಿರುವುದರಿಂದ ಮಳೆರಾಜೇಂದ್ರ ಮಠದ ಕಡುಬಿನ ಕಾಳಗ ವೀಕ್ಷಣೆಗೆ ರೈತ ಸಮುದಾಯ ನೆರೆದು ಫಲಿತಾಂಶಕ್ಕೆ ಕಾತರದಿಂದ ಕಾಯುತ್ತಾರೆ. ಮಠಾಧೀಶರಾದ ಗುರಲಿಂಗಸ್ವಾಮಿಗಳು ಹಾಗೂ ನವೀನಸ್ವಾಮಿಗಳು ಮಹಾಪುರುಷ ಸಾನಿಧ್ಯವಹಿಸಿದ್ದರು. ಇದೇ ಸಂದರ್ಭದಲ್ಲಿ ಹರಕೆಯ ಈಡೇರಿಕಾಗಿ ಸಂಕಲ್ಪ ಮಾಡಿದ ಮಾತಾ ಭಗೀನಿಯರಿಗೆ ಊಡಿ ತುಂಬುವ ಕಾರ್ಯ ಜರುಗಿತು. ಜಾತ್ರೆಯ ಬಾಬುದಾರರನ್ನು ಶ್ರೀಗಳು ಸನ್ಮಾನಿಸಿದರು.

# ರಾಜ್ಯ ಮಟ್ಟದ ಗೌರವ ವೀರಣ್ಣ ಬೆಳ್ಳುಬ್ಬಿಗೆ ವಿದ್ಯಾರತ್ನ ಪ್ರಶಸ್ತಿ

• ಮಲ್ಲಮ್ಮನುಡಿ ಹುಣಸಗಿ



:ಕರ್ನಾಟಕ ರಾಜ್ಯ ಶಾಲಾ ಶಿಕ್ಷಣ ಇಲಾಖೆ ನೌಕರರ ಸಂಘದ ವತಿಯಿಂದ ರಾಜ್ಯ ಮಟ್ಟದ ಸಮಾವೇಶ, ಗಣ್ಯರಿಗೆ ಗೌರವ ಅರ್ಪಣೆ ಹಾಗೂ ಪ್ರಶಸ್ತಿ ಪ್ರಧಾನ ಸಮಾರಂಭವು ಮಾರ್ಚ್ 1, 2026ರಂದು ಶಿಕ್ಷಕರ ಸದನದಲ್ಲಿ ನಡೆಯಲಿದೆ.

ಈ ಸಮಾರಂಭದಲ್ಲಿ ಪ್ರಾಥಮಿಕ, ಪ್ರೌಢ, ಪಿಯು ಕಾಲೇಜು, ವಸತಿ ಶಾಲೆ ಹಾಗೂ ಅನುದಾನಿತ ಶಾಲೆಗಳಲ್ಲಿ ಕಾರ್ಯನಿರ್ವಹಿಸುವ ಶಿಕ್ಷಕರಿಗೆ "ವಿದ್ಯಾರತ್ನ ಪ್ರಶಸ್ತಿ", ಶಿಕ್ಷಣ ಇಲಾಖೆಯ ಬೋಧನೇತರ ಹುದ್ದೆಯ ನೌಕರರಿಗೆ "ಸೇವಾ ಭೂಷಣ ಪ್ರಶಸ್ತಿ" ಮತ್ತು ಸಂಘಟನೆಯಲ್ಲಿ ಉತ್ತಮ ಸೇವೆ ಸಲ್ಲಿಸಿದವರಿಗೆ *"ಸಂಘಟನಾ ಸ್ಫೂರ್ತಿ ಪ್ರಶಸ್ತಿ"*ಗಳನ್ನು ಪ್ರದಾನ ಮಾಡಲಾಗುತ್ತಿದೆ.


ಕಾರ್ಯಕ್ರಮದಲ್ಲಿ ಮಾನ್ಯ ಸಭಾಪತಿಗಳು, ಸಚಿವರು, ಶಾಸಕರು ಹಾಗೂ ಶಾಲಾ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಯಾದಗಿರಿ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಕರು ಮತ್ತು ನೌಕರರು ಭಾಗವಹಿಸಬೇಕು ಎಂದು ಜಿಲ್ಲಾ ಅಧ್ಯಕ್ಷರಾದ ಶ್ರೀ ಕಾಂತೇಶ ಹಲಗಿಮನಿ ಕರೆ ನೀಡಿದರು.

ಈ ಸಂದರ್ಭದಲ್ಲಿ ಯಾದಗಿರಿ ಜಿಲ್ಲೆಯಿಂದ ರಾಜ್ಯ ಮಟ್ಟದ ವಿದ್ಯಾರತ್ನ ಪ್ರಶಸ್ತಿಗೆ ಆಯ್ಕೆಯಾದ ಹುಣಸಗಿ ತಾಲೂಕಿನ ಸ.ಪ್ರೌಢ ಶಾಲೆ ಗೆದ್ದಲಮರಿ ಮುಖ್ಯೋಪಾಧ್ಯಾಯರಾದ ಶ್ರೀ ವೀರಣ್ಣ ಬೆಳ್ಳುಬ್ಬಿ ಅವರಿಗೆ ಜಿಲ್ಲೆಯ ಶಿಕ್ಷಕರ ಬಳಗದಿಂದ ಅಭಿನಂದನೆಗಳ ಸುರಿಮಳೆ ಹರಿದುಬಂದಿದೆ. ಹುಣಸಗಿ ತಾಲೂಕಿಗೆ ಇದೇ ಮೊದಲ ಬಾರಿಗೆ ಈ ಪ್ರತಿಷ್ಠಿತ ಪ್ರಶಸ್ತಿ ದೊರೆತಿರುವುದು ವಿಶೇಷವಾಗಿದೆ.

ತಾಲೂಕು ಅಧ್ಯಕ್ಷರಾದ ಷಣ್ಮುಖಪ್ಪ ನುಚ್ಚಿ, ರಾಜ್ಯ ಮಟ್ಟದ ನಾಯಕರು ಶ್ರೀ ಬಸವರಾಜ ತೆಗ್ಗಳ್ಳಿ (ಜಂಟಿ ಕಾರ್ಯದರ್ಶಿಗಳು) ಹಾಗೂ ಸಂಘಟನಾ ಕಾರ್ಯದರ್ಶಿ ಶ್ರೀ ರಮೇಶ ವಣಕಿಹಾಳ ಅವರು ಸಂತಸ ವ್ಯಕ್ತಪಡಿಸಿ ಪ್ರಶಸ್ತಿ ಪುರಸ್ಕೃತರನ್ನು ಅಭಿನಂದಿಸಿದ್ದಾರೆ.

## ಶಾಂತಿ ಕುಟೀರದ ಶ್ರೀಕೃಷ್ಣ ಸಂಪಗಾಂವಕರರಿಗೆ ಗೌರವ

**ವಿಜಯಪುರ:** ಜಿಲ್ಲೆಯ ಖ್ಯಾತ ರಂಗತಜ್ಞ, ಶಾಂತಿ ಕುಟೀರ ಸಂಸ್ಥೆಯ ಪ್ರಧಾನ ಕಾರ್ಯಕರ್ತ ಹಾಗೂ ರಾಮರಾಜ್ಯ ಕಲಾಮೇಳ ಅಧ್ಯಕ್ಷರಾದ ಶ್ರೀಕೃಷ್ಣ ಸಂಪಗವಂಕರ ಅವರಿಗೆ ರಾಷ್ಟ್ರಮಟ್ಟದ ಮಹತ್ವದ ಗೌರವ ಲಭಿಸಿದೆ. ನವದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯ (ಎನ್.ಎಸ್.ಡಿ.) ಅಕಾಡೆಮಿಕ್ ಕೌನ್ಸಿಲ್ ಸದಸ್ಯರಾಗಿ ಅವರನ್ನು ನಾಮನಿರ್ದೇಶನ ಮಾಡಲಾಗಿದೆ.


चितरंजन त्रिपाठी
निदेशक
राष्ट्रीय नाट्य विद्यालय

Chittaranjan Tripathy
Director
National School of Drama
An Autonomous Institution of Ministry of Culture, Govt. of India

Ref. No. NSD/DIR./2193/2025-2026 18 January 2026

Subject: Nomination as Member of the Academic Council, National School of Drama

Respected Shri C. Krishna Samgaonkar ji, Namaskar,

I am pleased to inform you that the National School of Drama Society, at its meeting held on 16 December 2025, has resolved to nominate you as a Member of the Academic Council of the National School of Drama, in accordance with Rule 35(ii) of the Memorandum of Association and Rules & Regulations of the NSD Society.

For your ready reference, the relevant rule is reproduced below:

"Rule 35(ii): Four active theatre experts to be nominated by the NSD Society."

Your nomination shall be valid for a tenure of four years with effect from 16 January 2026, the date of nomination, unless terminated earlier by the competent authority.

On behalf of the National School of Drama Society, I extend to you our warm congratulations on your nomination. We are confident that your experience, insight, and expertise in the field of theatre will greatly contribute to the academic growth and institutional development of the National School of Drama.

We look forward to your valuable support, advice, and suggestions during your tenure as a member of the Academic Council.

I would appreciate receiving a line from you conveying your acceptance of this nomination at your earliest convenience.

With best wishes,

Yours sincerely,

Chittaranjan Tripathy
Director &
Chairman Academic Council

Shri C. Krishna Samgaonkar

Bahawalpur House, Bhagwandas Road, New Delhi-110001
Ph.: 011-23387137 Fax.: 91-11-23384288
e-mail: nationalschoolofdrama@nsd.gov.in
nationalschoolofdrama@gmail.com
director@nsd.gov.in, Website: www.nsd.gov.in

ಎನ್ಎಸ್ಡಿ ಸೊಸೈಟಿಯು 16 ಡಿಸೆಂಬರ್ 2025 ರಂದು ನಡೆದ ಸಭೆಯಲ್ಲಿ ಈ ನಿರ್ಧಾರ ಕೈಗೊಂಡಿದ್ದು, ನಿಯಮ 35(ಬ) ಅನ್ವಯ ಸಕ್ರಿಯ ರಂಗತಜ್ಞರನ್ನು ಕೌನ್ಸಿಲ್‌ಗೆ ನಾಮನಿರ್ದೇಶನ ಮಾಡುವ ಪ್ರಕ್ರಿಯೆಯಡಿ ಇವರನ್ನು ಆಯ್ಕೆ ಮಾಡಲಾಗಿದೆ. ನೇಮಕಾತಿ 16 ಜನವರಿ 2026ರಿಂದ ಜಾರಿಗೆ ಬಂದು ನಾಲ್ಕು ವರ್ಷಗಳ ಕಾಲ ಮಾನ್ಯವಾಗಿರುತ್ತದೆ.

ಈ ಕುರಿತು ಎನ್ಎಸ್ಡಿ ನಿರ್ದೇಶಕರಾದ ಶ್ರೀ.ಚಿತ್ತರಂಜನ ತ್ರಿಪಾಠಿ ಅವರು ಅಭಿನಂದನಾ ಪತ್ರದ ಮೂಲಕ ಮಾಹಿತಿ ನೀಡಿದ್ದಾರೆ. ಸಂಪಗವಂಕರ ಅವರ ದೀರ್ಘ ಅನುಭವ, ಸಂಘಟನೆ ಸಾಮರ್ಥ್ಯ ಮತ್ತು ರಂಗಭೂಮಿ ಕ್ಷೇತ್ರದ ಸೇವೆ ಸಂಸ್ಥೆಯ ಶೈಕ್ಷಣಿಕ ಬೆಳವಣಿಗೆಗೆ ಮಹತ್ತರ ಕೊಡುಗೆ ನೀಡಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಲಾಗಿದೆ.

## ವಿದ್ಯಾರ್ಥಿಗಳಲ್ಲಿ ಗುರಿ, ಛಲ ಇರಲಿ




**ಭಾಲ್ಕಿ:** ಸ್ವಾಮಿ ವಿವೇಕಾನಂದರು ಸಾರಿದ ಗುರಿ ಮುಟ್ಟುವ ತನಕ ನಿಲ್ಲದಿರಿ ಎಂಬ ಸಂದೇಶ ವಿದ್ಯಾರ್ಥಿಗಳು ಜೀವನದಲ್ಲಿ ಅನುಸರಿಸಿದರೇ ಬದುಕು ಸುಂದರವಾಗಿ ರೂಪಗೊಳ್ಳಲಿದೆ ಎಂದು ಮಾಜಿ ಶಾಸಕರು, ಗುರುಪ್ರಸನ್ನ ಜನಸೇವಾ ಮಹಿಳಾ ಸಂಸ್ಥೆಯ ಸಂಸ್ಥಾಪಕರು ಆಗಿರುವ ಪ್ರಕಾಶ ಖಂಡ್ರೆ ಹೇಳಿದರು. ಪಟ್ಟಣದ ಗುರುಪ್ರಸನ್ನ ಪದವಿ ಮಹಾವಿದ್ಯಾಲಯದಲ್ಲಿ ಶುಕ್ರವಾರ ಆಯೋಜಿಸಿದ್ದ ಬಿಎಸ್ಸಿ ಪದವಿ ವಿಭಾಗದ ಚಿನ್ನದ ಸಾಧಕಿ ಮಹೇಶ್ವರಿ ಶೀಲವಂತ ಅಭಿನಂದನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ನಮ್ಮ ಸಂಸ್ಥೆಯ ಬಿಎಸ್ಸಿ ವಿಭಾಗದ ವಿದ್ಯಾರ್ಥಿನಿ ಮಹೇಶ್ವರಿ ಅವರು ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಟಾಪರ್ ಸ್ಥಾನ ಪಡೆಯುವುದರ ಜತೆಗೆ ಎರಡು ಚಿನ್ನದ ಪದಕ ಗಳಿಸಿ ಗಡಿ ಜಿಲ್ಲೆ ಬೀದರ್‌ನ ಕೀರ್ತಿ ರಾಜ್ಯ ಮಟ್ಟಕ್ಕೆ ಪಸರಿಸಿದ್ದಾರೆ ಎಂದು ಹೆಮ್ಮೆ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯಾಧ್ಯಕ್ಷ ಗುರುಪ್ರಸಾದ ಖಂಡ್ರೆ, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಜಯರಾಜ ದಾಬಶೆಟ್ಟೆ, ಹಿರಿಯ ಪತ್ರಕರ್ತ ಗಣಪತಿ ಬೋಚರೆ, ಪೋಷಕರಾದ ಮಂಗಲಾ ಶಿವಕುಮಾರ ಶೀಲವಂತ, ಮಹಾದೇವಿ ಶೀಲವಂತ, ಸಂಸ್ಥೆಯ ಆಡಳಿತಾಧಿಕಾರಿ ಬಾಲರಾಜ ಶಿವಣಗೆ, ರಾಜು ಮೇತ್ರೆ, ಸತೀಶ್ ಬಿರಾದಾರ್, ಜಶಿಕ ಜಾಯ್ ಸೇರಿದಂತೆ ಹಲವರು ಇದ್ದರು.

## ತೇಜಸ್ವಿಯ ಪ್ರಕೃತಿಯ ನೆಲೆಯೇ ವಿಸ್ಮಯ



**ಬೆಂಗಳೂರು:** ತೇಜಸ್ವಿ ಪ್ರಕೃತಿಯನ್ನು ನೋಡುವ ನೆಲೆ ವಿಸ್ಮಯ ಮತ್ತು ನಿಗೂಢವಾಗಿದೆ ಅವರ ಛಾಯಾಚಿತ್ರಗಳೆ ಸಾಕ್ಷಿ ಹಾಗೂ ಭಾರತೀಯ ಸಾಹಿತ್ಯದಲ್ಲಿ ತೇಜಸ್ವಿ ಸಾಹಿತ್ಯದಷ್ಟು ಓದುಗರು ಯಾರಿಗೂ ಇಲ್ಲ ಎಂದು ಡಾ.ಟಿ.ಯಲ್ಲಪ್ಪಅವರು ವ್ಯಾಖ್ಯಾನಿಸಿದ್ದಾರೆ. ವಿವೇಕಾನಂದ ಪದವಿ ಕಾಲೇಜಿನ ಕನ್ನಡ ವಿಭಾಗವು ಏರ್ಪಡಿಸಿದ್ದ ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ ಬದುಕು ಬರಹ ಎಂಬ ವಿಷಯವನ್ನು ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ವಿಷಯವನ್ನು ಕುರಿತು ಮಾತನಾಡಿದ ಅವರು, ಇಂದಿನ ಐಟಿ ಬಿಟಿ ಯುವಕರು ತೇಜಸ್ವಿ ಸಾಹಿತ್ಯದಿಂದ ಒತ್ತಡ ನಿವಾರಣೆ ಮಾಡಿಕೊಳ್ಳುತ್ತೀದ್ದಾರೆ ಎಂದು ಅಭಿಪ್ರಾಯ ಪಟ್ಟರು. ಜನತ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಅಪ್ಪಾರೆಡ್ಡಿ ಹರೀಶ್, ಅಧ್ಯಕ್ಷ ಲಕ್ಷ್ಮೀ ಮನೋಹರ್, ಮಾರ್ಗದರ್ಶಕ ಎಚ್.ಜಿ.ಬಾಲಗೋಪಾಲ್, ಪ್ರಾಂಶುಪಾಲ ಡಾ.ಕೆ.ಶಶಿಕಲಾ, ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಸುರೇಶ್ ನಾಗಲಮಡಿಕೆ ಮತ್ತು ಮಧುಸೂಧನ್ ಜಿ.ಎಚ್.ಉಪಸ್ಥಿತರಿದ್ದರು.

# ಗುಮ್ಮಟ ನಗರಿಯಲ್ಲಿ ಜೆಡಿಎಸ್ ಶಕ್ತಿ ಪ್ರದರ್ಶನ

• **ಮಲ್ಲಮ್ಮ ನುಡಿ ವಾರ್ತೆ ವಿಜಯಪುರ**

ಗುಮ್ಮಟನಗರಿ ವಿಜಯಪುರದಲ್ಲಿ ಜೆಡಿಎಸ್ ಪಕ್ಷದ ಶಕ್ತಿ ಪ್ರದರ್ಶನ ನಡೆಯಿತು. ಪಕ್ಷಕ್ಕೆ 25 ವರ್ಷ ತುಂಬಿದ ಅಂಗವಾಗಿ ನಡೆದ ಬೆಳಿಹಬ್ಬ ಕಾರ್ಯಕ್ರಮ ಆಯೋಜನೆ ಮಾಡಲಾಗಿತ್ತು. 9 ಜಿಲ್ಲೆ ಸಾವಿರಾರು ಸಂಖ್ಯೆಯ ಕಾರ್ಯಕರ್ತರು ಕಾರ್ಯಕ್ರಮಲ್ಲಿ ಭಾಗಿಯಾಗಿದ್ದರು. ಈ ಕುರಿತಾದ ಒಂದು ವರದಿ ಇಲ್ಲಿದೆ ನೋಡಿ.

ಹೌದು ವಿಜಯಪುರ ಜಿಲ್ಲೆಯಲ್ಲಿ ಜೆಡಿಎಸ್ ಪಕ್ಷಕ್ಕೆ 25 ವರ್ಷ ತುಂಬಿದ ಹಿನ್ನೆಲೆಯಲ್ಲಿ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿತ್ತು. ವಿಜಯಪುರ ನಗರ ಹೊರ ಭಾಗದ ಸಿಂದಗಿ ರಸ್ತೆಯ ಸೇವಾಲಾಲ ವೃತ್ತದ ಬಳಿ ಸಮಾವೇಶ ನಡೆಯಿತು. ಜೆಡಿಎಸ್ ಬೆಳ್ಳಿಹಬ್ಬ ಅನ್ನೋ ಹೆಸರಿನಲ್ಲಿ ಕಾರ್ಯಕ್ರಮ ಆಯೋಜನೆ ಮಾಡಲಾಗಿತ್ತು. ಮಾಜಿ ಪ್ರಧಾನಿ ಎಚ್ ಡಿ ದೇವೇಗೌಡ, ಕೇಂದ್ರ ಸಚಿವ ಕುಮಾರಸ್ವಾಮಿ ಸೇರಿದಂತೆ ರಾಜ್ಯದ ನಾಯಕರು ಹಾಗೂ ಮುಖಂಡರು ಭಾಗಿಯಾಗಿದ್ದರು. ವಿಜಯಪುರ, ಭಾಗಲಕೋಟೆ, ಬೆಳಗಾವಿ, ಗದಗ ಸೇರಿದಂತೆ ಕಿತ್ತೂರು ಕರ್ನಾಟಕದ ಜಿಲ್ಲೆಗಳ ಕಾರ್ಯಕರ್ತರ ಸಮಾವೇಶ ನಡೆಯಿತು. ಲಂಬಾಣಿ ನೃತ್ಯ, ಹಲಗೆ ಮೇಳ ಸೇರಿದಂತೆ ವಿವಿಧ ಕಲಾತಂಡಗಳಲ್ಲಿ ಕಾರ್ಯಕರ್ತರು ಸಂಭ್ರಮದಿಂದ ಆಗಮಿಸಿದರು. ವೇದಿಕೆಗೆ ಆಗಮಿಸಿದ ಮಾಜಿ ಪ್ರಧಾನಿ ದೇವೇಗೌಡ



ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ಗ್ಯಾರಂಟಿ ಗ್ಯಾರಂಟಿ ಗ್ಯಾರಂಟಿ ಅಂದ್ರೇನು ಎಂದು ರಾಜ್ಯ ಸರ್ಕಾರವನ್ನು ಪ್ರಶ್ನಿಸಿದರು. ಉತ್ತರ ಕರ್ನಾಟಕದ ಅಭಿವೃದ್ಧಿಗೆ ದೇವೇಗೌಡರು ಮಾಡಿರುವ ಕೆಲಸಗಳನ್ನ ಮನವರಿಕೆ ಮಾಡಿಕೊಟ್ಟರು. ಮುಂದಿನ ದಿನಗಳಲ್ಲಿ ಕುಮಾರಸ್ವಾಮಿ ರಾಜ್ಯದಲ್ಲಿ ಬಿಜೆಪಿ ಜೆಡಿಎಸ್ ಸರ್ಕಾರ ಬರಬೇಕು. ಕುಮಾರಸ್ವಾಮಿ ಅವರನ್ನ ಮುಖ್ಯಮಂತ್ರಿ ಮಾಡುವುದು ಮೋದಿ, ಅಮೀತ್ ಶಾ ಅವರಿಗೆ ಬಿಟ್ಟ ವಿಚಾರ. ಅವರೇ ನಿರ್ಧಾರ ಮಾಡುತ್ತಾರೆ. ಜನ ನಮಗೆ ಆರ್ಶಿವಾದ ಮಾಡಬೇಕೆಂದು ಮನವಿ ಮಾಡಿದರು.

ವೇದಿಕೆಯಲ್ಲಿ ಮಾತನಾಡಿದ ಕೇಂದ್ರ ಸಚಿವ ಕುಮಾರಸ್ವಾಮಿ ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ಉತ್ತರ ಕರ್ನಾಟಕದಲ್ಲಿ ಸಕ್ಕರೆ ಕಾರ್ಖಾನೆಗಳು ನಡೆಯಲು ದೇವೇಗೌಡರು ಕಾರಣ. ನೀವು ಲೋಕಸಭಾ ಸ್ಥಾನಗಳಲ್ಲಿ ಗೆಲ್ಲಿಸಿದ ಕಾರಣ ಸಕ್ಕರೆ ಕಾರ್ಖಾನೆ ಶುರುವಾದವು. ನೀವು ಕೊಟ್ಟ ಅಧಿಕಾರದಿಂದ ದೇವೇಗೌಡರು ಕೆಲಸ ಮಾಡಿದ್ದಾರೆ ಎಂದು ಕುಮಾರಸ್ವಾಮಿ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ವಾಗ್ದಾಳಿ ನಡೆಸಿದರು. ನಿಮ್ಮ ಕಲಬುರ್ಗಿ ಭಾಗ ಯಾ- ಕೆ ಅಭಿವೃದ್ಧಿಯಾಗಿಲ್ಲ. ನೀವು ಎಷ್ಟು ವರ್ಷ ಅಧಿಕಾರಲ್ಲಿದ್ದಿರಿ.? ನಿಮ್ಮ ಮಗ ಅಧಿಕಾರದಲ್ಲಿ ಇದ್ದಾರೆ. ಆದರೂ ಯಾಕೆ ಅಭಿವೃದ್ಧಿ ಮಾಡಿಲ್ಲ. ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ ಎಂದು ನಾಮಕರಣ ಮಾಡಿದರೆ ಮುಗಿತಾ? ಅಭಿವೃದ್ಧಿ ಏನು ಮಾಡಿದ್ದಿರಿ ಎಂದು ಪ್ರಶ್ನಿಸಿದರು. ಮುಂದಿನ ದಿನಗಳಲ್ಲಿ ಉತ್ತಮ ಸರ್ಕಾರಕ್ಕಾಗಿ ನಮಗೆ ಬೆಂಬಲ ನೀಡುವಂತೆ ಮನವಿ ಮಾಡಿದರು.

ಇನ್ನೂ ಕಾರ್ಯಕ್ರಮಕ್ಕೂ ಮುನ್ನ ಧ್ವಜಾರೋಹಣ ಮಾಡಲಾಯಿತು. ವಿಲ್‌ಚೆರ್ ನಲ್ಲೇ ಬಂದು ದೇವೇಗೌಡರು ಧ್ವಜಾರೋಹಣ ಮಾಡಿದರು. ಸಮಾವೇಶಕ್ಕೆ ಬಂದಿದ್ದ ಕಾರ್ಯಕರ್ತರಿಗೆ ಕೇಸರಿ ಭಾತ್ ಹಾಗೂ ಊಟದ ವ್ಯವಸ್ಥೆ ಮಾಡಲಾಗಿತ್ತು. ಬೆಳ್ಳಿಹಬ್ಬದ ನೆಪದಲ್ಲಿ ನಡೆದ ಕಾರ್ಯಕ್ರಮ ಶಕ್ತಿ ಪ್ರದೇಶಕ್ಕೆ ವೇದಿಕೆ ಯಾಯಿತು.

## ಸಾಂಸ್ಕೃತಿಕ ಸಮ್ಮೇಳನಾಧ್ಯಕ್ಷಗೆ ಅಧಿಕೃತವಾಗಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು**

ಗೋವಾದ ಬಿಚೋಲಿಯಂನ ಕರ್ಮ ಭೂಮಿ ಕನ್ನಡ ಸಂಘ,ಕರ್ನಾಟಕ ಜಾಗೃತಿ ವೇದಿಕೆ ಬೆಂಗಳೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ ಸಹಭಾಗಿತ್ವದಲ್ಲಿ ನಡೆಯುವ ಕನ್ನಡಿಗರ16 ನೇ ಸಾಂಸ್ಕೃತಿಕ ಸಮ್ಮೇಳನ ಸಮ್ಮೇಳನಾಧ್ಯಕ್ಷರಾಗಿ ಕನ್ನಡ ಪರ ಚಿಂತಕ. ಸಮಾಜ ಸೇವೆಗಾಗಿ ರಾಷ್ಟ್ರೀಯ ಅಂತರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದಿರುವ ಬಿಜಾಪುರ ಮೂಲದ ಬೆಂಗಳೂರಿನ ಡಾ.ಸಂಗನ ಬಸವ ಬಿರಾದಾರ್ ರವರಿಗೆ ಸಂಘಟಕರು ಆಹ್ವಾನ ಪತ್ರಿಕೆ ನೀಡಿ ಸಾಂಸ್ಕೃತಿಕ ಸಮ್ಮೇಳನಕ್ಕೆ ಆಹ್ವಾನ ನೀಡಿದರು.

ಈ ಸಂದರ್ಭದಲ್ಲಿ ಕಾರ್ಯನಿರತ ಪತ್ರಕರ್ತರ ಚುನಾವಣೆಯಲ್ಲಿ ಆಯ್ಕೆಯಾಗಿರುವ ಈ ಸಂಜೆವಾಣಿ ವರದಿಗಾರ ರವೀಶ್ ಹಾಗೂ ವಿಜಯ ಕರ್ನಾಟಕ ಪತ್ರಿಕೆಯ ವರದಿಗಾರ ಹನುಮಂತ್ರಜುರವರನ್ನು



ಸನ್ಮಾನಿಸಲಾಯಿತು ಈ ಸಂದರ್ಭದಲ್ಲಿ ಅಹಿಂದ ಹಕ್ಕುಗಳ ಹೋರಾಟ ವೇದಿಕೆಯ ರಾಜ್ಯ ಅಧ್ಯಕ್ಷ ಜಿ ಅಂಜನಪ್ಪ ಕೆಪಿಸಿಸಿ ಸಂಯೋಜಕರಾದ ರಮೇಶ್ ಕೆಪಿಸಿಸಿ ಕಾರ್ಮಿಕ ಘಟಕದ ರಾಜ್ಯ ಜಂಟಿ ಕಾರ್ಯದರ್ಶಿ ನಿಸಾರ್ ಖಾನ್ ಸಾಂಸ್ಕೃತಿಕ ಸಮ್ಮೇಳನದ ಸಂಘಟಕರಾದ ಮಹೇಶ್ ಬಾಬು ಸರ್ವೆ ಜಿ ನಂದೀಶ್ ಇನ್ನು ಹಲವಾರು ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

## ರಸ್ತೆ ಅಭಿವೃದ್ಧಿ ನೆಪದಲ್ಲಿ ಶಾಲೆ ಕಟ್ಟಡ ನೆಲಸಮ

• **ಮಲ್ಲಮ್ಮ ನುಡಿ ವಾರ್ತೆ ಹುಣಸೂರು**

ನಗರದ ಕಲ್ಕುಣಿಕೆ ಸರ್ಕಲ್ ನಲ್ಲಿರುವ ಐತಿಹಾಸಿಕ ಸರ್ಕಾರಿ ಶಾಲೆಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಅವೈಜ್ಞಾನಿಕವಾದ ರಸ್ತೆ ಅಭಿವೃದ್ಧಿ ನೆಪದಲ್ಲಿ ಶಾಲೆ ಕಟ್ಟಡವನ್ನು ನೆಲಸಮ ಮಾಡಿ ರಸ್ತೆ ಅಗಲಿಕರಣಕ್ಕೆ ಮುಂದಾಗಿರುವುದನ್ನು ಖಂಡಿಸಿ ಮಾಜಿ ಶಾಸಕ ಸ್ನೇಹಜೀವಿ ಎಚ್ ಪಿ ಮಂಜುನಾಥ್ ರವರು ಕಲ್ಕುಣಿಕೆ ಶಾಲಾಭಿವೃದ್ಧಿ ಸಮಿತಿ, ಪೋಷಕರ ಸಮಿತಿ, ಹಿರಿಯ ವಿದ್ಯಾರ್ಥಿಗಳ ಸಮಿತಿ ಹಾಗೂ ಗ್ರಾಮಸ್ಥರುಗಳೊಂದಿಗೆ ಪ್ರತಿಭಟನೆ ನಡೆಸಿ ಸ್ಥಳಕ್ಕೆ ಮಾಜಿ ಶಾಸಕ ಎಚ್‌ಪಿ ಮಂಜುನಾಥ್ ಬೇಟಿ ನೀಡಿ ಪ್ರತಿಭಟನಾಕಾರರ ಸಮಸ್ಯೆಯನ್ನು ಆಲಿಸಿ ಶಾಲಾ ಸಮಿತಿ ವತಿಯಿಂದ ಹಾಗೂ ಸ್ಥಳೀಯರ ಮನವಿ ಪತ್ರವನ್ನು ಸ್ವೀಕರಿಸಿ

ನಂತರ ಮಾತನಾಡಿ ಮಾಜಿ ಶಾಸಕ ಸ್ನೇಹಜೀವಿ ಎಚ್ ಪಿ ಮಂಜುನಾಥ್ ರವರು ಮಾತನಾಡಿ 1937 ರ ಸ್ವಾತಂತ್ರ್ಯ ಪೂರ್ವದಲ್ಲಿ ಆರಂಭಗೊಂಡ ಕಲ್ಕುಣಿಕೆ




ಸರ್ಕಲ್ ಸರ್ಕಾರಿ ಶಾಲೆಯು ಶತಮಾನೋತ್ಸವದ ಅಂಚಿನಲ್ಲಿದೆ. ಈ ಶಾಲೆಯಲ್ಲಿ ಕಲಿತ ಸಾವಿರಾರು ಮಂದಿ ವಿದ್ಯಾರ್ಥಿಗಳು ಉನ್ನತ ಮಟ್ಟಕ್ಕೇರಿದ್ದಾರೆ. ಹಾಗೂ*ಈ ಶಾಲೆಯು ಭಾಗದ ಜನರ ಅಸ್ಮಿತೆಯಾಗಿದ್ದು ಇದನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು, ಅವೈಜ್ಞಾನಿಕವಾಗಿ ರಸ್ತೆ ಅಭಿವೃದ್ಧಿ ನೆಪದಲ್ಲಿ ಶಾಲೆ ತೆರವು ಮಾಡಲು ಹೊರಟಿರುವುದು ಖಂಡನೀಯ ಎಂದರು. ಈ ಕೂಡಲೆ ಅವೈಜ್ಞಾನಿಕ ವಾಗಿ ಕೂಡಿರುವ ರಸ್ತೆ ಅಗಲಿಕರಣ ಕಾಮಗಾರಿಯನ್ನು ನಿಲ್ಲಿಸಬೇಕು ಎಂದರು.

## ಒಳಮೀಸಲಾತಿ: ರೋಸ್ಟರ್ ಬಿಂದುಗಳ ಮುಂದೂಡಿಕೆ ಕಾನೂನುಬಾಹಿರ

• **ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು**

ದಿ.03-09-2025ರ ಮೀಸಲಾತಿ ಆದೇಶ ಪರಿಷ್ಕರಣೆ ಯಾವುದೇ ವೈಜ್ಞಾನಿಕ ಮಾನದಂಡವನ್ನು ಅನುಸರಿಸಿದೇ ರೋಸ್ಟರ್ ಬಿಂದುಗಳನ್ನು ಮುಂದೂಡಿರುವುದು ಅಕ್ರಮ ಕಾನೂನು ಬಾಹಿರವಾಗಿದೆ.

ಶೇ. 17% ಮೀಸಲಾತಿಗೆ ಅನುಗುಣವಾಗಿ 6ನೇ ಬಿಂದುವಿನಲ್ಲಿ ಅವಕಾಶ ನಿಗದಿಮಾಡಬೇಕಾದರೆ 9.15.23ನೇ ಬಿಂದುಗಳಿಗೆ ಮುಂದೂಡಿಕೆಯಾಗಿದ್ದು ಅನ್ಯಾಯಕರವಾಗಿದೆ. ಹಾಗಾಗಿ ರೋಸ್ಟರ್ ಬಿಂದುಗಳನ್ನು ವೈಜ್ಞಾನಿಕವಾಗಿ ಮೂರು ನಿಗದಿಪಡಿಸಬೇಕು ಎಂದು ಛಲವಾದಿ ಮಹಾಸಭಾದ ತಾಲೂಕು ಅಧ್ಯಕ್ಷ ಡಾ. ರಾಮಣ್ಣ ಹೇಳಿದರು.

ತಾಲೂಕು ತಹಶೀಲ್ದಾರ್ ಕಛೇರಿ ಮುಂಭಾಗದಿಂದ ಘೋಷಣೆ ಕೂಗುತ್ತ ತಹಸೀಲ್ದಾರರ ಕಛೇರಿ ಮುಂದೆ ಪ್ರತಿಭಟನೆ ನಡೆಸಿದರು. ನಂತರ ತಾಲೂಕು ತಹಶೀಲ್ದಾರ್ ಅರುಣ್ ಕುಮಾರ್ ಎಚ ದೇಸಾಯಿ ಅವರ



ಮೂಲಕ ಗೌರವಾನ್ವಿತ ರಾಜ್ಯಪಾಲರ ಹಾಗೂ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಛಲವಾದಿ ಮಹಾಸಭಾ (ರಿ) ತಾಲ್ಲೂಕು ಸಮಿತಿ ವತಿಯಿಂದ ಮನವಿ ಪತ್ರ ಸಲ್ಲಿಸಿ ಆಗ್ರಹಿಸಿದರು. ನಂತರ ಪ್ರತಿಭಟನೆ ಉದ್ದೇಶಿಸಿ ಮಾತನಾಡಿದರು.

ರಾಜ್ಯದಲ್ಲಿ ಒಳಮೀಸಲಾತಿ ಜಾರಿಗೆ ತಂದ ನಂತರ ಅನೇಕ ಆಡಳಿತಾತ್ಮಕ, ಕಾನೂನು ಮತ್ತು ಸಾಮಾಜಿಕ ಗೊಂದಲಗಳು ಉಂಟಾಗಿವೆ. ಕೆ.ಪಿ.ಎಸ್.ಸಿ ಮೂಲಕ ನಡೆಯುವ ಗೆಜೆಟೆಡ್ ಪ್ರೋಬೇಷನರಿ ನೇಮಕಾತಿಗೆ ಸಂಬಂಧಿಸಿದಂತೆ ಶೇ.17% ಮೀಸಲಾತಿ ಕುರಿತು ತೀರ್ಪು ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ತಡೆಯಾಜ್ಞೆಗಳ ಹಿನ್ನೆಲೆ ನೇಮಕಾತಿ ಪ್ರಕ್ರಿಯೆಗಳು ವಿಳಂಬವಾಗಿದ್ದು. ಸಾವಿರಾರು ವಿದ್ಯಾರ್ಥಿಗಳು ಹಾಗೂ ಉದ್ಯೋಗಾಕಾಂಕ್ಷಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಹೇಳಿದರು. ಅಲೆಮಾರಿ ಸಮುದಾಯ ಸೇರಿದಂತೆ ಹಲವಾರು ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುವುದರಿಂದ ಅಂತಿಮ ತೀರ್ಪಿಗೆ ಒಳಪಟ್ಟು ನೇಮಕಾತಿ ಮಾಡುವಂತೆ ಸೂಚನೆ ನೀಡಿರುವುದು ಆಡಳಿತಾತ್ಮಕ ಗೊಂದಲವನ್ನು ಮತ್ತಷ್ಟು ಹೆಚ್ಚಿಸಿದೆ ಎಂದು ಹೇಳಿದರು.

ಇದಲ್ಲದೆ, ಪರಿಶಿಷ್ಟ ಜಾತಿಯನ್ನು ಪ್ರವರ್ಗ A, B, C ಎಂದು ವರ್ಗೀಕರಿಸಿ ಜಾತಿ ಪ್ರಮಾಣ ಪತ್ರ ವಿತರಿಸುವ ಕ್ರಮದಿಂದ ವಿದ್ಯಾರ್ಥಿಗಳು ಹಾಗೂ ಉದ್ಯೋಗಾರ್ಥಿಗಳು ಅನಗತ್ಯ ತೊಂದರೆ ಅನುಭವಿಸುತ್ತಿದ್ದಾರೆ. ಕಳೆದ ಎರಡು ವರ್ಷಗಳಿಂದ ನೇಮಕಾತಿಗಳು ಸ್ಥಗಿತಗೊಂಡಿರುವ ಪರಿಣಾಮ ಅನೇಕ ಅಭ್ಯರ್ಥಿಗಳು ವಯೋಮಿತಿ ಮೀರಿರುವ ದುಸ್ಥಿತಿಯನ್ನು ಎದುರಿಸುತ್ತಿದ್ದಾರೆ ಎಂದು ಹೇಳಿದರು.

# ದಿಲ್ಲಿಯ ಹೈ ಮೌನದೂಟ, ರಾಜ್ಯದಲ್ಲಿ ದಿನಕ್ಕೊಂದು ಆಟ..!



**ವರ್ತಮಾನ-ಅವಲೋಕನ**

● ಡಾ.ಎಂ.ಮಹ್ಮದ್ ಬಾಷ ಗೂಳ್ಯಂ
ಪ್ರಧಾನ ಸಂಪಾದಕ, ಬೆಂಗಳೂರು

ಕರ್ನಾಟಕ ಕಾಂಗ್ರೆಸ್‌ಗೆ ಏನಾಗಿದೆ..? ಉತ್ತರ ಅಸ್ಪಷ್ಟ. ಯಾರಿಗೆ ಯಾರು ಸಮಾಧಾನ ಪಡಿಸಬೇಕೊ, ಯಾರು ಹಿರಿಯರೋ, ಯಾರು ಎಲ್ಲಿ ಹೇಳಿಕೆ ಕೊಡ್ತಾರೊ..! ನಿಜಕ್ಕೂ ರಾಜಕೀಯವೆಂಬುದು ಈ ಸ್ಥಿತಿ ತಲುಪಿರೋದೆ ಬೇಸರ. ಬೆಳಗಾದರೆ ಪಾರ್ಟಿ, ರಾತ್ರಿಯಾದರೆ ಒಂದು ಬಣ, ಮಧ್ಯರಾತ್ರಿಗೆ ಮತ್ತೊಂದು ಬಣ..ಹುಟ್ಟಿಕೊಳ್ಳತೊಡಗಿದೆ. ಇಡೀ ರಾಜ್ಯವೇ ಪಟ್ಟದ ಕಡೆ ಅಟ್ಟಹಾಸ ಬೀರಿ ನಗುತ್ತಿದೆ..! ಇದನ್ನೆಲ್ಲಾ ತಿದ್ದಿ ತೀಡಬೇಕಾದ ದಿಲ್ಲಿಯಜಮಾನತನ್ನದನೇ ಖಯಾಲಿಯಲ್ಲಿ ಮುಳುಗಿದ್ದಾನೆ. ಸಕಾಲಕ್ಕೆ ಮಧ್ಯೆ ಪ್ರವೇಶಿಸದಿದ್ದರೆ ರಾಜಸ್ತಾನ, ಅಸ್ಸಾಂ, ಮಧ್ಯಪ್ರದೇಶದಲ್ಲಿ ಏನಾಯಿತು ಎನ್ನುವ ಪಾಠ ಕಣ್ಣ ಮುಂದೆ ಇದೆ. ಅಲ್ಲಿ ನಡೆದ ವಿಧಾನಸಭಾ ಚುನಾವಣೆಗಳಲ್ಲೂ ಕೈಗೆ ಸೋಲಾಗಿದ್ದು ಇನ್ನೂ ಮಾಸಿಲ್ಲ. ಕರ್ನಾಟಕದ ಕಾಂಗ್ರೆಸ್ ಶಾಸಕಾಂಗ ಪಕ್ಷದಲ್ಲೂ ಈಗ ಅದೇ ಸ್ಥಿತಿ..! ಅಧಿಕಾರ ಹಸ್ತಾಂತರದ ಗೊಂದಲ. ಆಡಳಿತಾರೂಢ ಶಾಸಕರು, ಸಚಿವರ ನಡುವೆ ಚಕಮಕಿ. ಸೂಕ್ತ ನಿರ್ಧಾರ ಕೈಗೊಳ್ಳಬೇಕಾದ ಹೈಕಮಾಂಡ್ ಬೇರೇನೋ ಲೆಕ್ಕಾಚಾರ ಹಾಕುತ್ತಿದೆ. ಅಸ್ಸಾಂನಲ್ಲಿ ಆಗ ಕಾಂಗ್ರೆಸ್ನಲ್ಲಿ ಸಚಿವರಾಗಿದ್ದ ಹಿಮಂತ್‌ಬಿಸ್ವಾಶರ್ಮಾ, ಅಂದಿನ ಸಿಎಂ ಗೊಗಯ್, ರಾಜಸ್ತಾನದಲ್ಲಿ ಅಶೋಕ್ ಗೆಹಲೋತ್, ಸಚಿನ್ ಪೈಲಟ್, ಮಧ್ಯಪ್ರದೇಶದಲ್ಲಿ ಕಮಲ್ ಪಂತ್ ಹಾಗೂ ಜ್ಯೋತಿರಾಧಿತ್ಯ ಸಿಂಧಿಯಾ ಮಧ್ಯೆ ಮುಖ್ಯಮಂತ್ರಿ ಗಾದಿಗಾಗಿ ಕಲಹ ನಡೆದದ್ದೂ ಗೊತ್ತೇ ಇದೆ. ಅಂದರೆ; ಈ ಮೂರು ರಾಜ್ಯಗಳಲ್ಲಿ ಮುಖ್ಯಮಂತ್ರಿಗಳನ್ನು ಕಾಂಗ್ರೆಸ್ ಬದಲಿಸಲಿಲ್ಲ. ಬಂಡಾಯಗಾರರನ್ನು ಸಮಾಧಾನಪಡಿಸಲಿಲ್ಲ. ಸಕಾಲದಲ್ಲಿ ಆದ ಗಾಯಕ್ಕೆ ಮದ್ದು ಅರೆಯಲಿಲ್ಲ. ಪರಿಸ್ಥಿತಿ ಕೈಮೀರಿತು. ಹಿಮಂತ ಬಿಸ್ವಾ ಶರ್ಮಾ ಕಾಂಗ್ರೆಸ್ಸಿಗೆ ಗುಡ್ ಬೈ ಹೇಳಿ ಬಿಜೆಪಿ ಸೇರಿ ಈಗ ಅಲ್ಲಿ ಮುಖ್ಯಮಂತ್ರಿ..! ಜ್ಯೋತಿರಾಧಿತ್ಯ ಸಿಂಧಿಯಾ ಕೇಸರಿ ಪಕ್ಷ ಸೇರಿ ಕೇಂದ್ರದಲ್ಲಿ ಈಗ ಸಚಿವ. ಸಚಿನ್ ಪೈಲಟ್ ಕಾಂಗ್ರೆಸ್ ತ್ಯಜಿಸಲು ಮುಂದಾಗಿ ಕೊನೆ ಘಳಿಗೆಯಲ್ಲಿ ಕ್ಲೈಮಾಕ್ಸ್ ಚೇಂಜ್ ಮಾಡಿಕೊಂಡರು.

ಇದೀಗ ಕರ್ನಾಟಕದಲ್ಲಿ ಸಿಎಂ ಸಿದ್ದರಾಮಯ್ಯ-ಡಿಸಿಎಂ ಡಿ.ಕೆ.ಶಿವಕುಮಾರ್ ನಡುವಿನ ಅಧಿಕಾರ ಹಸ್ತಾಂತರದ ಬಿಕ್ಕಟ್ಟಿಗೆ ಕಾಂಗ್ರೆಸ್ ಹೈಕಮಾಂಡ್ ಇನ್ನೂ ಬ್ರೇಕ್ ಹಾಕಿಲ್ಲ. ಹಾದಿಬೀದಿಗಳಲ್ಲಿ ಶಾಸಕರ ಮಧ್ಯೆ ವಾಗ್ವಾದ ಶುರುವಾಗಿದ್ದರೂ ಹೈ ಮಾತ್ರ ದಿವ್ಯಮೌನ. ಈ ಪಲಾಯನವಾದವೇಕೆ..? ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿರುವ ಮಲ್ಲಿಕಾರ್ಜುನ ಖರ್ಗೆ ಇದ್ದರೂ ಬಿಕ್ಕಟ್ಟಿಗೆ ಉತ್ತರ ಸಿಕ್ಕಿಲ್ಲ. ಎಐಸಿಸಿ ಅಧ್ಯಕ್ಷರ ತವರು ರಾಜ್ಯದಲ್ಲೇ ಕಾಂಗ್ರೆಸ್ ಈ ದುರ್ಗತಿ. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಇವತ್ತು ನಾಯಕತ್ವ ಬದಲಾವಣೆ, ದಲಿತ ಸಿಎಂ, ಮೊದಲ ಬಾರಿಗೆ ಗೆದ್ದಿರುವ ಶಾಸಕರಿಗೆ ಸಚಿವ ಸಂಪುಟದಲ್ಲಿ ಪ್ರಾತಿನಿಧ್ಯ ಈ ಮೂರು ವಿಷಯಗಳು ಕಾಡಿವೆ. ನಾಯಕತ್ವ ಬಿಕ್ಕಟ್ಟು ಇತ್ಯರ್ಥವಾಗುವವರೆಗೂ ಸಚಿವ ಸಂಪುಟ ಪುನಾರಚನೆ ಕಷ್ಟ. ಸಿದ್ದರಾಮಯ್ಯ ಅವರಿಗೆ ಸಚಿವ ಸಂಪುಟ ಪುನಾರಚನೆಗೆ ಹೈಕಮಾಂಡ್ ಗ್ರೀನ್ ಸಿಗ್ನಲ್ ಕೊಟ್ಟರೆ ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಗಾದಿ ಬಹಳ ದೂರ.

ಸಿದ್ದರಾಮಯ್ಯ ಅವರಿಗೆ ಸಚಿವ ಸಂಪುಟ ಪುನಾರಚನೆ ಆಗಬೇಕು. ಶಿವಕುಮಾರ ಅವರಿಗೆ ಇದು ಬೇಕಿಲ್ಲ. ಸಚಿವ ಸಂಪುಟ ಪುನಾರಚನೆಯಾದರೆ ಸಿಎಂ ಗಾದಿಯಿಂದ ಸಿದ್ದರಾಮಯ್ಯ ಕೆಳಗಿಳಿಯುವುದು ಸದ್ಯಕ್ಕಂತೂ ಇಲ್ಲ ಎಂಬ ಸಂದೇಶ ಇದೆ. ಅಲ್ಲಿಗೆ ಶಿವಕುಮಾರ್ ಅವರಿಗೆ ಹಿನ್ನಡೆ.

ಸಿದ್ದರಾಮಯ್ಯ ಅವರ ಕುರ್ಚಿ ಅಲುಗಾಡುತ್ತಿದೆ ಎನ್ನುವಾಗ ದಲಿತ ಸಿಎಂ ಕೂಗು ಬೇರೆ. ದಿನನಿತ್ಯ ಇಲ್ಲಿ ಅದೇ ಸ್ಥಿತಿ. ನೇಪಥ್ಯಕ್ಕೆ ಸರಿದಿದ್ದ ದಲಿತ ಸಿಎಂ ಕೂಗು ಮತ್ತೆ ಮುನ್ನೆಲೆಗೆ ಬಂದಿದೆ. ಅತ್ತ ಶಿವಕುಮಾರ್ ಅವರಿಗೆ ಪ್ರತಿಯಾಗಿ ಸಿದ್ದರಾಮಯ್ಯ ಅವರ ಬಣದಿಂದ ಸಿಎಂ ಪಟ್ಟಕ್ಕೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೆಸರು ಬಲವಾಗುತ್ತಿದೆ. ಇದಕ್ಕೆ ಡಾ.ಪರಮೇಶ್ವರ್ ಪೂರಕ ಕಾರಣ ಕೊಡುತ್ತಿದಾರೆ. ಅವರಲ್ಲಿ ಆತ್ಮವಿಶ್ವಾಸ ನಿಚ್ಚಳವಾಗಿದೆ. ಇದಕ್ಕೆ ಕಾರಣ ಸಿಎಂ ಬಣದ ಬಲ.

ಅಧಿಕಾರ ಹಂಚಿಕೆಯ ಬಿಕ್ಕಟ್ಟು ಸ್ವಲ್ಪ ತಣ್ಣಗಾದಾಗಿತ್ತು. ಸಿಎಂ ಅವರ ಪುತ್ರ ಡಾ.ಯತೀಂದ್ರ ತಿದಿ ಊದಿ ರಾಡಿ ಮಾಡಿದ್ದು ಗುಟ್ಟಿನ ವಿಚಾರ ಅಲ್ಲ. ಸಿಎಂ ಆಪ್ತ, ಸಚಿವ ಡಾ.ಎಚ್.ಸಿ.ಮಹದೇವಪ್ಪ ಬಾಲ ನಾಯಿಯನ್ನೇ ಅಲ್ಲಾಡಿಸಬಾರದು ಎನ್ನುವ ಮೂಲಕ ಅಧಿಕಾರ ಹಂಚಿಕೆಯ ಬೆಂಕಿಗೆ ತುಪ್ಪ ಸುರಿದಿದ್ದರು. ಡಿಕೆಶಿ ಸಹೋದರ, ಡಿ.ಕೆ.ಸುರೇಶ್ ಕೆರಳಿದ್ದೂ ಅಲ್ಲೂ ಪ್ರಲಾಪಗಳಾಗಿದ್ದೂ ಹೊಸ ವಿಷಯವಲ್ಲ. ಅಂ-ದರೆ; ಅಧಿಕಾರ ಹಸ್ತಾಂತರದ ಒತ್ತಡ ಹೆಚ್ಚಾದಂತೆಲ್ಲಾ ಸಿದ್ದರಾಮಯ್ಯ ಬಣದವರು ಆಕ್ರಮಣಕಾರಿ ಧೋರಣೆ ತಳೆಯುವುದು, ಶಿವಕುಮಾರ್ ಬಣದ ಸಚಿವರು, ಶಾಸಕರು ತಿರುಗೇಟು ನೀಡುವುದು ಇದ್ದೇ ಇದೆ. ಇಷ್ಟೆಲ್ಲಾ ಗೊಂದಲಗಳಾಗುತ್ತಿರುವಾಗ ಹೈಕಮಾಂಡ್ ತನ್ನ ನಿರ್ಧಾರ ಪ್ರಕಟಿಸುತ್ತಿಲ್ಲೇಕೆ..? ಸಿಎಂ ಬಣ ಬೇರೆಯಾಗಬಹುದೆ? ಅಹಿಂದ ಮುನಿಸಿಕೊಳ್ಳುತ್ತದೆ ಎನ್ನುವ ಅಂಜಿಕೆಯೇ..? ಈ ಬಿಕ್ಕಟ್ಟಿಗೆ ಒಮ್ಮತದ ಸೂತ್ರ ಸಿದ್ಧವಾಗಿಲ್ಲವೇ..? ಇಂತಹ ಹತ್ತಾರು ಪ್ರಶ್ನೆಗಳೇ ಕಾಂಗ್ರೆಸ್ ಅನ್ನು ಡ್ಯಾಮೇಜ್ ಮಾಡುತ್ತವೆ ಎನ್ನುವ ಪ್ರಜ್ಞೆ ಹೈಕಮಾಂಡ್‌ಗೆ ಇಲ್ಲದಿಲ್ಲ. ಇದರ ನಡುವೆಯೇ ಸಿಎಂ ಅವರು ಸಾಮಾಜಿಕ ನ್ಯಾಯದ ದಿನ ಫೆಬ್ರುವರಿ 20 ರಂದು ಪತ್ರಿಕೆಯೊಂದರಲ್ಲಿ ಬರೆದ ಲೇಖನ ರಾಜಕೀಯ ವಲಯದಲ್ಲಿ ಹೆಚ್ಚು ಚರ್ಚೆಗೆ ಕಾರಣವಾಯಿತು. ಸಾಮಾಜಿಕ ಬದಲಾವಣೆಗೆ ಕೈಹಾಕಿದವರನ್ನು ಇತಿಹಾಸದಲ್ಲಿ ವ್ಯವಸ್ಥಿತವಾಗಿ ದಮನ ಮಾಡಲಾಗಿದೆ. ಈಗ ಅದೇ ಇತಿಹಾಸ ಪುನರಾವರ್ತನೆ ಆಗುತ್ತಿದೆ.

ತಮಗೆ ಹಿನ್ನಡೆಯಾದಾಗ ದೇವರಾಜ ಅರಸು ಅವರು ಕ್ರಾಂತಿ-ರಂಗ, ಬಂಗಾರಪ್ಪ ಅವರು ಕರ್ನಾಟಕ ಕಾಂಗ್ರೆಸ್ ಪಕ್ಷ ಎಂಬ ಪ್ರಾದೇಶಿಕ ಪಕ್ಷ ಕಟ್ಟಿ ಇತಿಹಾಸ ಸೇರಿದ್ದಾರೆ. ಜನತಾದಳದಿಂದ ಉಚ್ಚಾಟನೆಯಾದಾಗ ರಾಮಕೃಷ್ಣ ಹೆಗಡೆ ಅವರೂ ರಾಷ್ಟ್ರೀಯ ನವನಿರ್ಮಾಣ ವೇದಿಕೆ, ಲೋಕಶಕ್ತಿ ಸ್ಥಾಪಿಸಿದ್ದರು. ದೇವೇಗೌಡರು ಜಾತ್ಯತೀತ ಜನತಾದಳವನ್ನು ಹುಟ್ಟು ಹಾಕಿದ್ದರು. ಯಡಿಯೂರಪ್ಪ ಅವರು ಬಿಜೆಪಿ ತೊರೆದು ಕರ್ನಾಟಕ ಜನತಾಪಕ್ಷವನ್ನು ಗಟ್ಟಿಗೊಳಿಸಲು ಪ್ರಯತ್ನಿಸಿ ಚುನಾವಣೆಯಲ್ಲಿ ಸೋತಿದ್ದರು. ಆದರೆ, ಸಿದ್ದರಾಮಯ್ಯ ಈ ವಿಷಯದಲ್ಲಿ ಕೊಂಚ ಭಿನ್ನ. ಜೆಡಿಎಸ್‌ನಿಂದ ಎಲ್ಲರಂತೆ ಪ್ರಾದೇಶಿಕ ಪಕ್ಷ ಕಟ್ಟುವ ಸಾಹಸ ಮಾಡಲಿಲ್ಲ. ನೇರವಾಗಿ ಕಾಂಗ್ರೆಸ್ ಸೇರಿ ಆ ಪಕ್ಷದಲ್ಲಿ ತಮ್ಮ ಪಾರುಪತ್ಯವನ್ನು ಸ್ಥಾಪಿಸಿದರು ಮುಂದೆ ಅವರು ನಡೆದದ್ದೇ ಇತಿಹಾಸ..!

ದೇವರಾಜ ಅರಸು, ಬಂಗಾರಪ್ಪ ಅವರ ಅಧಿಕಾರ ಅವಧಿಯಲ್ಲಿ ಕಾಂಗ್ರೆಸ್ ಹೈಕಮಾಂಡ್ ಖದರೇ ಬೇರೆ. ನಾಯಕರು ಹೈಹೇಳಿದಂತೆ ಕೇಳುತ್ತಿದ್ದರು. ಈಗ ಹೈಕಮಾಂಡ್ ದುರ್ಬಲ. ಒಂದು ವೇಳೆ ಹೈಕಮಾಂಡ್ ಸಿಎಂ ಅವರನ್ನು ವಿಶ್ವಾಸಕ್ಕೆ ಪಡೆಯದೇ ಗದ್ದುಗೆಗೆ ಕೈ ಹಾಕಿದರೆ ಡೇಂಜರ್ ಗ್ಯಾರೆಂಟಿ. ಇದಕ್ಕಾಗಿಯೇ ದಿಲ್ಲಿಯಲ್ಲಿ ಮೌನ ಆವರಿಸಿದೆ. ರಾಜ್ಯದಲ್ಲಿ ಚೆಲ್ಲಾಟ ಶುರುವಾಗಿದೆ. ಹೇಳೋರ್ ಕೇಳೋರ್ ಯಾರ್..?

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)